

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜನವರಿ 12 ಸೋಮವಾರ 2026
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸಂಪುಟ: 46 | ಸಂಚಿಕೆ: 265 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4





ಸಿಎಂ ಕುರ್ಚಿಗೆ ಪೈಪೋಟಿ ಇಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಮಂಗಳೂರು, ಜ.11– ಆಡಳಿತಾರೂಢ ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರಕ್ಕಾಗಿ ಹೋರಾಟ ನಡೆಯುತ್ತಿದೆ ಎಂಬ ಊಹಾಪೋಹಗಳನ್ನು ತಳ್ಳಿಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಯಾವುದೇ ಹೋರಾಟ ನಡೆಯುತ್ತಿಲ್ಲ ಎಂದು ಪ್ರತಿಪಾದಿಸಿದರು.

ಯಾವುದೇ ಹೋರಾಟವಿಲ್ಲ, ನೀವು (ಮಾಧ್ಯಮಗಳು) ಅದನ್ನು ಸೃಷ್ಟಿಸುತ್ತೀರಿ. ಹೋರಾಟ ಎಲ್ಲಿದೆ. ಅನಗತ್ಯವಾಗಿ ನೀವು ಅಂತಹ ಪ್ರಶ್ನೆಗಳನ್ನು ಕೇಳುತ್ತೀರಿ ಎಂದು ಮಂಗಳೂರಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಕುರ್ಚಿಗಾಗಿ ಹೋರಾಟವು ಸಂಕ್ರಾಂತಿ ಹಬ್ಬದ ನಂತರ ಮತ್ತೊಮ್ಮೆ ಪ್ರಾರಂಭವಾಗಲಿದೆ ಎಂದು ಹೇಳುವ ಬಿಜೆಪಿಯ ಸಾಮಾಜಿಕ ಮಾಧ್ಯಮ ಪೋಸ್ಟ್‌ನ ಬಗ್ಗೆ ಅವರು ಪ್ರತಿಕ್ರಿಯಿಸಿದರು.

ದ್ವೇಷ ಭಾಷಣ ತಿರಸ್ಕರಿಸಿಲ್ಲ: ದ್ವೇಷ ಭಾಷಣ ಮಸೂದೆ ಕುರಿತು ರಾಜ್ಯಪಾಲರನ್ನು ಭೇಟಿ ಮಾಡಲು ಬಿಜೆಪಿ ಯೋಜಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿಎಂ, ಮಸೂದೆ ಯನ್ನು ಶಾಸಕಾಂಗ ಅಂಗೀಕರಿಸಿದೆ. ರಾಜ್ಯಪಾಲರು ಅದನ್ನು ತಿರಸ್ಕರಿಸಿಲ್ಲ ಅಥವಾ ವಾಪಸ್ ಕಳುಹಿಸಿಲ್ಲ ಅಥವಾ ಅದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿಲ್ಲ. ನೋಡೋಣ, ಅವರು ಯಾವಾಗ ಕರೆದರೂ ನಾನು ಹೋಗಿ ಅವರಿಗೆ (ರಾಜ್ಯಪಾಲರಿಗೆ) ವಿವರಿಸುತ್ತೇನೆ ಎಂದು ಹೇಳಿದರು. ಇತ್ತೀಚೆಗೆ ಬಳ್ಳಾರಿಯಲ್ಲಿ ನಡೆದ ಘರ್ಷಣೆಯಲ್ಲಿ ವ್ಯಕ್ತಿಯೊಬ್ಬ ಸಾವಿಗೀಡಾಗಿದ್ದಕ್ಕೆ ಸಂಬಂಧಿಸಿದಂತೆ ಬಿಜೆಪಿ ಬಳ್ಳಾರಿಯಿಂದ ಬೆಂಗಳೂರಿಗೆ ನಡೆಸಲು ಉದ್ದೇಶಿಸಿರುವ ಪಾದಯಾತ್ರೆ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ, ಯಾರು ಮಾಡಬಾರದು ಎಂದು ಹೇಳಿದರು. ಅವರು ಪಾದಯಾತ್ರೆ ನಡೆಸಲಿ ಎಂದು ಹೇಳಿದರು. ನಾವು (ಕಾಂಗ್ರೆಸ್) ಹಿಂದೆ ■ 6ನೇ ಪುಟಕ್ಕೆ

ವರಿಷ್ಠರ ಮೇಲೆ ಡಿಕೆಶಿಗೆ ಅತೀವ ವಿಶ್ವಾಸ



ಬೆಂಗಳೂರು: ರಾಜಕೀಯ ಹಿನ್ನೆಲೆ ಇಲ್ಲದ ಕುಟುಂಬದಿಂದ ಬಂದು ಈ ಹಂತಕ್ಕೆ ತಲುಪಿದ್ದೇನೆ. ಮುಂದೆಯೂ ಪಕ್ಷದವರು ನನ್ನ ಬಗ್ಗೆ ತೀರ್ಮಾನ ಮಾಡುತ್ತಾರೆ ಎಂಬ ನಂಬಿಕೆ, ಆತ್ಮವಿಶ್ವಾಸ ನನಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಬೆಂಗಳೂರು ಅರಮನೆ ಮೈದಾನದಲ್ಲಿ ಉದ್ಯಮಿ ಒಕ್ಕಲಿಗ ಎಕ್ಸ್ಪೋ–2026 ಕಾರ್ಯಕ್ರಮದಲ್ಲಿ ಮಾತನಾಡಿ, ಮುಖ್ಯಮಂತ್ರಿ ಕುರ್ಚಿ ವಿಚಾರವಾಗಿ ಹೈಕಮಾಂಡ್ ಸೂಕ್ತ ತೀರ್ಮಾನಕ್ಕೆ ಬರಲಿದೆ ಎಂಬುದನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ಅಧಿವೇಶನದಲ್ಲಿ ಒಮ್ಮೆ ಯಡಿಯೂರಪ್ಪ ಅವರಿಗೆ ಯಶಸ್ಸಿನ ಬಗ್ಗೆ ಒಂದು ಮಾತು ಹೇಳಿದ್ದೆ. ನಾವು ಬದುಕಿನಲ್ಲಿ ಯಶಸ್ಸು ಸಾಧಿಸಬೇಕಾದರೆ ನಮ್ಮಲ್ಲಿ ಧರ್ಮರಾಯನ ಧರ್ಮತ್ವ, ಕರ್ಣನ ದಾನತ್ವ, ಅರ್ಜುನನ ಗುರಿ, ವಿಧುರನ ನೀತಿ, ಭೀಮನ ಬಲ, ಕೃಷ್ಣನ ತಂತ್ರ ಇರಬೇಕು. ಆಗ ಮಾತ್ರ ಯಶಸ್ಸು ಸಾಧಿಸಲು ಸಾಧ್ಯ ಎಂದು. ನಾನು ರಾಜಕೀಯವಾಗಿ ಸಾಕಷ್ಟು ಏಟು ತಿಂದಿದ್ದೇನೆ. ನನ್ನನ್ನು ಬಂಡೆ ಎನ್ನುತ್ತಾರೆ. ಬಂಡೆ ಪ್ರಕೃತಿ, ಕಡಿದರೆ ಆಕೃತಿ, ಪೂಜಿಸಿದರೆ ಸಂಸ್ಕೃತಿ. ಚಿನ್ನಕ್ಕೆ ಹೆಚ್ಚು ಶಾಖ ಕೊಟ್ಟು ಕರಗಿಸಿದರೆ ಮಾತ್ರ ಆಭರಣ ಮಾಡಲು ಸಾಧ್ಯ ಆದ್ದರಿಂದ ಯಾವತ್ತೂ ತಮ್ಮನ್ನು ತಾವು ನಿಷ್ಪ್ರಯೋಜಕ, ಸಣ್ಣವನು ಎಂದು ಭಾವಿಸಬಾರದು. ■ 6ನೇ ಪುಟಕ್ಕೆ

'ಕ್ಲೀನ್ ಮೈಸೂರ್, ಫಿಟ್ ಮೈಸೂರ್' ನಡಿಗೆ



ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ನಗರ ಪಾಲಿಕೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ಜಿಮ್ ಅಸೋಸಿಯೇಷನ್, ಜೆಎಸ್‌ಎಸ್‌ಸಿಎಸ್‌ಆರ್ ಸಂಯುಕ್ತವಾಗಿ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ 'ಕ್ಲೀನ್ ಮೈಸೂರ್, ಫಿಟ್ ಮೈಸೂರ್' 5 ಕಿ.ಮೀ. ವಾಕಥಾನ್‌ನಲ್ಲಿ ಸಾವಿರಾರು ಮಂದಿ ಪಾಲ್ಗೊಂಡರು. ಸಚಿವ ಡಾ. ಹೆಚ್.ಸಿ. ಮಹದೇವಪ್ಪ ನೇತೃತ್ವದಲ್ಲಿ ಜನಪ್ರತಿನಿಧಿಗಳು ಹಾಗೂ ಗಣ್ಯರು, ಅಧಿಕಾರಿಗಳು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. / ಸಚಿತ್ರ ವರದಿ ಪುಟ–7

ಫೆಬ್ರವರಿಯಲ್ಲಿ ಪಡಿತರ ಚೀಟಿಗೆ ಅರ್ಜಿ ಆಹ್ವಾನ

ರಾಜ್ಯದಲ್ಲಿವೆ ಶೇ. 75 ಬಿಪಿಎಲ್ ಕಾರ್ಡ್



ಕಲಬುರಗಿ: ಯಾವುದೇ ರಾಜ್ಯದಲ್ಲಿ ಜನಸಂಖ್ಯೆಯ ಶೇ 50ಕ್ಕಿಂತ ಅಧಿಕ ಬಿಪಿಎಲ್ ಕಾರ್ಡ್‌ಗಳು ಇರಬಾರದು ಎಂಬ ನಿಯಮವಿದೆ. ಆದರೂ ಕರ್ನಾಟಕದಲ್ಲಿ ಶೇ 75ರಷ್ಟು ಕಾರ್ಡ್‌ಗಳಿವೆ. ಮಹಾ ರಾಷ್ಟ್ರ ನಂತರ ಕರ್ನಾಟಕ ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯವಾಗಿದ್ದರೂ ಅತಿ ಹೆಚ್ಚು ಬಿಪಿಎಲ್ ಕಾರ್ಡ್‌ಗಳಿರುವುದು ಅಚ್ಚರಿ ತಂದಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ ಸದಸ್ಯರು ಮದುವೆಯಾದ ಬಳಿಕ ಬೇರೆ ಇದ್ದೇವೆ ಎಂದು ಮತ್ತೊಂದು ಕಾರ್ಡ್‌ಗೆ ಅರ್ಜಿ ಸಲ್ಲಿಸುತ್ತಾರೆ. ಹೀಗಾಗಿ ಎರಡೂ ಕಾರ್ಡ್‌ಗಳಿಗೆ ಪಡಿತರ ವಿತರಣೆ ಶುರುವಾಗುತ್ತದೆ. ಅನರ್ಹ ಕಾರ್ಡ್‌ಗಳನ್ನು ಎಪಿಎಲ್‌ಗೆ ಬದಲಾಯಿಸುವ ಕಾರ್ಯ ನಡೆದಿದೆ. ಹಾಗೆಂದು ಹೊಸ ಅರ್ಜಿಗಳ ಸ್ವೀಕಾರವನ್ನು ನಿಲ್ಲಿಸಿಲ್ಲ. ವೈದ್ಯಕೀಯ ಕಾರಣಗಳಿಗಾಗಿ ■ 6ನೇ ಪುಟಕ್ಕೆ

ನಾಮಧಾರಿಗೌಡರ ಹಿಂದುಳಿದ ವರ್ಗ 2ಎಗೆ ಸೇರಿಸಲು ನೆರವು

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಭರವಸೆ

ಕೆ.ಆರ್.ನಗರ, ಜ.11– ನಾಮಧಾರಿ ಗೌಡ ಸಮುದಾಯಕ್ಕೆ ಮುಂಬರುವ ದಿನಗಳಲ್ಲಿ ರಾಜಕೀಯವಾಗಿ ಸ್ಥಾನಮಾನ ಕಲ್ಪಿಸುವುದರ ಜೊತೆಗೆ ಹಿಂದುಳಿದ ವರ್ಗ 2ಎ ಪಟ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರೆ, ಅದಕ್ಕೆ ಶೀಘ್ರ ಅನುಮೋದನೆ ಕೊಡಿಸುವುದಾಗಿ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವರೂ ಆದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದ್ದಾರೆ.

ಪಟ್ಟಣದ ಅಖಿಲ ನಾಮಧಾರಿಗೌಡ ಸಮುದಾಯ ಭವನದಲ್ಲಿ ತಾಲೂಕು ಅಖಿಲ ನಾಮಧಾರಿಗೌಡ ಸಂಘದ ವತಿಯಿಂದ ಭಾನುವಾರ ಆಯೋಜಿಸಿದ್ದ ಸಮುದಾಯ ಭವನದ ಬೆಳ್ಳಿ ಹಬ್ಬ ಸಂಭ್ರಮಾಚರಣೆ ಉದ್ಘಾಟಿಸಿ ಮಾತನಾಡಿದರು.

ಅತೀ ಸೂಕ್ಷ್ಮಾತಿ ಸೂಕ್ಷ್ಮ ಸಮಾಜಗಳನ್ನು ರಾಜಕೀಯ ಓಟ್ ಬ್ಯಾಂಕ್‌ಗಾಗಿ ಬಳಸಿಕೊಂಡು, ಬಳಿಕ ರಾಜಕೀಯವಾಗಿ ಯಾವುದೇ ಸ್ಥಾನಮಾನಗಳನ್ನು ನೀಡದೇ ವಂಚಿಸಲಾಗುತ್ತಿದೆ. ಪ್ರಸ್ತುತ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಶಕ್ತಿ ತುಂಬುವ ಬದಲು ಅವರನ್ನು ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ಧ್ವನಿ ಇಲ್ಲದ ಸಮಾಜಕ್ಕೆ ಧ್ವನಿಯಾಗಿ ಜೆಡಿಎಸ್ ಪಕ್ಷ ಸದಾ ನಿಂತಿದೆ. ಉಪ್ಪಾರ ಸಮಾಜದ ಮುಖಂಡರೊಬ್ಬರನ್ನು ವಿಧಾನ ಪರಿಷತ್ ಸದಸ್ಯರಾಗಿ ಮಾಡಿ ರಾಜಕೀಯವಾಗಿ ಸ್ಥಾನಮಾನ ನೀಡಿದ್ದೇವೆ ಎಂದು ಸ್ಮರಿಸಿದರು. ರಾಜ್ಯದಲ್ಲಿ ನಾಮಧಾರಿ ಗೌಡ ಸಮುದಾಯ ಕಡಿಮೆ ಸಂಖ್ಯೆಯಲ್ಲಿದ್ದು ಸಮಾಜವನ್ನು ದೊಡ್ಡಮಟ್ಟದಲ್ಲಿ ಗುರುತಿಸಿ ರಾಜಕೀಯ ಸ್ಥಾನಮಾನಗಳನ್ನು ನೀಡಿಲ್ಲ ಎಂಬ ನೋವು ಸಮುದಾಯದಲ್ಲಿ ಇದೆ. ಹಾಗಾಗಿ ಮುಂದಿನ ದಿನಗಳಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಿ, ತಪ್ಪು ಸರಿಪಡಿಸುತ್ತೇನೆ ಎಂದು ಭರವಸೆ ನೀಡಿದರು.

ನಾಮಧಾರಿಗೌಡ ಸಮಾಜವನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲು ■ 6ನೇ ಪುಟಕ್ಕೆ



ನಾಮಧಾರಿಗೌಡರ ಸಮುದಾಯ ಭವನದ ಬೆಳ್ಳಿ ಹಬ್ಬ ಸಂಭ್ರಮವನ್ನು ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಿದರು. ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಶಾಸಕ ಡಿ.ರವಿಶಂಕರ್ ಇತರರು ಉಪಸ್ಥಿತರಿದ್ದರು.

> ಕೆಲವರು ಹಿಂದುಳಿದ ವರ್ಗದ ನಾಯಕರು ಎಂದು ಬೋರ್ಡ್ ಹಾಕಿಕೊಳ್ಳುತ್ತಾರೆ. ಆದರೆ ಅವರು ಎಷ್ಟು ಹಿಂದುಳಿದ ವರ್ಗದ ನಾಯಕರನ್ನು ಬೆಳೆಸಿದ್ದಾರೆ. ಅಂತಹ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ನೀಡಿದ್ದಾರ, ನಾಮಧಾರಿ ಸಮುದಾಯಕ್ಕೆ ಸಿಎ ನಿವೇಶನ ದೊರಕಿಸಲು ಶಿಫಾರಸ್ಸು ಮಾಡುವುದರ ಜೊತೆಗೆ ಶೈಕ್ಷಣಿಕ ಸಂಸ್ಥೆ ಸ್ಥಾಪಿಸಲು ಒಂದು ಕೋಟಿ ಅನುದಾನ ಕೊಡಿಸಲಾಗುವುದು.
>
> – ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ

ಪಿಎಸ್‌ಎಲ್‌ವಿ–ಸಿ62 ಉಡಾವಣೆಗೂ ಮುನ್ನ ತಿಮ್ಮಪ್ಪನಿಗೆ ಪ್ರಾರ್ಥನೆ ಸಲ್ಲಿಸಿದ ಇಸ್ರೋ ಅಧ್ಯಕ್ಷ



ಬೆಂಗಳೂರು, ಜ.11– ಪಿಎಸ್‌ಎಲ್‌ವಿ–ಸಿ62 ರಾಕೆಟ್ ಉಡಾವಣೆಗೆ ಮುನ್ನ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಅಧ್ಯಕ್ಷ ವಿ. ನಾರಾಯಣನ್, ತಿರುಪತಿ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಜನವರಿ 12ರಂದು ಬೆಳಿಗ್ಗೆ 10.17ಕ್ಕೆ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿರುವ ಮೊದಲ ಉಡಾವಣಾ ಪ್ಯಾಡ್ (FLP)ನಿಂದ ಪಿಎಸ್‌ಎಲ್‌ವಿ–ಸಿ62 ಮಿಷನ್‌ನೊಂದಿಗೆ ಬಾಹ್ಯಾಕಾಶ ಉಡಾವಣೆಗಳನ್ನು ಪುನರಾರಂಭಿಸಲು ಸಜ್ಜಾಗಿದೆ. ಈ ಉಡಾವಣೆಯು ಪೋಲಾರ್ ■ 6ನೇ ಪುಟಕ್ಕೆ

ಬಹುರೂಪಿ ಚಿತ್ರೋತ್ಸವಕ್ಕೆ ಚಾಲನೆ

ಸಿನಿಮಾ ತಯಾರಿಕೆಯಲ್ಲೂ ಪ್ರಜಾಪ್ರಭುತ್ವ ಪ್ರಕ್ರಿಯೆ ಅಡಗಿದೆ; ಹಿರಿಯ ಸಾಹಿತಿ ಬರಗೂರು ಅಭಿಮತ

ಮೈಸೂರು, ಜ.11(ಎಂಟಿವೈ)– ಸಮೂಹ ಮಾಧ್ಯಮವಾಗಿರುವ ಸಿನಿಮಾಗಳು ಎಷ್ಟರ ಮಟ್ಟಿಗೆ ಪ್ರಜಾಪ್ರಭುತ್ವ ಆಶಯಗಳನ್ನು ಪ್ರತಿನಿಧಿಸುತ್ತಾ, ಸಾಮಾಜಿಕ ಕಾಳಜಿ ಹೊಂದಿವೆ ಎಂದು ಪರಾಮರ್ಶಿಸಬೇಕಾಗಿದೆ ಎಂದು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ರಂಗಾಯಣದ ಭೂಮಿಗೀತ ಸಭಾಂಗಣದಲ್ಲಿ ಭಾನುವಾರ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಆಯೋಜಿಸಿದ್ದ ಬಹುರೂಪಿ ಚಲನಚಿತ್ರೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಈ ಸಾಲಿನ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವವನ್ನು 'ಬಹುರೂಪಿ ಬಾಬಾ ಸಾಹೇಬ್' ಶೀರ್ಷಿಕೆಡಿ ಆಯೋಜಿಸಲಾಗಿದೆ. ಈ ಮೂಲಕ ಡಾ. ಅಂಬೇಡ್ಕರ್ ಆಶಯವನ್ನು ಜನರಿಗೆ ತಿಳಿಸುವ ಉದ್ದೇಶ ಹೊಂದಲಾಗಿದೆ. 1949ರ ನ.25ರಂದು ಅಂಬೇಡ್ಕರ್ ಅವರು ಮೂರು ರೀತಿಯ ಪ್ರಜಾಪ್ರಭುತ್ವ ಇರುವುದಾಗಿ ಹೇಳಿದರು. ರಾಜಕೀಯ ಪ್ರಜಾಪ್ರಭುತ್ವ, ಆರ್ಥಿಕ ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ಪ್ರಜಾಪ್ರಭುತ್ವದ ಬಗ್ಗೆ ಪ್ರಸ್ತಾಪ ಮಾಡಿದರು. ಆದರೆ ರಾಜಕೀಯ ಮತ್ತು ಆರ್ಥಿಕ ಪ್ರಜಾಪ್ರಭುತ್ವ ಒಂದಕ್ಕೊಂದು ಪೂರಕವಾಗಿದ್ದು, ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದರು. ನಾವು ಇಂದು ಸಂವಿಧಾನದ ಬಗ್ಗೆ ಹೆಚ್ಚು ಮಾತನಾಡುತ್ತೇವೆ. ಆದರೆ, ಸಂವಿಧಾನದ ಆಶಯವನ್ನಾಗಲೀ ಅಥವಾ ಸಾಮಾಜಿಕ ಪ್ರಜಾಪ್ರಭುತ್ವದ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಏನು ಕ್ರಮ ಕೈಗೊಂಡಿದ್ದೇವೆ ಎಂಬುದ ಪರಾಮರ್ಶಿಸಬೇಕಾಗಿದೆ. ಸಂವಿಧಾನದ ಆಶಯಕ್ಕೂ ■ 6ನೇ ಪುಟಕ್ಕೆ



ರಂಗಾಯಣದ ಭೂಮಿಗೀತದಲ್ಲಿ ಬಹುರೂಪಿ ಚಲನಚಿತ್ರೋತ್ಸವಕ್ಕೆ ಚಿತ್ರ ನಿರ್ದೇಶಕರೂ ಆದ ಬರಹಗಾರ ಬರಗೂರು ರಾಮಚಂದ್ರಪ್ಪ ಚಾಲನೆ ನೀಡಿ, ಮಾತನಾಡಿದರು.

ಕೇರಳದಂತೆ ಮಿನಿ ಚಿತ್ರಮಂದಿರ ನಿರ್ಮಾಣಕ್ಕೆ ರಾಮಚಂದ್ರಪ್ಪ ಮನವಿ

ಮೈಸೂರು, ಜ.11(ಎಂಟಿವೈ)– ಕನ್ನಡ ಚಿತ್ರರಂಗದಲ್ಲೂ ಸೃಜನಶೀಲ ಸಿನಿಮಾಗಳ ಪ್ರೋತ್ಸಾಹಿಸಲು ಕೇರಳ ಮಾದರಿಯಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಮಿನಿ ಚಿತ್ರಮಂದಿರಗಳನ್ನು ಸ್ಥಾಪನೆ ಮಾಡಬೇಕು ಎಂದು ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದ್ದಾರೆ.

ಬಹುರೂಪಿ ಚಲನಚಿತ್ರೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದಲ್ಲಿ ಸೃಜನಾತ್ಮಕ ಚಲನಚಿತ್ರಗಳನ್ನು ಪ್ರೋತ್ಸಾಹಿಸಲು ಕ್ರಮ ಕೈಗೊಳ್ಳಬೇಕಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಮಿನಿ ಚಿತ್ರಮಂದಿರಗಳನ್ನು ಸ್ಥಾಪಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಳೆದ ವರ್ಷವೇ ಭೇಟಿ ಮಾಡಿ ಮನವಿ ಸಲ್ಲಿಸಲಾಗಿತ್ತು. ಅದಕ್ಕೆ ಸಿಎಂ ಸಮ್ಮತಿದ್ದರು.

ಕಳೆದ ವರ್ಷ ಬಜೆಟ್‌ನಲ್ಲಿ ಇದರ ಬಗ್ಗೆ ಘೋಷಣೆ ಮಾಡುತ್ತಾರೆಂಬ ನಿರೀಕ್ಷೆಯಲ್ಲಿದ್ದೆವು. ಆದರೆ ಪ್ರಸ್ತಾಪವಾಗಲಿಲ್ಲ. ಈ ವರ್ಷವಾದರೂ ಇದನ್ನು ಅನುಷ್ಠಾನಗೊಳಿಸಬೇಕು. ಈ ವಿಚಾರವಾಗಿ ಮತ್ತೆ ಮುಖ್ಯಮಂತ್ರಿಗಳಿಗೆ ಮನವಿ ನೀಡಲಾಗುತ್ತದೆ ಎಂದರು.

ಕೇರಳದಲ್ಲಿ ಚಲನಚಿತ್ರ ಅಕಾಡೆಮಿಯಿಂದ 100 ರಿಂದ 150 ಜನ ಕುಳಿತು ನೋಡುವಂತಹ 100 ಮಿನಿ ಚಿತ್ರಮಂದಿರಗಳನ್ನು ಸ್ಥಾಪನೆ ಮಾಡಿದ್ದಾರೆ. ಇದರಿಂದ ಅಲ್ಲಿ ಉತ್ತಮ ಹಾಗೂ ಸೃಜನಾತ್ಮಕ ಚಲನಚಿತ್ರ ನಿರ್ಮಾಣಕ್ಕೆ ಪ್ರೋತ್ಸಾಹ ದೊರೆಯುತ್ತಿದೆ. ಹಾಗಾಗಿ ಉತ್ತಮ ಚಲನಚಿತ್ರಗಳು ಮೂಡಿ ಬರುತ್ತಿವೆ. ಆ ಕಾರಣದಿಂದ ರಾಜ್ಯದಲ್ಲೂ ಮಿನಿ ಚಿತ್ರಮಂದಿರದ ಸ್ಥಾಪನೆ ಅಗತ್ಯವಾಗಿದೆ. ಅಲ್ಲಿನಂತೆ ಒಂದೇ ಬಾರಿಗೆ 100 ಮಿನಿ ಚಿತ್ರಮಂದಿರ ಸ್ಥಾಪನೆ ಮಾಡಿ ಎಂದು ಒತ್ತಾಯಿಸುವುದಿಲ್ಲ. ಹಂತ ಹಂತವಾಗಿ ಸ್ಥಾಪಿಸಲು ■ 6ನೇ ಪುಟಕ್ಕೆ



ಮೇಜರ್ ಸ್ವಾತಿ ಶಾಂತಕುಮಾರ್‌ಗೆ ವಿಶ್ವಸಂಸ್ಥೆ ಪ್ರಶಸ್ತಿ ಗರಿ

ಬೆಂಗಳೂರು, ಜ.11– ದಕ್ಷಿಣ ಸೂಡಾನ್‌ನಲ್ಲಿ ನಡೆಯುತ್ತಿರುವ ಯುಎನ್ ಮಿಷನ್‌ನಲ್ಲಿ ಉತ್ತಮ ಸೇವೆ ಸಲ್ಲಿಸಿದ ಬೆಂಗಳೂರು ಮೂಲದ ಮೇಜರ್ ಸ್ವಾತಿ ಶಾಂತಕುಮಾರ್ ಅವರಿಗೆ ವಿಶ್ವಸಂಸ್ಥೆ(ಯುಎನ್) ಸೆಕ್ರೆಟರಿ ಜನರಲ್ ಪ್ರಶಸ್ತಿ ಲಭಿಸಿದೆ.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ಬೆಂಗಳೂರಿನ ಭಾರತೀಯ ಸೇನಾಧಿಕಾರಿ ಮೇಜರ್ ಸ್ವಾತಿ ಶಾಂತ ಕುಮಾರ್ ಅವರನ್ನು 2025ರ ಪ್ರತಿಷ್ಠಿತ ಪ್ರಧಾನ ಕಾರ್ಯದರ್ಶಿ ಪ್ರಶಸ್ತಿ ವಿಜೇತರು ಎಂದು ಅಧಿಕೃತವಾಗಿ ಘೋಷಿಸಿದ್ದಾರೆ.

'ಸಮಾನ ಪಾಲುದಾರರು–ಶಾಶ್ವತ ಶಾಂತಿ' ಯೋಜನೆಗಾಗಿ 2025ರ ಪ್ರಧಾನ ಕಾರ್ಯದರ್ಶಿ ಪ್ರಶಸ್ತಿಯನ್ನು ಸ್ವಾತಿ ಅವರು ಗೆದ್ದಿದ್ದಾರೆ. ವಿಶ್ವಾದ್ಯಂತ ಎಲ್ಲಾ ಯುಎನ್ ಶಾಂತಿಪಾಲನಾ ಮಿಷನ್‌ಗಳು ಮತ್ತು ಏಜೆನ್ಸಿಗಳಿಂದ ಬಂದ ನಾಮ ನಿರ್ದೇಶನಗಳ ಪೈಕಿ ಫೈನಲ್‌ಗೆ ನಾಲ್ಕು ತಂಡಗಳು ಆಯ್ಕೆಯಾಗಿದ್ದವು. ಈ ತಂಡ



ಸ್ವಾತಿ ಶಾಂತಕುಮಾರ್

ಗಳ ಪೈಕಿ ಭಾರತೀಯ ತಂಡ ಅತೀ ಹೆಚ್ಚು ಮತಗಳನ್ನು ಪಡೆದು ವಿಜೇತವಾಗಿದೆ.

ಮೇಜರ್ ಸ್ವಾತಿ ಅವರ ನೇತೃತ್ವದಲ್ಲಿ ಭಾರತೀಯ ತಂಡವು ಗ್ರಾಮೀಣ ಮಟ್ಟದಲ್ಲಿ ಶಾಂತಿ ಸ್ಥಾಪನೆಗೆ ಅಪಾರ ಕೊಡುಗೆ ನೀಡಿದ್ದು, ದೂರದ ಪ್ರದೇಶಗಳಲ್ಲಿ ಸಣ್ಣ–ದೊಡ್ಡ ಪ್ಯಾಟ್ರೋಲಿಂಗ್, ನದಿ ಪ್ರದೇಶದ ಪೇಟ್ರೋಲ್ ಮತ್ತು ಡೈನಾಮಿಕ್ ಏರ್ ಪ್ಯಾಟ್ರೋಲ್‌ಗಳನ್ನು ಯಶಸ್ವಿಯಾಗಿ ನಡೆಸಿ, ಸಂಘರ್ಷ ಪೀಡಿತ ದೇಶದಲ್ಲಿ 5,000ಕ್ಕೂ ಹೆಚ್ಚು ಮಹಿಳೆಯರಿಗೆ ಸುರಕ್ಷತೆ ಒದಗಿಸಿದೆ. ಇದರಿಂದ ಮಹಿಳೆಯರ ಸಮುದಾಯದಲ್ಲಿ ಭಾಗವಹಿಸುವಿಕೆ ಹೆಚ್ಚಾಗಿ, ನಂಬಿಕೆ ಮತ್ತು ಸಂವಹನ ಬಲಗೊಂಡಿದೆ. ಸದ್ಯ ದಕ್ಷಿಣ ಸುಡಾನ್‌ನಲ್ಲಿ ಸ್ವಾತಿ ಶಾಂತಕುಮಾರ್ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಿ ಅವರ 'ಸಮಾನ ಪಾಲುದಾರರು–ಶಾಶ್ವತ ಶಾಂತಿ (#Equal PartnersLastingPeace)' ಎಂಬ ಯೋಜನೆಯು ಲಿಂಗ–ಪ್ರತಿಕ್ರಿಯಾಶೀಲ ಶಾಂತಿಪಾಲನೆಗಾಗಿ ಹೊಸ ಜಾಗತಿಕ ಮಾನದಂಡವನ್ನು ನಿಗದಿಪಡಿಸಿದೆ.

ವಿಶಾಲವಾದ ಸಾಂಸ್ಥಿಕ ಬೆಂಬಲದ ಪ್ರದರ್ಶನದಲ್ಲಿ, ಅವರ ಉಪಕ್ರಮವು ಜಗತ್ತಿನ ಮೂಲೆ ಮೂಲೆಯಿಂದ ಬಂದ ಯುಎನ್ ಸಿಬ್ಬಂದಿಯನ್ನು ಒಳಗೊಂಡ ಜಾಗತಿಕ ಮತದಾನ ಪ್ರಕ್ರಿಯೆಯಲ್ಲಿ ನಾಲ್ಕು ಅಂತಿಮ ಸ್ಪರ್ಧಿಗಳಲ್ಲಿ ಅತ್ಯಧಿಕ ಮತಗಳನ್ನು ಗಳಿಸಿದೆ.

ಕೇರಳದ ಕನ್ನಡ ಶಾಲೆಗಳಲ್ಲಿ ಮಲೆಯಾಳಂ ಕಡ್ಡಾಯ ಖಂಡಿಸಿ ಮೈಸೂರಲ್ಲಿ ವಾಟಾಳ್ ಪ್ರತಿಭಟನೆ

ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಲು ಆಗ್ರಹಿಸಿ ಇಂದು ರಾಜಭವನ ಮುತ್ತಿಗೆ ಘೋಷಣೆ

ಮೈಸೂರು, ಜ.11(ಎಂಕೆ)– ಕಾಸರಗೋಡು ಶೇಕಡ ನೂರಕ್ಕೆ ನೂರರಷ್ಟು ಕರ್ನಾಟಕಕ್ಕೆ ಸೇರಿದ್ದು, ಕನ್ನಡ ಭಾಷೆ ವಿಚಾರದಲ್ಲಿ ಮಲಯಾಳಂ ಹೇರಿಕೆ ಅಕ್ಷಮ್ಯ ಅಪರಾಧ. ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸುವವರೆಗೂ ಹಂತ ಹಂತವಾಗಿ ಹೋರಾಟ ನಡೆಸಲಿದ್ದು, ಮೊದಲ ಹಂತವಾಗಿ ನಾಳೆ(ಜ.12) ರಾಜಭವನಕ್ಕೆ ಮುತ್ತಿಗೆ ಹಾಕುತ್ತೇವೆ ಎಂದು ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಹೇಳಿದರು.



ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಕೇರಳದ ಕನ್ನಡ ಶಾಲೆಗಳಲ್ಲಿ ಮಲಯಾಳಂ ಹೇರಿಕೆ ಖಂಡಿಸಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಭಾಷಾ ಮಸೂದೆ ಮೂಲಕ ಕೇರಳ ಸಿಎಂ ಪಿಣರಾಯಿ ವಿಜಯನ್ ಕಾಸರಗೋಡಿನ ಕನ್ನಡ ಶಾಲೆಗಳಲ್ಲಿ ಮಲಯಾಳಂ ಹೇರಿಕೆಯನ್ನು ಖಂಡಿಸಿ ಭಾನುವಾರ ಪ್ರತಿಭಟನೆ ನಡೆಸಿದ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕಾಸರಗೋಡು ಮಲಯಾಳಿಗಳದ್ದಲ್ಲ ಕನ್ನಡಿಗರ ಸ್ವತ್ತು. ಹಾಗೆಯೇ ತಮಿಳುನಾಡಿನಿಂದ ತಾಳವಾಡಿ ಮತ್ತು ಹೊಸೂರು, ಮಹಾರಾಷ್ಟ್ರದಿಂದ ಸೊಲ್ಲಾಪುರ ಮತ್ತು ಅಕ್ಕಲಕೋಟೆ, ಆಂಧ್ರದಿಂದ ಮಡಕಶಿರಾ ಹಾಗೂ ಶ್ರೀ ರಾಘವೇಂದ್ರ ಸ್ವಾಮಿ ಮಠ ಇರುವ ಶ್ರೀಶೈಲವು (ಮಂತ್ರಾಲಯ) ಕೂಡ ಕರ್ನಾಟಕಕ್ಕೆ ಸೇರಲೇಬೇಕು ಎಂದು ಆಗ್ರಹಿಸಿದರು.

1956ರ ನ.1ರಂದು ರಾಜ್ಯ ಪುನರ್ ವಿಂಗಡಣಾ ಸಮಿತಿ ಅಧ್ಯಕ್ಷ ಫಜಲ್ ಆಲಿ ಮತ್ತು ಕೆ.ಎಂ.ಫಣಿಕ್ಕರ್ ಕೇರಳದವರು. ಆ ಸಂದರ್ಭದಲ್ಲಿ ಫಣಿಕ್ಕರ್‌ಗೋಸ್ಕರ ಕಾಸರಗೋಡು ಕೇರಳದಲ್ಲಿ ಉಳಿಯಿತು. ರಾಜ್ಯ ಸರ್ಕಾರ ಅಂದೇ ಕೇರಳ ಸರ್ಕಾರದೊಂದಿಗೆ ಮಾತನಾಡಿದ್ದರೆ ಕರ್ನಾಟಕಕ್ಕೆ ಬಿಟ್ಟುಕೊಡುತ್ತಿದ್ದರು. ಹಾಗೆಯೇ ಮಹಾಜನ್ ವರದಿಯಲ್ಲಿ ಕಾಸರಗೋಡು, ಬೆಳಗಾವಿ, ಸೊಲ್ಲಾಪುರ ಮತ್ತು ಅಕ್ಕಲಕೋಟೆ ಕರ್ನಾಟಕಕ್ಕೆ ಸೇರಿದ್ದು ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಹಾಗಾಗಿ ಕಾಸರಗೋಡು ಕನ್ನಡಿಗರದ್ದಾಗಿದ್ದು, ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿ ಕರ್ನಾಟಕಕ್ಕೆ ಕಾಸರಗೋಡನ್ನು ಸೇರಿಸುವವರೆಗೂ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಈಗಾಗಲೇ ಮಂಗಳೂರು–ಕಾಸರಗೋಡು ಹೆದ್ದಾರಿ ಬಂದ್ ಮಾಡಿ ಕನ್ನಡಪರ ಸಂಘಟನೆಗಳು ಹೋರಾಟಕ್ಕಿಳಿದಿವೆ. ವೈನಾಡಿನ ಸುಲ್ತಾನ್ ಬತ್ತೇರಿ ಬಳಿಯೂ ಹೋರಾಟ ನಡೆಸಿ, ಕಾಸರಗೋಡಿಗೆ ಮುತ್ತಿಗೆ ಹಾಕಲಾಗುವುದು. ಇದಕ್ಕೆ ಎಲ್ಲರ ಬೆಂಬಲದ ಜೊತೆಗೆ ಸಿಎಂ ಸಿದ್ದರಾಮಯ್ಯ ಹಾಗೂ ಬಿಜೆಪಿಯವರ ಬೆಂಬಲವೂ ಬೇಕಾಗಿದೆ. ಆದರೆ, ಬಿಜೆಪಿಯವರು ಕಾಸರಗೋಡು ವಿಚಾರದಲ್ಲಿ ರಾಜಕೀಯ ಮಾಡುತ್ತಿರುವುದು, ಕೆ.ಸಿ.ವೇಣುಗೋಪಾಲ್(ಎಐಸಿಸಿ ಪ್ರಧಾನ ಕಾರ್ಯದರ್ಶಿ) ಮಧ್ಯ ಪ್ರವೇಶ ಮಾಡಲಿ ಎನ್ನುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕರ್ನಾಟಕ ಹಾಳಾಗಿರುವುದೇ ಪರಭಾಷಿಕರಿಂದ: ಬಿಜೆಪಿಯವರಿಗೆ ಈಗ ಕಾಸರಗೋಡಿನ ಬಗ್ಗೆ ಅಭಿಮಾನ ಬಂದು ಬಿಟ್ಟಿದೆ. ಕರ್ನಾಟಕಕ್ಕೆ ತಮಿಳುನಾಡಿನ ತಿರುವಳ್ಳುವರ್ ಪ್ರತಿಮೆ ತಂದವರು ಬಿಜೆಪಿಯವರು. ಮರಾಠಿಗರಿಗೆ ಸಂಪೂರ್ಣ ಬೆಂಬಲಕೊಟ್ಟ ಬಿಜೆಪಿಯವರು ರಾಜ್ಯದಲ್ಲಿ ಹಿಂದಿ ಹೇರಿಕೆ ವಿರುದ್ಧ ಬೀದಿಗೆ ಬಂದು ಹೋರಾಟ ಮಾಡಲು ಬರುತ್ತಾರಾ ಎಂದು ಪ್ರಶ್ನಿಸಿದ ವಾಟಾಳ್, ಇಡೀ ಕರ್ನಾಟಕ ಹಾಳಾಗಿರುವುದೇ ಪರಭಾಷಿಕರಿಂದ. ಸುಂದರವಾದ ಮೈಸೂರು ಹಾಳಾಗಿರುವುದೇ ಮರ್ವಾಡಿಗಳಿಂದ. ಮೈಸೂರು–ಬೆಂಗಳೂರು ರಸ್ತೆ ಪರಭಾಷಿಕರ ದಾರಿಯಾಗಿದೆ ಎಂದು ಕಿಡಿಕಾರಿದರು.

ರಾಜ್ಯ ಸರ್ಕಾರ ಹೊರನಾಡು ಕನ್ನಡಿಗರ ಹಿತ ಕಾಯಬೇಕು...

"ರಾಜ್ಯ ಸರ್ಕಾರ ಹೊರನಾಡು ಕನ್ನಡಿಗರ ಹಿತಕ್ಕಾಗಿ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಬೇಕು. ಜೊತೆಗೆ ಅಲ್ಲಿನ ಕನ್ನಡ ಶಾಲೆ, ಸಂಘ–ಸಂಸ್ಥೆ ಮತ್ತು ಕನ್ನಡಿಗರಿಗೆ ನೆರವು ನೀಡುವುದಕ್ಕಾಗಿ ಮುಂದಿನ ಬಜೆಟ್‌ನಲ್ಲಿ 500 ಕೋಟಿ ರೂ. ಅನುದಾನವನ್ನು ಮೀಸಲಿಡಬೇಕು. ಗಡಿ ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಅವಕಾಶ ಮತ್ತು ಉದ್ಯೋಗ ಕೊಡಬೇಕು.

–ವಾಟಾಳ್ ನಾಗರಾಜ್, ಕನ್ನಡಪರ ಹೋರಾಟಗಾರ

ತಿರುಪತಿಯಲ್ಲಿ ಕನ್ನಡಿಗರ ಆಸ್ತಿ: ತಿರುಪತಿಯಲ್ಲಿ ಶೇ.40 ರಷ್ಟು ಕನ್ನಡಿಗರ ಆಸ್ತಿ ಇದೆ. ಮೈಸೂರು ಮಹಾರಾಜರ ಚಿನ್ನವಿದ್ದು, ದೇವಸ್ಥಾನಕ್ಕೆ ಹೋಗುವವರಲ್ಲಿ ಶೇ.40 ರಷ್ಟು ಕನ್ನಡಿಗರೆ. ಆದ್ದರಿಂದ ತಿರುಪತಿ ದೇವಸ್ಥಾನ ಕಮಿಟಿಯಲ್ಲಿ ಕನ್ನಡಿಗರನ್ನು ನೇಮಕ ಮಾಡಬೇಕು. ತಿರುಪತಿಯಲ್ಲಿ ಕನ್ನಡಿಗರನ್ನು ಗುಲಾಮರಂತೆ ನೋಡಲಾಗುತ್ತಿದ್ದು, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲು ಕಾಸರಗೋಡು ಹಾಗೂ ಹಿಟ್ಲರ್ ಪ್ರಭುತ್ವವಿರುವ ತಿರುಪತಿಯಲ್ಲಿ ಕನ್ನಡಿಗರಿಗೆ ಅವಕಾಶ ದೊರಕಿಸುವ ಕುರಿತು ಇತ್ಯರ್ಥ ಮಾಡಬೇಕು ಎಂದು ಒತ್ತಾಯಿಸಿದರು.

ಪಕ್ಷಾತೀತವಾಗಿ ಕ್ರಮವಹಿಸಬೇಕು: ಬಳ್ಳಾರಿಯಲ್ಲಿ ಬಿಜೆಪಿ ಪಾದಯಾತ್ರೆ ಕುರಿತು ಪ್ರತಿಕ್ರಿಯಿಸಿದ ಅವರು, ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ನಡೆಸಿದ ಹೋರಾಟ ಫಲವಾಗಿ ಮದ್ರಾಸ್ ಪ್ರಾಂತ್ಯದಲ್ಲಿದ್ದ ಬಳ್ಳಾರಿ ಕರ್ನಾಟಕಕ್ಕೆ ಸೇರಿತು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಾಣವಾದ ವಿರೂಪಾಕ್ಷ ದೇವಾಲಯ ಅದ್ಭುತವಾಗಿತ್ತು. ಆದರೆ, ಅಲ್ಲಿನ ಖನಿಜ ಕಳ್ಳರಿಂದ, ಎಂಎಲ್ಎ, ಮಾಜಿ ಎಂಎಲ್ಎಗಳಿಂದ ಲೂಟಿ ನಡೆದಿದ್ದು, ಜಿಂದಾಲ್ ಕಂಪನಿಗೂ 10 ಸಾವಿರ ಎಕರೆ ಪ್ರದೇಶವನ್ನು ಕೊಟ್ಟಿದ್ದಾರೆ. ಕೋಟಿ ಕೋಟಿ ಲೂಟಿ ಮಾಡಿ ಜೈಲಿಗೂ ಹೋದವರಿದ್ದಾರೆ. ಇದೆಲ್ಲದರಿಂದ ಹಾಳಾಗಿರುವ ಬಳ್ಳಾರಿಯಲ್ಲಿ ಗುಂಡಿನ ರಾಜಕೀಯ, ಗೋಲಿಬಾರ್ ರಾಜಕೀಯ ಮಾಡುವುದು ಅತ್ಯಂತ ಕೆಟ್ಟ ಚಿಂತನೆಯಾಗಿದೆ. ಇದರ ಹಿಂದೆ ಯಾರೇ ಇದ್ದರೂ ಪಕ್ಷಾತೀತವಾಗಿ ಕ್ರಮವಹಿಸಬೇಕು ಎಂದು ಆಗ್ರಹಿಸಿದರು.

ಕೋಟಗಾನಹಳ್ಳಿ ರಾಮಯ್ಯರ ಮಾಸ ಪತ್ರಿಕೆ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಪತ್ರಕರ್ತ ಹಾಗೂ ಪ್ರಗತಿಪರ ಚಿಂತಕರಾದ ಕೋಟಗಾನಹಳ್ಳಿ ರಾಮಯ್ಯ ಅವರ ಸಾರಥ್ಯದಲ್ಲಿ ಹೊರ ಬರುತ್ತಿರುವ 'ಬುಡ್ಡಿ ದೀಪ ಲಿವಿಂಗ್ ಟೈಮ್ಸ್' ಮಾಸ ಪತ್ರಿಕೆ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜ.11(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ಪತ್ರಕರ್ತ ಹಾಗೂ ಪ್ರಗತಿಪರ ಚಿಂತಕರಾದ ಕೋಟಗಾನಹಳ್ಳಿ ರಾಮಯ್ಯ ಅವರ ಸಾರಥ್ಯದಲ್ಲಿ ಹೊರ ಬರುತ್ತಿರುವ 'ಬುಡ್ಡಿ ದೀಪ ಲಿವಿಂಗ್ ಟೈಮ್ಸ್' ಮಾಸ ಪತ್ರಿಕೆ ಬಿಡುಗಡೆ ಮಾಡಲಾಯಿತು.

ಈ ವೇಳೆ ಕೋಟಗಾನಹಳ್ಳಿ ರಾಮಯ್ಯ ಮಾತನಾಡಿ, ಇಂದು ಎಲ್ಲರೂ ಸಮಯದ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ಇತರರಿಗಾಗಿ ಕೇವಲ 30 ಸೆಕೆಂಡ್ ಸಮಯ ನೀಡಲೂ ಹಲವರಿಗೆ ಸಾಧ್ಯವಾಗದ್ದಾಗಿದೆ. ಇಂತಹ ಸಂದರ್ಭದಲ್ಲಿ ಈ ಪತ್ರಿಕೆ ಮೂಲಕ ಕ್ರಾಂತಿ ಆರಂಭಿಸಲು ಮುಂದಾಗಿದ್ದೇವೆ. ಪತ್ರಿಕೆಯಲ್ಲಿ ಪ್ರಮುಖವಾಗಿ ಯಾರೂ ನೋಡಿರದ, ತಿಳಿದಿರದ ವಿಷಯ ಕುರಿತು ಗಮನ ಕೇಂದ್ರೀಕರಿಸಲಾಗುವುದು. ಪತ್ರಿಕೆಯೂ ಕನ್ನಡ ಮತ್ತು ಇಂಗ್ಲಿಷ್ ದ್ವಿಭಾಷೆಯಲ್ಲಿ ಪ್ರಕಟವಾಗಲಿದೆ ಎಂದರು.

ಪ್ರಗತಿಪರ ಹೋರಾಟಗಾರ ಅಹಿಂದ ಜವರಪ್ಪ ಮಾತನಾಡಿ, ಕೋಟಗಾನಹಳ್ಳಿ ರಾಮಯ್ಯ ಅವರು ಸಾಂಸ್ಕೃತಿಕ ಹೋರಾಟಗಾರರಾಗಿದ್ದು, ಈ ರೀತಿ ಮಾಸಪತ್ರಿಕೆ ಹೊರ ತರುತ್ತಿರುವುದು ಸಂತಸದ ಸಂಗತಿಯಾಗಿದೆ. ಈ ಪತ್ರಿಕೆ ಎಲ್ಲರನ್ನೂ ಒಗ್ಗೂಡಿಸುವ ಕೆಲಸ ಮಾಡಲೆಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಶಿವಕುಮಾರ್, ಮಹದೇವ ಕೋಟೆ ಉಪಸ್ಥಿತರಿದ್ದರು.

ಜ.19ರಂದು ಸಿರಿಧಾನ್ಯ ಪಾಕ ಸ್ಪರ್ಧೆ

ಮೈಸೂರು: ಕೃಷಿ ಇಲಾಖೆ ವತಿಯಿಂದ ಅಂತರ ರಾಷ್ಟ್ರೀಯ ವಾಣಿಜ್ಯ ಮೇಳ 2026 ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಸಿರಿಧಾನ್ಯ ಪಾಕ ಸ್ಪರ್ಧೆಯನ್ನು ಜ.19ರಂದು ಏರ್ಪಡಿಸಲಾಗುತ್ತದೆ. ಸ್ಪರ್ಧೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳು/ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳನ್ನು ಹೊರತುಪಡಿಸಿ ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಭಾಗವಹಿಸುವ ಅವಕಾಶವಿರುತ್ತದೆ. ಈ ಸ್ಪರ್ಧೆಗೆ ಭಾಗವಹಿಸಲು ಬಯಸುವ ಅಭ್ಯರ್ಥಿಗಳು ತಮ್ಮ ಭಾವಚಿತ್ರದೊಂದಿಗೆ ಹೆಸರು, ವಿಳಾಸ ಮತ್ತು ತಯಾರಿಸುವ ಖಾದ್ಯ ಬೇಕಾಗುವ ಸಾಮಗ್ರಿಗಳು, ತಯಾರಿಸಲು ಬೇಕಾಗುವ ಸಮಯ ಹಾಗೂ ತಯಾರಿಸುವ ವಿಧಾನ ಸಂಕ್ಷಿಪ್ತ ಮಾಹಿತಿಯೊಂದಿಗೆ ಜ.17ರಂದು ಮಧ್ಯಾಹ್ನ 12.00 ಗಂಟೆಯೊಳಗೆ ಇ ಮೇಲ್ ವಿಳಾಸ jdamysuru@gmail.com ಮೂಲಕ ಅಥವಾ ಖುದ್ದಾಗಿ ಜಂಟಿ ಕೃಷಿ ನಿರ್ದೇಶಕರ ಕಚೇರಿ, ಸಾರ್ವಜನಿಕ ಕಚೇರಿ ಕಟ್ಟಡ ಈ ವಿಳಾಸಕ್ಕೆ ಸಲ್ಲಿಸ ಬೇಕಾಗಿದೆ. ಹೆಚ್ಚಿನ ಮಾಹಿತಿಗಾಗಿ 9035386129, 8105504262 ಜಂಟಿ ಕೃಷಿ ನಿರ್ದೇಶಕರ ಕಚೇರಿ ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎನ್.ಆರ್.ಗಾಲ್ಫ್ ಓಪನ್ ಚಾಂಪಿಯನ್‌ಶಿಪ್–2025



ಮೈಸೂರಿನ ಜೆಡಬ್ಲ್ಯೂ ಗಾಲ್ಫ್ ಕ್ಲಬ್‌ನಲ್ಲಿ ನಡೆದ 37ನೇ ಆವೃತ್ತಿ ಎನ್.ಆರ್. ಗಾಲ್ಫ್ ಓಪನ್ ಚಾಂಪಿಯನ್‌ಶಿಪ್–2025 ಅನ್ನು ಸೈಕಲ್ ಪ್ಯೂರ್ ಅಗರಬತ್ತಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಎನ್.ಆರ್. ಗ್ರೂಪ್ ವ್ಯವಸ್ಥಾಪಕ ನಿರ್ದೇಶಕ ಎಂ.ಅರ್ಜುನ್ ರಂಗ ಉದ್ಘಾಟಿಸಿದರು. ಚಿತ್ರದಲ್ಲಿ ಜೆಡಬ್ಲ್ಯುಜಿಸಿ ಅಧ್ಯಕ್ಷ ಹೆಚ್.ಸಿ.ಅರುಣ್‌ಕುಮಾರ್, ಕ್ಯಾಪ್ಟನ್ ಎಂ.ಎಸ್.ಯಶ್ವಂತ್, ಕಾರ್ಯದರ್ಶಿ ಕೆ.ಎಸ್.ಸುಧೀರ್ ಭಟ್, ಖಜಾಂಚಿ ಡಿ.ವಿ.ಶ್ರೀಧರ್, ಟೂರ್ನಮೆಂಟ್ ಉಪಸಮಿತಿ ಅಧ್ಯಕ್ಷ ಪಾಲ್ಗುಣ ವಿ.ಅರಸ್, ಕಮಿಟಿ ಸದಸ್ಯರಾದ ಎಂ.ಜಿ.ಚೆಂಗಪ್ಪ, ಎಂ.ಎ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಹೊನ್ನಾರತಿ ಗೌರಿಗೆ 9 ಚಿನ್ನದ ಪದಕ

ಮೈಸೂರು: 2025–2026ನೇ ಸಾಲಿನ ಮೈಸೂರು ವಿಶ್ವ ವಿದ್ಯಾಲಯದ ಎಂ.ಎ ಸಂಸ್ಕೃತ ಪದವಿಯಲ್ಲಿ ಹೊನ್ನಾರತಿ ಗೌರಿ ಎಸ್ ಭಾರಧ್ವಾಜ್ ಅವರು 9 ಚಿನ್ನದ ಪದಕ, ಒಂದು ನಗದು ಪುರಸ್ಕಾರವನ್ನೂ ಪಡೆದಿದ್ದಾರೆ. ಹೊನ್ನಾರತಿ ಬಾಲ್ಯದಿಂದಲೂ ಸುರಸರಸ್ವತೀ ಸಭಾ ನಡೆಸುವ ಸಂಸ್ಕೃತ ಪ್ರಥಮಾ, ದ್ವಿತೀಯಾ, ತೃತೀಯಾ ಇತ್ಯಾದಿ ಪರೀಕ್ಷೆಗಳು, ಭಗವದ್ಗೀತೆ ಕಂಠಪಾಠ ಮತ್ತು ವಾಚನ, ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಾಕ್ ಶಾಸ್ತ್ರೀ ಸಂಸ್ಕೃತ



ಪರೀಕ್ಷೆ, ಪ್ರಾಕೃತ ಪ್ರಥಮಾ, ಮಧ್ಯಮಾ, ವಿಶಾರದ ಮತ್ತು ರತ್ನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದು ಸಂಸ್ಕೃತ ಹಾಗೂ ಪ್ರಾಚೀನ ಭಾಷೆಗಳ ನಿರಂತರ ಅಧ್ಯಯನ ಮತ್ತು ಅಧ್ಯಾಪನದಲ್ಲಿ ನಿರತರಾಗಿದ್ದಾರೆ. ಇವರು ಹಾಸನದ ಸರ್ಕಾರಿ ಕಲಾ ಕಾಲೇಜಿನ ನಿವೃತ್ತ ಸಂಸ್ಕೃತ ಪ್ರಾಧ್ಯಾಪಕರಾದ ಡಾ.ವೀಣಾ ಮತ್ತು ಶಶಿಕುಮಾರ್ ದಂಪತಿ ಸುಪುತ್ರಿ.

ಕ್ರೀಡಾಶಾಲೆ, ನಿಲಯಗಳಿಗೆ ಆಯ್ಕೆ ಪ್ರಕ್ರಿಯೆ

ಮೈಸೂರು,ಜ.11–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯದಲ್ಲಿ ನಡೆಸುತ್ತಿರುವ ಕ್ರೀಡಾಶಾಲೆ, ನಿಲಯಗಳಿಗೆ 14 ಮತ್ತು 18 ವರ್ಷದೊಳಗಿನ 2026–27ನೇ ಸಾಲಿಗೆ 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಪಡೆಯುವ ಕಿರಿಯರ ವಿಭಾಗದ ಬಾಲಕ, ಬಾಲಕಿಯರ ಅಥ್ಲೆಟಿಕ್ಸ್, ಬಾಸ್ಕೆಟ್ ಬಾಲ್, ಸೈಕ್ಲಿಂಗ್, ಫುಟ್ ಬಾಲ್, ಜಿಮ್ನಾಸ್ಟಿಕ್ಸ್, ಖೋ–ಖೋ, ಕಬ್ಬಡಿ, ಹಾಕಿ, ಜುಡೋ, ವಾಲಿಬಾಲ್, ಕುಸ್ತಿ, ಆರ್ಚರಿ ಮತ್ತು ಫೆನ್ಸಿಂಗ್ ಈ ಕ್ರೀಡೆಗಳಲ್ಲಿ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು.

ಕೆ.ಆರ್.ನಗರ ತಾಲೂಕು ಕ್ರೀಡಾಂಗಣದಲ್ಲಿ ಜ.16ರಂದು ಬೆಳಿಗ್ಗೆ 10 ಗಂಟೆಗೆ ಗಿರೀಶ್ ಬಾಸ್ಕೆಟ್ ಬಾಲ್ ತರಬೇತುದಾರ ಮೊ: 9964411709, ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ, ಬಾಲಜಗತ್ ವಿದ್ಯಾ ಸಂಸ್ಥೆ ಮೈದಾನದಲ್ಲಿ ಜ.17ರಂದು ಬೆಳಿಗ್ಗೆ 10 ಗಂಟೆಗೆ ಗಿರೀಶ್ ಬಾಸ್ಕೆಟ್ ಬಾಲ್ ತರಬೇತುದಾರರು (ಮೊ: 9964411709). ಹಿರಿಯರ ವಿಭಾಗದ ಯುವಕ, ಯುವತಿಯರು ಕ್ರೀಡಾ ವಸತಿ ನಿಲಯಗಳಿಗೆ 18 ವರ್ಷದೊಳಗಿನ (01–06–2008ರ ನಂತರ ಜನಿಸಿದವರು) ಅಥ್ಲೆಟಿಕ್ಸ್, ಬಾಸ್ಕೆಟ್ ಬಾಲ್, ಸೈಕ್ಲಿಂಗ್, ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಖೋ–ಖೋ, ಕಬಡ್ಡಿ, ಹಾಕಿ, ಜೂಡೋ, ವಾಲಿಬಾಲ್, ಕುಸ್ತಿ, ಆರ್ಚರಿ, ಮತ್ತು ಫೆನ್ಸಿಂಗ್ ಈ ಕ್ರೀಡೆಗಳಲ್ಲಿ ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಅರ್ಹತೆ ಪಡೆಯುವ ಹಿರಿಯರ ವಿಭಾಗದವರಿಗೆ ಫೆ15, 16ರಂದು ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಬೆಳಿಗ್ಗೆ 9ರಿಂದ ನಡೆಸಲಾಗುವುದು. ಆಯ್ಕೆಗೆ ಬರುವಾಗ ತಾಲೂಕು ಮಟ್ಟದ ಪ್ರಕ್ರಿಯೆಯಲ್ಲಿ ಭಾಗವಹಿಸಿ ಆಯ್ಕೆಯಾದವರಿಗೆ ನೀಡಿರುವ ಅರ್ಜಿ ನಮೂನೆ ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರ, ವೈದ್ಯಕೀಯ ದೃಢೀಕರಣ ಪತ್ರ ಮತ್ತು ಆಧಾರ್ ಕಾರ್ಡ್ ಲಗತ್ತಿಸಿ ಅರ್ಜಿ ಸಲ್ಲಿಸಬಹುದು.

ಕೃಷ್ಣೇಗೌಡ ನಿಧನ



ಮೈಸೂರು: ಮೈಸೂರು ಹಿನಕಲ್ ನಿವಾಸಿ ಹಾಗೂ ವಿಕ್ರಾಂತ್ ಟೈರ್ಸ್ ನಿವೃತ್ತ ನೌಕರರಾದ ಕೃಷ್ಣೇಗೌಡ ಇಂದು ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಮಕ್ಕಳು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಸೋಮವಾರ) ಮಧ್ಯಾಹ್ನ ಗದ್ದಿಗೆ ರಸ್ತೆಯ ಬೆಟ್ಟದಬೀಡು ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.1.2026 ಸೋಮವಾರ, ಮಳೆ ನಕ್ಷತ್ರ: ಉಷಾ, 11.01.2025ರಿಂದ 23.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ,
ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ: ಸ್ವಾತಿ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಬೆಳಗ್ಗೆಯಿಂದ ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ರಂಗಭೂಮಿ ಮತ್ತು ಪ್ರದರ್ಶಕ ಕಲೆಗಳು ಕುರಿತು ಅಂತಾರಾಷ್ಟ್ರೀಯ ಸಮ್ಮೇಳನ, ಅಧ್ಯಕ್ಷತೆ: ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಉದ್ಘಾಟನೆ: ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ.ನಾಗರಾಜಮೂರ್ತಿ, ಮುಖ್ಯ ಅತಿಥಿ: ರಂಗಕರ್ಮಿ ಡಾ.ಸಿ.ಬಸವಲಿಂಗಯ್ಯ, ಸ್ಥಳ: ಕೆಎಸ್‌ಜಿಹೆಚ್ ಸಭಾಂಗಣ, ವಿಶ್ವವಿದ್ಯಾನಿಲಯದ ಆವರಣ, ಬೆಳಗ್ಗೆ 11ಕ್ಕೆ.
- **ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ:** ಶ್ರೀಚಾಮುಂಡೇಶ್ವರಿ ಅಮ್ಮನವರ ಕೊಠಾರೋತ್ಸವ ವೈಭವ, ಸಂಜೆ 6 ಗಂಟೆಯಿಂದ ಕರ್ನಾಟಕ ಸಂಗೀತ: ವಿದ್ವಾನ್ ವಿ.ಮುಕುಂದ ಮತ್ತು ತಂಡ, ಬೆಂಗಳೂರು ಅವರಿಂದ. ಸ್ಥಳ: ಚಾಮುಂಡಿಬೆಟ್ಟದ ದೇವಸ್ಥಾನದ ಒಳಗೆ, ಸಂಜೆ 6 ರಿಂದ.
- **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ, ವಿವೇಕಾನಂದ ಜಯಂತ್ಯುತ್ಸವ ಸಮಿತಿ:** ಸ್ವಾಮಿ ವಿವೇಕಾನಂದ ಜಯಂತ್ಯುತ್ಸವ–2026, ದಿವ್ಯ ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ವಿವೇಕಾನಂದ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶಾಸಕ ಟಿ.ಎಸ್.ಶ್ರೀವತ್ಸ, ವಿವೇಕಾನಂದರ ಕುರಿತು: ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಸತತ 14 ಗಂಟೆಗಳ ಕಾಲ ವಿವೇಕಾನಂದರ ವಿಚಾರಗಳ ಕುರಿತು ವಿಚಾರ ಮಂಡಿಸಿದ ಪ್ರತಿಭಾವಂತ ಚೇತನ್‌ಕುಮಾರ್, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಡಿ.ಮಾದೇಗೌಡ, ಸ್ಥಳ: ವಿವೇಕಾನಂದ ವೃತ್ತ, ವಿವೇಕಾನಂದನಗರ, ಸಂಜೆ 6ಕ್ಕೆ.
- **ಶ್ರೀ ಮಹಾಜನ ಸಭಾ ಟ್ರಸ್ಟ್:** ತಿರುಪ್ಪಾವೈ ಪಾರಾಯಣ, ಆಧ್ಯಾತ್ಮಿಕ ಪ್ರವಚನಕಾರರಾದ ಡಾ.ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಗೋದಾವರಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್, ಶ್ರೀರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ. ಸಂಜೆ 6.30ಕ್ಕೆ.

ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ–2026

ಬಹುರೂಪಿ ಚಲನಚಿತ್ರೋತ್ಸವ–2026

(ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಂಗಾಯಣ, ಮೈಸೂರು)

- **ಶ್ರೀ ರಂಗ ಮಂದಿರ:** ಬೆಳಗ್ಗೆ 10ರಿಂದ 'ರೂಟ್ಸ್' (ಇಂಗ್ಲಿಷ್–1977), ನಿರ್ದೇಶನ: ಬ್ರೋಸ್ ಬೆರೆಸ್ ಫೋರ್ಡ್, 12ಕ್ಕೆ ಇಂಡಿಯಾ ಅನ್‌ಟಚ್ಡ್: ಸ್ಟೋರಿಸ್ ಆಫ್ ಎ ಪೀಪಲ್ ಅಪಾರ್ಟ್ (ಇಂಗ್ಲಿಷ್–2007), ನಿರ್ದೇಶನ: ಸ್ಟಾಲಿನ್ ಕೆ., ಮಧ್ಯಾಹ್ನ 2 ಗಂಟೆಗೆ ಫುಲೆ (ಹಿಂದಿ–2025), ನಿರ್ದೇಶನ– ಅನಂತ ನಾರಾಯಣ ಮಹದೇವನ್.



- **ರಾಷ್ಟ್ರೀಯ ನಾಟಕೋತ್ಸವ–2026:** ಸಂಜೆ 5.30ಕ್ಕೆ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ರಂಗೋತ್ಸವ ಉದ್ಘಾಟನೆ: ಭಾರತೀಯ ರಂಗಭೂಮಿಯ ಹಿರಿಯ ಕಲಾವಿದೆ ಶ್ರೀಮತಿ ಹೈಸ್ನಾಂ ಸಾವಿತ್ರಿದೇವಿ, ಪುಸ್ತಕ, ಕರಕುಶಲ ಮೇಳ ಉದ್ಘಾಟನೆ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರಂಗ ಸಂಚಿಕೆ ಬಿಡುಗಡೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಬಾಬಾ ಸಾಹೇಬ್ ಛಾಯಾಚಿತ್ರ ಪ್ರದರ್ಶನ ಉದ್ಘಾಟನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಚಿತ್ರಕಲಾ ಪ್ರದರ್ಶನ ಅನಾವರಣ: ಸಂಸದ ಸುನೀಲ್ ಬೋಸ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಸ್ಥಳ: ವನರಂಗ.

ಮಕ್ಕಳ ಬಹುರೂಪಿ: ಉದ್ಘಾಟನೆ: ಹಿರಿಯ ರಂಗಕರ್ಮಿ ಶ್ರೀಮತಿ ರಾಮೇಶ್ವರಿ ವರ್ಮ, ಮುಖ್ಯ ಅತಿಥಿಗಳು: ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾದ ಡಾ.ಜಾಹೀದಾ, ರಂಗ ಸಮಾಜದ ಸದಸ್ಯರಾದ ಡಾ.ಕೆ.ರಾಮಕೃಷ್ಣನ್, ಮಹಾಂತೇಶ್ ಗಜೇಂದ್ರಗಡ, ಉಪಸ್ಥಿತಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಅಧ್ಯಕ್ಷತೆ: ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ರಾಧಾ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎ.ಎಸ್.ನಾಗಲಕ್ಷ್ಮಿ, ವ್ಯಾಖ್ಯಾನ–ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ವೈಷ್ಣವಿ.ಎನ್, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) 1.ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರಿಗೆ ಸೇಡಿಯಾಪು ಕೃಷ್ಣಭಟ್ಟ ಪ್ರಶಸ್ತಿ ಸಂದ ಸಂದರ್ಭದಲ್ಲಿ ಡಾ.ಎನ್.ಎಸ್.ತಾರಾನಾಥ್ ಅವರು ಅವರೊಂದಿಗೆ ನಡೆಸಿದ್ದ ಸಂದರ್ಶನ. ಕನ್ನಡ ಭಾಷೆ ಕುರಿತು ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರು ಮಾಡಿದ್ದ ಭಾಷಣದ ಧ್ವನಿಮುದ್ರಣ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿ.ಕೃಷ್ಣಮೂರ್ತಿ–ನಾಗಸ್ವರ ವಾದನ, 10.30–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ. ವಿಷಯ: ಯುವಜನತೆ ಮತ್ತು HIV - AIDS ಭಾಗವಹಿಸುತ್ತಾರೆ: ಕರ್ನಾಟಕ ರಾಜ್ಯ ಏಡ್ಸ್ PREVENTION SOCIETYಯ ಯೋಜನಾ ನಿರ್ದೇಶಕರಾದ ಪದ್ಮಾ ಬಸವಂತಪ್ಪ ಹಾಗೂ CST ವಿಭಾಗದ ಜಂಟಿ ನಿರ್ದೇಶಕರಾದ ಡಾ. ಮಮತಾ.ಪಿ, ಪ್ರಾಯೋಜಕರು : ಕರ್ನಾಟಕ ರಾಜ್ಯ AIDS PREVENTION SOCIETY BENGALURU, 10.40 2025 The year of reforms –ವಿಶೇಷ ಬಾನುಲಿ ಸರಣಿ. 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, **ಮಧ್ಯಾಹ್ನ** 12.05 ವನಿತಾ ವಿಹಾರ–ಸ್ವಾಮಿ ವಿವೇಕಾನಂದರ ಕುರಿತು ಮಾತನಾಡುತ್ತಾರೆ ಡಾಕ್ಟರ್ ತೇಜಸ್ವಿನಿ ಎಕ್ಕುಂಡಿ ಮಠ. ನಂತರ ಶರಣರ ವಚನಗಳಲ್ಲಿ ಸಾಮಾಜಿಕ ಸಂದೇಶ ಮಾತನಾಡುತ್ತಾರೆ ಪಾರ್ವತಿ ಹಮ್ಮಿಗೆ ಕಾರ್ಯಕ್ರಮ. ಪ್ರಸ್ತುತಿ–ಮಂಜುಳಾ ಪುರಾಣಿಕ. 12.35–ದೇವರನಾಮ, 12.45 ನಮ್ಮ ಆರೋಗ್ಯ–ಥ್ರಾಂಬೋಸೈಟೋಪಿನಿಯಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಹೆಮೆಟಾಲಜಿಸ್ಟ್ ಡಾ.ಗಿರಿಪುಂಜ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಧನಧಾನ್ಯ ಯೋಜನೆ ಕುರಿತು ಮಾಹಿತಿ. 1.20–ಭಾವಗೀತೆಗಳು, ಸಾವಿತ್ರಿ ಪ್ರಭಾಕರ್, 2.30 ಪ್ರದೇಶ ಸಮಾಚಾರ, 2.40–2025 The year of reforms–ವಿಶೇಷ ಬಾನುಲಿ ಸರಣಿ. 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆನಯಂಪಟ್ಟಿ.ಎಸ್.ಗಣೇಶನ್–ಜಲತರಂಗ ವಾದನ, 4.00 ಮಹಿಳಾರಂಗ –ಡಾಕ್ಟರ್ ಸಮಯ, IVF ತಂತ್ರಜ್ಞಾನ ಕುರಿತು ಮೈಸೂರಿನ ಪ್ರಸೂತಿ ಸ್ತ್ರೀರೋಗ ತಜ್ಞೆ ಹಾಗೂ Fertility Specialist ಡಾ.ಜ್ಯೋತಿ ಉಮೇಶ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ –ಕೀರ್ತನಾ.ವಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಕಿಶೋರ್.ಎಂ.ಕಾಕಡೆ, 5.00–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಕೂಳೆ ಕಬ್ಬಿನ ಬೇಸಾಯ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಸ್.ಎನ್.ಸ್ವಾಮಿಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ–ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಇಂಗ್ಲಿಷ್, ಭಾಗವಹಿಸುತ್ತಾರೆ –ಹುಣಸೂರಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಇಂಗ್ಲಿಷ್‌ನ ಉಪನ್ಯಾಸಕ ಸದಾನಂದ ಆರ್., ಪ್ರಸ್ತುತಿ–ದಿಗ್ವಿಜಯ್.ಬಿ, 9.30 ಸವಿನೆನಪು, 10.00–ಆಕಾಶವಾಣಿ ಸಂಗೀತ ಸಮ್ಮೇಳನ–2025, ಪಂಡಿತ್ ವಿಶ್ವಮೋಹನ್ ಭಟ್–ಗಿಟಾರ್ ವಾದನ.

ನಾಟಕೋತ್ಸವ

ಭೂಮಿಗೀತ: ಸಂಜೆ 6.30ರಿಂದ ಅಂಬೇಡ್ಕರ್ ಕೊಲಾಗ್ (ಕನ್ನಡ), ರಚನೆ: ಕೋಟಗಾನಹಳ್ಳಿ ರಾಮಯ್ಯ, ನಿರ್ದೇಶನ: ಚಿದಂಬರರಾವ್ ಜಂಬೆ, ತಂಡ: ರಂಗಾಯಣ ರೆಪರ್ಟರಿ, ಮೈಸೂರು.

ಕಿರುರಂಗಮಂದಿರ: ಸಂಜೆ 7ರಿಂದ, ಬ್ಯಾಗ್ ಡಾನ್ಸಿಂಗ್ (ಇಂಗ್ಲಿಷ್), ರಚನೆ: ಮೈಕ್ ಕೆನ್ನಿ, ನಿರ್ದೇಶನ: ಉಜ್ವಲರಾವ್, ತಂಡ: ಬುತಾಯ್ ಟ್ರಸ್ಟ್, ಬೆಂಗಳೂರು.

ಕಲಾಮಂದಿರ: ಬೆಳಗ್ಗೆ 11 ಮತ್ತು ಸಂಜೆ 7, ಮಾಯಾದ್ವೀಪ (ಕನ್ನಡ), ಮೂಲ: ವಿಲಿಯಂ ಶೇಕ್ಸ್‌ಪಿಯರ್, ರಂಗ ಪಠ್ಯ ಮತ್ತು ನಿರ್ದೇಶನ: ಪುನೀತ್ ಕರ್ತ, ತಂಡ: ನೆನಪು ಕಲ್ಚರಲ್ ಮತ್ತು ಎಜುಕೇಷನಲ್ ಚಾರಿಟಬಲ್ ಟ್ರಸ್ಟ್, ಬೆಂಗಳೂರು.

ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಕಾನೂನು-ಸುವ್ಯವಸ್ಥೆ ವೈಫಲ್ಯ ಆರೋಪ

ಬಿಜೆಪಿಯಿಂದ ಜ.17ಕ್ಕೆ ಬಳ್ಳಾರಿಯಲ್ಲಿ ಬೃಹತ್ ಸಮಾವೇಶ ; ಜ.31ಕ್ಕೆ ಮೈಸೂರಲ್ಲೂ ಹೋರಾಟ

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಘೋಷಣೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿದರು.

ಮೈಸೂರು,ಜ.11(ಪಿಎಂ)– ಬಳ್ಳಾರಿಯಲ್ಲಿ ಶಾಸಕ ಜನಾರ್ಧನ ರೆಡ್ಡಿ ಅವರನ್ನು ಕೊಲ್ಲುವ ಪ್ರಯತ್ನ ನಡೆದಿತ್ತು ಎಂದು ಆರೋಪಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಇದನ್ನು ಖಂಡಿಸಿ ಜ.17ರಂದು ಬಳ್ಳಾರಿಯಲ್ಲಿ ಬೃಹತ್ ಸಮಾವೇಶ ಆಯೋಜಿಸಲು ಪಕ್ಷದ ಕೋರ್ ಕಮಿಟಿ ತೀರ್ಮಾನಿಸಿದೆ ಎಂದು ತಿಳಿಸಿದರು.

ಅಲ್ಲದೆ, ಮೈಸೂರು ಸೇರಿದಂತೆ ರಾಜ್ಯದಲ್ಲಿ ಡ್ರಗ್ ಹಾವಳಿ ತಡೆಗಟ್ಟುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ದೂರಿದ ಅವರು, ಈ ಸಂಬಂಧವೂ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಮೈಸೂರಿನಲ್ಲಿ ಜ.31ರಂದು ಹೋರಾಟ ನಡೆಸಲು ಬಿಜೆಪಿ ತೀರ್ಮಾನಿಸಿದೆ. ಮೈಸೂರಿನಲ್ಲಿ ಸಮಾವೇಶ ಅಥವಾ ಪಾದಯಾತ್ರೆ ನಡೆಸಬೇಕಾ? ಯಾವ ರೀತಿ ಹೋರಾಟ ನಡೆಸಬೇಕೆಂಬ ಬಗ್ಗೆ ಶೀಘ್ರದಲ್ಲೇ ಮೈಸೂರಿನ ಮುಖಂಡರು, ಕಾರ್ಯಕರ್ತರು ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಇತ್ತೀಚೆಗೆ ಬಳ್ಳಾರಿಯಲ್ಲಿ ನಡೆದ ಘಟನೆ ಸಂಬಂಧ ಬಿಜೆಪಿ ಹೋರಾಟದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಜ.17ರಂದು ಬಳ್ಳಾರಿಯಲ್ಲಿ ಬೃಹತ್ ಸಮಾವೇಶ ಆಯೋಜಿಸುವ ಮೂಲಕ ರಾಜ್ಯ ಸರ್ಕಾರದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿರುವುದು, ಶಾಸಕರ ಮನೆ ಬಳಿ ಗುಂಡು ಹಾರಿಸಿ, ಕೊಲ್ಲುವಂತಹ ಪ್ರಯತ್ನ ಮಾಡಿರುವುದನ್ನು ತೀವ್ರವಾಗಿ ಖಂಡಿಸಲಾಗುವುದು ಎಂದು ತಿಳಿಸಿದರು.

ಡ್ರಗ್ಸ್ ಹಾವಳಿ: ಶಾಸಕ ಜನಾರ್ಧನ ರೆಡ್ಡಿ ಅವರ ಮನೆ ಬಳಿ ಈ ರೀತಿ ನಡೆಸಿರುವುದು ಅಕ್ಷಮ್ಯ ಅಪರಾಧ. ಜೊತೆಯಲ್ಲಿ ಕೋಗಿಲು ಬಡಾವಣೆ, ಮೈಸೂರಲ್ಲಿ ಡ್ರಗ್ ಹಾವಳಿ ಸಂಬಂಧ ಸಹ ಹೋರಾಟ ನಡೆಸಲಿದ್ದೇವೆ. ಡ್ರಗ್ಸ್ ಹಾವಳಿಯಿಂದ ಕರ್ನಾಟಕ ನಲುಗಿ ಹೋಗಿದ್ದು, ಮಹಾರಾಷ್ಟ್ರ ಪೊಲೀಸರು ಮೈಸೂರು ಮತ್ತು ಬೆಂಗಳೂರಿನಲ್ಲಿ ಡ್ರಗ್ಸ್ ಜಾಲದ ವಿರುದ್ಧ ದಾಳಿ ಮಾಡಿದ್ದಾರೆ. ಆದರೆ ನಮ್ಮ ಗೃಹ ಸಚಿವರು ನಾವು ಅವರಿಗೆ ಸಹಕಾರ ನೀಡುತ್ತೇವೆ ಎನ್ನುತ್ತಾರೆ. ಅಂದ್ರೆ, ಈಗ ಮಹಾರಾಷ್ಟ್ರ ಪೊಲೀಸರ ಬಳಿಕ ಉಳಿದ ಎಲ್ಲಾ ರಾಜ್ಯದವರು ಬಂದು ಸೀಜ್ ಮಾಡಲಿ ನಾವು ಸಹ ಕಾರ ನೀಡುತ್ತೇವೆ ಎನ್ನುವಂತಾಯಿತು. ಇದು ನಿಜಕ್ಕೂ ಬೇಜವಾಬ್ದಾರಿ ಉತ್ತರ ಎಂದು ಖಂಡಿಸಿದರು.

ಬಳ್ಳಾರಿ ಘಟನೆಗೆ ಫ್ಲೆಕ್ಸ್ ತೆರವು ಮಾಡಿದ್ದೇ ಕಾರಣ ಎನ್ನುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಫ್ಲೆಕ್ಸ್ ನಾಮಕಾವಸ್ತೆ ಅಷ್ಟೇ. ಜನಾರ್ಧನ ರೆಡ್ಡಿ ಮೇಲೆ ದಾಳಿ ಮಾಡಬೇಕೆಂಬುದು ಪೂರ್ವ ನಿಯೋಜಿತ. ಏಕೆಂದರೆ ಚುನಾವಣೆಗೆ 2 ವರ್ಷಗಳು ಇದ್ದು, ಈಗ ಜನಾರ್ಧನ ರೆಡ್ಡಿ ಬಿಜೆಪಿಗೆ ಮರಳಿದ್ದಾರೆ. ಅವರು ಹಾಗೂ ಶ್ರೀರಾಮುಲು ಸೇರಿದಂತೆ ಎಲ್ಲರೂ ಒಗ್ಗಟ್ಟಿನಿಂದ ಪ್ರವಾಸ ಮಾಡುತ್ತಿದ್ದಾರೆ. ಆ ಹೊಟ್ಟೆ ಉರಿಯಿಂದ ಈಗ ಫ್ಲೆಕ್ಸ್ ತಂದು ಕಟ್ಟಿದ್ದಾರೆ. ಗಲಭೆಯಲ್ಲಿ ಏಳೆಂಟು ಗುಂಡು ಹಾರಿದ್ದು ಬಂದೂಕು, ಗುಂಡು ಹಾಗೂ ಹೊಡೆದವನು ಮತ್ತು ಸತ್ತವನೂ ಎಲ್ಲವೂ ಕಾಂಗ್ರೆಸ್ ಪಕ್ಷಕ್ಕೇ ಸಂಬಂಧಿಸಿದ್ದು. ನೇರವಾಗಿ ಜನಾರ್ಧನರೆಡ್ಡಿ ಮನೆ ಮೇಲೆ ಗುಂಡು ಹಾರಿಸುವುದು ಮಾಧ್ಯಮಗಳಲ್ಲಿ ಬಿತ್ತರವಾಗಿದೆ ಎಂದರು.

ನವೆಂಬರ್ ಕ್ರಾಂತಿ ಪ್ರಕ್ರಿಯೆ ಆರಂಭ: ನವೆಂಬರ್ ಕ್ರಾಂತಿ ಬಗ್ಗೆ ತಾವು ಭವಿಷ್ಯ ಹೇಳಿದ್ರಿ ಆದರೆ ಯಾವುದೇ ಕ್ರಾಂತಿಯಾಗಿಲ್ಲ ಎಂಬುದಕ್ಕೆ ಪ್ರತಿಕ್ರಿಯಿಸಿದ ಅಶೋಕ್, ನವೆಂಬರ್ ಕ್ರಾಂತಿ ಬಗ್ಗೆ ನಾನೊಬ್ಬನೇ ಹೇಳಿದ್ದಲ್ಲ. ಕಾಂಗ್ರೆಸನವರೇ ಹೇಳಿಲ್ಲವೇ? ಎಂದರು.

ನಾನು ಹೇಳಿದ ಭವಿಷ್ಯ ನಿಜ ಆಗಿದೆ. ಈಗಾಗಲೇ ಎಲ್ಲಾ ಪ್ರಕ್ರಿಯೆ ಶುರುವಾಗಿದೆ. ಬದಲಾವಣೆ ಪ್ರಕ್ರಿಯೆ ಪ್ರಾರಂಭಗೊಂಡಿದೆ. ಇಲ್ಲವಾದರೆ ಸಿದ್ದರಾಮಯ್ಯ ಏಕೆ ದಿನ ನಾನೇ ಇರುತ್ತೇನೆಂದು ಹೇಳಬೇಕು. ಬದಲಾವಣೆ ಕಾರಣಕ್ಕೆ ಇದೆಲ್ಲಾ ನಡೆಯುತ್ತಿದೆ. ಅವರು ಲೀಸ್‌ನಲ್ಲಿದ್ದಾರೆ. ಅವಧಿ ಮುಗಿದ ಕೂಡಲೇ ಕೊಡಬೇಕು, ಕೊಡುತ್ತಾರೆ. ಕೇಂದ್ರದ ಕಾಂಗ್ರೆಸ್ ವರಿಷ್ಠರು ಹೇಳಿದಾಗ ಬಿಟ್ಟುಕೊಡುವುದಾಗಿ ಸಿದ್ದರಾಮಯ್ಯನವರೇ ಹೇಳಿದ್ದಾರಲ್ಲಾ. ನವೆಂಬರ್ ಕ್ರಾಂತಿಯಂತೂ ಶುರುವಾಗಿದೆ ಎಂದರು. ಲೀಸ್ ಅವಧಿ ಮುಗಿಯುವುದು ಯಾವಾಗ ಎಂಬುದಕ್ಕೆ ಪ್ರತಿಕ್ರಿಯಿಸಿ, ಅದನ್ನು ಡಿ.ಕೆ.ಶಿವಕುಮಾರ್ ಹೇಳಬೇಕು ಎಂದು ಹೇಳಿದರು.

ನನ್ನ ಜಾತಿಯವರೇ ನನಗೆ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡುತ್ತಿದ್ದಾರೆಂದು ಡಿ.ಕೆ.ಶಿವಕುಮಾರ್ ಹೇಳಿರುವುದರ ಬಗ್ಗೆ ಪ್ರತಿಕ್ರಿಯಿಸಿ, ಅದು ಅವರ ಪಾರ್ಟಿಯಲ್ಲಿ ಇರಬೇಕು. ಆ ಹಿನ್ನೆಲೆಯಲ್ಲಿ ಅವರು ಹೇಳುತ್ತಿದ್ದಾರೆ ಅಷ್ಟೇ ಎಂದರು. ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯುತ್ತಿಲ್ಲವೆಂಬ ಬಗ್ಗೆ ಪ್ರತಿಕ್ರಿಯಿಸಿ, ನವೆಂಬರ್ ಕ್ರಾಂತಿಗಾಗಿ ಕಾಯುತ್ತಿದ್ದಾರೆ. ಕ್ರಾಂತಿ, ವಾಂತಿ ಅಥವಾ ಭ್ರಾಂತಿಯಾಗುತ್ತಾ ನೋಡಿಕೊಂಡು ಚುನಾವಣೆಗಳನ್ನು ಮಾಡುತ್ತಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಜನರ ಪಾಲಿಗೆ ಸತ್ತು ಹೋಗಿದೆ ಎಂದರು.

ಸಿದ್ದರಾಮಯ್ಯ ಅತೀ ಹೆಚ್ಚು ಸಾಲ ಮಾಡಿದ ಸಿಎಂ: ಕರ್ನಾಟಕದ ಎಲ್ಲಾ ಮುಖ್ಯಮಂತ್ರಿಗಳ ಪೈಕಿ ಸಿದ್ದರಾಮಯ್ಯ ಅತೀ ಹೆಚ್ಚು ಸಾಲ ಮಾಡಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳು ಮಾಡಿರುವ ಎಲ್ಲಾ ಸಾಲವನ್ನು ಸಿದ್ದರಾಮಯ್ಯ ಒಬ್ಬರೇ ಮೀರಿಸಿದ್ದಾರೆ. ಇದುವರೆಗೂ 2 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ವರ್ಷವೂ 1 ಲಕ್ಷ 10 ಸಾವಿರ ಕೋಟಿಯೇನೋ ಸಾಲ ಮಾಡಲು ತೀರ್ಮಾನ ಮಾಡಿದ್ದಾರೆ ಅಂದ್ರೆ ಸಾಲದ ಸುಳಿಯಲ್ಲಿ ನಮ್ಮನ್ನು (ರಾಜ್ಯದ ಜನತೆಯನ್ನು) ಸಿಲುಕಿಸುತ್ತಿದ್ದಾರೆ. ಜನ ಈ ಸರ್ಕಾರ ತೊಲಗಲಿ ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಎಂದು ತಿಳಿಸಿದರು.

ಡಿಕೆಶಿಗೆ ಬಿಜೆಪಿಯಲ್ಲಿ ನೋ ಎಂಟ್ರಿ: ಕ್ರಾಂತಿಯಲ್ಲಿ ಡಿ.ಕೆ.ಶಿವಕುಮಾರ್ ನಿಮ್ಮ ಕಡೆ (ಬಿಜೆಪಿ) ಮುಖ ಮಾಡಿದರೆ? ಎಂಬುದಕ್ಕೆ ಪ್ರತಿಕ್ರಿಯಿಸಿ, ನಾವು ಸೇರಿಸುವುದಿಲ್ಲ. ಆ ಬಗ್ಗೆ ತೀರ್ಮಾನ ಮಾಡಿದ್ದೇವೆ. ಅವರಿಗೆ ನೋ ಎಂಟ್ರಿ ಎಂದು ಅಶೋಕ್ ಹೇಳಿದರು. ಶಾಸಕ ಟಿ.ಎಸ್.ಶ್ರೀವತ್ಸ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕೆ.ಸುಬ್ಬಣ್ಣ, ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮತ್ತಿತರರು ಹಾಜರಿದ್ದರು.

ಕಾಂಗ್ರೆಸ್‌ನವರಿಗೆ ಕೂಲಿ ಚೋರಿ ಮಾಡಲಾಗದ ಭಯ ಶುರುವಾಗಿದೆ

ಮೈಸೂರು,ಜ.11(ಪಿಎಂ)– ಉದ್ಯೋಗ ಖಾತರಿ ಯೋಜನೆಯಲ್ಲಿ ಕಾಂಗ್ರೆಸ್‌ನವರು ಕೂಲಿ ಚೋರಿ ಮಾಡುತ್ತಿದ್ದರು. ಇದೀಗ ಕೇಂದ್ರದ ನರೇಂದ್ರ ಮೋದಿ ಸರ್ಕಾರ ಇದರಲ್ಲಿ ಪಾರದರ್ಶಕತೆ ತರಲು ಹೊರಟಿದೆ. ಹಾಗಾಗಿ ಎಲ್ಲೋ ಒಂದು ಕಡೆ ಕಾಂಗ್ರೆಸ್‌ನವರಿಗೆ ಭಯ ಶುರುವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಎಲ್ಲೂ ಚರ್ಚೆ ಇಲ್ಲದೇ ಇದ್ದರೂ ಕರ್ನಾಟಕದಲ್ಲಿ ಮಾತ್ರ ಚರ್ಚೆ ಮಾಡಲಾಗುತ್ತಿದೆ. ಕಾಂಗ್ರೆಸ್‌ನವರು ಈ ಬಗ್ಗೆ ಟೀಕಾಪ್ರಹಾರ ನಡೆಸುತ್ತಿದ್ದಾರೆ. ನರೇಂದ್ರ ಮೋದಿಯವರ ಸರ್ಕಾರ ಕಳೆದ 18 ವರ್ಷಗಳ ಹಿಂದೆ ಇದ್ದಂತಹ ಉದ್ಯೋಗ ಖಾತರಿ ಯೋಜನೆ ಸಂಬಂಧ ನಡೆಯುತ್ತಿದ್ದ ಲೋಪ ದೋಷ ಸರಿಪಡಿಸುವ ದೃಷ್ಟಿಯಿಂದ ಮತ್ತು ಅಭಿವೃದ್ಧಿ ಕಾರ್ಯ ಆಗಬೇಕು ಹಾಗೂ ಭ್ರಷ್ಟಾಚಾರ ಮುಕ್ತಗೊಳಿಸಬೇಕೆಂಬ ದೃಷ್ಟಿಯಿಂದ 'ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್ಗರ್ ಅಂಡ್ ಅಜೀವಿಕಾ ಮಿಷನ್ (ಗ್ರಾಮೀಣ್) (ವಿಬಿ ಜಿ ರಾಮ್ ಜಿ)' ಹೆಸರಿನಲ್ಲಿ ಹೊಸದಾಗಿ ಅನುಷ್ಠಾನಕ್ಕೆ ತೀರ್ಮಾನಿಸಿದೆ ಎಂದರು.

ಕಾಂಗ್ರೆಸ್‌ನವರು ಹೇಳುವ ಪ್ರಕಾರ 'ವಿಬಿ ಜಿ ರಾಮ್ ಜಿ' ಆಗಿದೆ. ಆದರೆ ಅಲ್ಲಿರುವ ಹೆಸರು 'ಭಾರತ' ಎಂಬುದಾಗಿದೆ. ಹಾಗಾಗಿ ವಿಕಸಿತ ಭಾರತಕ್ಕೆ ಕಾಂಗ್ರೆಸ್‌ನವರು ಟೀಕಾಪ್ರಹಾರ ನಡೆಸುತ್ತಿದ್ದಾರೆ. ಮೋದಿಯವರ ಉದ್ದೇಶ ವಿಕಸಿತ ಭಾರತವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಬಡವರಿಗೆ ಉದ್ಯೋಗ ಖಾತರಿ ಸಿಗಬೇಕೆಂಬುದು ಕೇಂದ್ರ ಸರ್ಕಾರದ ಸದುದ್ದೇಶವಾಗಿದೆ. ಈ ಉದ್ಯೋಗ ಖಾತರಿಯನ್ನು ಪಾರದರ್ಶಕತೆ ತಂದಿರುವುದರಿಂದ ಕಾಂಗ್ರೆಸ್‌ನವರು ನಿರುದ್ಯೋಗಿಗಳು ಆಗುತ್ತಾರೆ. ಅದಕ್ಕೆ ಅವರಿಗೆ ಭಯ ಶುರುವಾಗಿದೆ ಎಂದು ಟೀಕಿಸಿದರು.

ಈ ಯೋಜನೆ ಸಂಬಂಧ ರಾಜ್ಯ ಕಾಂಗ್ರೆಸ್ ಸರ್ಕಾರ ವಿಶೇಷ ಅಧಿವೇಶನ ಕರೆಯುವುದಾಗಿ ಘೋಷಿಸಿದೆ. ಆದರೆ ಅಧಿಸೂಚನೆ ಹೊರಡಿಸಿಲ್ಲ ಎಂದರು. ಅಧಿವೇಶನ ಬಹಿಷ್ಕರಿಸುತ್ತೀರಾ ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರದ ಜನ್ಮ ಜಾಲಾಡುವಷ್ಟು ದಾಖಲೆಗಳು ನಮ್ಮ ಬಳಿ ಇವೆ. ಅವರೇ ಸಿಕ್ಕಿಕೊಳ್ಳುತ್ತಾರೆ. ಅಧಿವೇಶನದಲ್ಲಿ ಪಾಲ್ಗೊಳ್ಳುವ ಸಂಬಂಧ ನಾವು ನಮ್ಮ ಪಕ್ಷದ ಕೇಂದ್ರ ನಾಯಕರೊಂದಿಗೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ. ಅಧಿವೇಶನದ ಬಗ್ಗೆ ಯಾವ ರೀತಿ ಹೋರಾಟ ಮಾಡಬೇಕೆಂಬ ಬಗ್ಗೆ ಕೆಲವೇ ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಅಖಾಡ ಅವರೇ ಸಜ್ಜುಗೊಳಿಸಲಿ: ಮನರೇಗಾ ಸಂಬಂಧ ಡಿ.ಕೆ.ಶಿವಕುಮಾರ್ ಬಹಿರಂಗ ಚರ್ಚೆಗೆ ಆಹ್ವಾನ ಕೊಟ್ಟಿದ್ದಾರೆ. ವೇದಿಕೆ ಸಿದ್ಧವಾಗುತ್ತದೆಯೇ? ಎಂಬುದಕ್ಕೆ ಉತ್ತರಿಸಿ, ಸವಾಲು ಹಾಕಿರುವುದು ಅವರು. ನಾವು ಸವಾಲು ಸ್ವೀಕರಿಸಿದ್ದೇವೆ. ಕುಸ್ತಿಗೆ ಕರೆದವರು ಅವರು, ಅಖಾಡ ಅವರೇ ಸಜ್ಜುಗೊಳಿಸಬೇಕು. ನಾವು ಎನ್‌ಡಿಎ ಆಗಿ ಸಮ್ಮತಿ ಕೊಟ್ಟಿದ್ದೇವೆ ಎಂದು ತಿಳಿಸಿದರು.

ರಾಜ್ಯ ಮಟ್ಟದ ಸೀನಿಯರ್ ಖೋ–ಖೋ ಚಾಂಪಿಯನ್‌ಶಿಪ್

- ಚಾಂಪಿಯನ್ ಆಗಿ ಹೊರಹೊಮ್ಮಿದ ರಾಯಚೂರು ತಂಡ
- ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪರಿಂದ ಟ್ರೋಫಿ ಪ್ರದಾನ



ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ಸೀನಿಯರ್ ಖೋಖೋ ಚಾಂಪಿಯನ್ ಶಿಪ್ 2026 ಪಂದ್ಯಾವಳಿಯಲ್ಲಿ ಚಾಂಪಿಯನ್ ಆದ ರಾಯಚೂರು ತಂಡಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಟ್ರೋಫಿ ನೀಡಿ ಅಭಿನಂದಿಸಿದರು.

ಎರಡು ದಿನಗಳ ಕಾಲ ನಡೆದ ಪುರುಷರಿಗಾಗಿ ರಾಜ್ಯ ಮಟ್ಟದ ಸೀನಿಯರ್ ಖೋಖೋ ಚಾಂಪಿಯನ್ ಶಿಪ್ 2026 ಪಂದ್ಯಾವಳಿಯಲ್ಲಿ ರಾಯಚೂರು ತಂಡ, ಮೈಸೂರು ತಂಡವನ್ನು ಸೋಲಿಸುವ ಮೂಲಕ ಚಾಂಪಿಯನ್ ಪಟ್ಟ ಅಲಂಕರಿಸಿತು. ಭಾರೀ ಪೈಪೋಟಿ ನಡುವೆಯೂ ರೋಚಕ ಸೋಲು ಕಂಡ ಮೈಸೂರು ರನ್ನರ್ಸ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಇನ್ನು ಮೂರನೇ ಸ್ಥಾನವನ್ನು ಚಾಮರಾಜನಗರ ಮತ್ತು ಧಾರವಾಡ ತಂಡಗಳು ಜಂಟಿಯಾಗಿ ಹಂಚಿ ಕೊಂಡವು. ಟೂರ್ನಿಯಲ್ಲಿ ಬೆಸ್ಟ್ ಅಟ್ಯಾಕರ್ ಆಗಿ ಗಗನ್(ಮೈಸೂರು), ಬೆಸ್ಟ್ ಡಿಫೆಂಡರ್ ಆಗಿ ಕಿರಣ್ (ರಾಯಚೂರು), ಮತ್ತು ಬೆಸ್ಟ್ ಆಲ್‌ರೌಂಡರ್ ಆಗಿ ಶಿವಪ್ಪ (ರಾಯಚೂರು) ಪ್ರಶಸ್ತಿ ಪಡೆದರು.

ಮೈಸೂರು, ಜ.11(ವಿವಿಹೆಚ್)– ಕ್ರೀಡೆ ಸಂವಿಧಾನದ ಆಶಯವಾದ ಭ್ರಾತೃತ್ವವನ್ನು ಎಲ್ಲರ ನಡುವೆ ಬಿತ್ತುವ ಕೆಲಸ ಮಾಡುತ್ತದೆ ಎಂದು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಕುವೆಂಪುನಗರದ ವಿವೇಕಾನಂದ ಕ್ರೀಡಾಂಗಣದಲ್ಲಿ ಕರ್ನಾಟಕ ಅಮೇಚೂರ್ ಖೋಖೋ ಅಸೋಸಿಯೇಷನ್ (ಕೆಎಕೆಕೆಎ) ಹಾಗೂ ಮೈಸೂರು ಜಿಲ್ಲಾ ಅಮೆಚೂರ್ ಖೋಖೋ ಅಸೋಸಿಯೇಷನ್ (ಎಂಡಿಎಕೆಕೆಎ) ವತಿಯಿಂದ ಕರ್ನಾಟಕ ಅಮೆಚೂರ್ ಖೋಖೋ ಸಂಸ್ಥೆಯ ಮಾಜಿ ಅಧ್ಯಕ್ಷ ಎನ್.ಪ್ರಕಾಶ್ ಸ್ಮರಣಾರ್ಥ ಆಯೋಜಿಸಲಾಗಿದ್ದ ಪುರುಷರಿಗಾಗಿ ರಾಜ್ಯ ಮಟ್ಟದ ಸೀನಿಯರ್ ಖೋಖೋ ಚಾಂಪಿಯನ್ ಶಿಪ್ 2026 ಪಂದ್ಯಾವಳಿ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಯಾವುದೇ ಧರ್ಮ, ಜಾತಿ, ಮತ, ಭೇದಗಳನ್ನು ನೋಡದೇ ಎಲ್ಲರನ್ನು ಒಂದೆಡೆಗೆ ಸೆಳೆಯುವ ಕಲೆ ಇರುವುದು ಕ್ರೀಡೆಗೆ ಮಾತ್ರ. ಎಲ್ಲರಲ್ಲಿ ಒಂದಾಗಿ ಬಾಳುವಂತೆ ಸಂದೇಶ ಸಾರುವುದು ಕ್ರೀಡೆಯಾಗಿದ್ದು, ಯುವ ಸಮೂಹ ಕ್ರೀಡೆಯತ್ತ ಒಲವು ಹೆಚ್ಚಿಸಿಕೊಳ್ಳಬೇಕಿದೆ ಎಂದರು.

ಕ್ರಿಕೆಟ್‌ನ 20–20 ಮಾದರಿಯಲ್ಲಿ ಖೋ–ಖೋ ಆಟವಿದ್ದು, ಇತರೆ ಕ್ರೀಡೆಗಳನ್ನು ಮೀರಿಸುವ ಕೌಶಲ ಹೊಂದಿದೆ. ಖೋ–ಖೋ ಪಟುಗಳು ಏಕಚಿತ್ತತೆಯಿಂದ ಎಲ್ಲರನ್ನು ತಮ್ಮತ್ತ ಸೆಳೆಯುವ ಮೂಲಕ ಗೆಲುವು, ಸೋಲನ್ನು ಲೆಕ್ಕಿಸದೇ ಆಟವಾಡಿ, ಎಲ್ಲರಿಗೂ ಸ್ಫೂರ್ತಿಯಾಗುವ ಮೂಲಕ ಕ್ರೀಡಾ ಮನೋಭಾವವನ್ನು ಬಿತ್ತಿದ್ದೀರಿ ಎಂದು ಹುರಿದುಂಬಿಸಿದರು.

ಮಾಜಿ ಶಾಸಕ ಎಸ್.ಕೆ.ಸೋಮಶೇಖರ್ ಮಾತನಾಡಿ, ಕ್ರೀಡಾಪಟುಗಳ ಖೋ–ಖೋ ಆಟ ಎನ್.ಪ್ರಕಾಶ್ ಅವರನ್ನು ನೆನೆಯುವಂತೆ ಮಾಡಿತು. ಪಾದರಸದಂತೆ ಚುರುಕಾಗಿ ಕ್ರೀಡೆಯಲ್ಲಿ ತೊಡಗಿಕೊಂಡು ಎಲ್ಲರನ್ನೂ ರಂಜಿಸುವಲ್ಲಿ ಕ್ರೀಡಾಪಟುಗಳು ಯಶಸ್ವಿಯಾಗಿದ್ದಾರೆ. ಖೋ–ಖೋ ಮೂಲಕ ಕನ್ನಡದ ಕುಡಿಗಳು ರಾಜ್ಯ, ದೇಶ, ವಿದೇಶಗಳಲ್ಲಿ ಮಿಂಚುವಂತಾಗಲಿ ಎಂದು ಆಶಿಸಿದರು.

ಮೈಸೂರು ಜಿಲ್ಲಾ ಅಮೇಚೂರ್ ಖೋಖೋ ಅಸೋಸಿಯೇಷನ್ ಅಧ್ಯಕ್ಷ ನಾಗರಾಜ್ ವಿ.ಬೈರಿ, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜ್, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್, ಸಾಮಾಜಿಕ ಹೋರಾಟಗಾರ ಅಹಿಂದ ಜವರಪ್ಪ ಜನತಾ ಏಜೆನ್ಸಿ ಮಾಲೀಕ ಜಿನೇಶ್, ಅಚೀವರ್ಸ್ ಪ.ಪೂ.ಕಾಲೇಜು ಪ್ರಾಂಶುಪಾಲ ಬಿ.ಸಣ್ಣೇಗೌಡ, ಶಿಕ್ಷಣ ಇಲಾಖೆ ಅಧೀಕ್ಷಕ ಸ್ವಾಮಿ, ಹಿರಿಯ ಖೋ–ಖೋ ಪಟು ಶ್ರೀಪತಿ ಭಟ್, ಕೃಷ್ಣಸ್ವಾಮಿ, ನಿವೃತ್ತ ದೈಹಿಕ ಶಿಕ್ಷಕ ಕೆ.ಎಂ.ಕಾಂತರಾಜು ಉಪಸ್ಥಿತರಿದ್ದರು.

ಭಾರತದ ಮೇಲೆ ದಾಳಿಗೆ ಸಾವಿರಾರು ಆತ್ಮಹತ್ಯಾ ಬಾಂಬರ್‌ಗಳು ರೆಡಿ

ಪಾಕ್ ಮೂಲದ ಉಗ್ರ ಮಸೂದ್ ಅಜರ್ ಆಡಿಯೋ ವೈರಲ್!

ನವದೆಹಲಿ: ಭಾರತದ ಆಪರೇಷನ್ ಸಿಂಧೂರ್ ಸೇನಾ ಕಾರ್ಯಾಚರಣೆ ವೇಳೆ ತನ್ನ ಇಡೀ ಕುಟುಂಬ ಕಳೆದುಕೊಂಡಿದ್ದ ಪಾಕಿಸ್ತಾನ ಮೂಲದ ಉಗ್ರ ಮಸೂದ್ ಅಜರ್ ಇದೀಗ ಪ್ರತಿದಾಳಿ ಸಿದ್ಧತೆ ನಡೆಸಿದ್ದು, ತನ್ನ ಆತ್ಮಹತ್ಯಾ ಬಾಂಬರ್‌ಗಳು ದಾಳಿಗೆ ಸಿದ್ಧರಾಗಿದ್ದಾರೆ ಎಂಬ ಸಂದೇಶ ರವಾನಿಸಿರುವ ಸ್ಫೋಟಕ ಆಡಿಯೋ ಇದೀಗ ಬಹಿರಂಗವಾಗಿದೆ.

ಪಾಕಿಸ್ತಾನದ ಭಯೋತ್ಪಾದಕ ಸಂಘಟನೆ ಜೈಶ್–ಎ–ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್‌ಗೆ ಸೇರಿದ ಆಡಿಯೋ ಸಂದೇಶವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ವೈರಲ್ ಆಗಿದೆ.

ಸಾವಿರಕ್ಕೂ ಹೆಚ್ಚು ಆತ್ಮಹತ್ಯಾ ಬಾಂಬರ್‌ಗಳು ಸಿದ್ಧರಿದ್ದಾರೆ ಮತ್ತು ಭಾರತಕ್ಕೆ ನುಸುಳಲು ಅವಕಾಶ ನೀಡುವಂತೆ ತನ್ನ ಮೇಲೆ ಒತ್ತಡ ಹೇರುತ್ತಿದ್ದಾರೆ. ಈ ಉಗ್ರರು ದಾಳಿಗಳನ್ನು ನಡೆಸಲು ಮತ್ತು ಅವರು ತಮ್ಮ ಉದ್ದೇಶಕ್ಕಾಗಿ ಹುತಾತ್ಮರಾಗಲು ಕರೆಯುವುದನ್ನು ಸಾಧಿಸಲು ಹೆಚ್ಚು ಪ್ರೇರೇಪಿತರಾಗಿದ್ದಾರೆ ಎಂದು ಅಜರ್ ಹೇಳುತ್ತಿರುವುದು ಕೇಳಿಬರುತ್ತಿದೆ.



ವೈರಲ್ ಆಡಿಯೋದಲ್ಲಿರುವ ವ್ಯಕ್ತಿ ಗಂಭೀರ ಬೆದರಿಕೆ ಹಾಕಿದ್ದು, ಭಾರತದ ವಿರುದ್ಧ ಯಾವುದೇ ಸಮಯದಲ್ಲಿ, ಎಲ್ಲಿ ಯಾದರೂ ದಾಳಿ ಮಾಡಲು ಸಾವಿರಾರು ಆತ್ಮಹತ್ಯಾ ಬಾಂಬರ್‌ಗಳು ಸಿದ್ಧರಿದ್ದಾರೆ ಎಂದು ಮಸೂದ್ ಅಜರ್ ಹೇಳಿರುವುದು ವೈರಲ್ ಆಗಿರುವ ಆಡಿಯೋದಲ್ಲಿ ದಾಖಲಾಗಿದೆ. ಈ ಕುರಿತು ರಾಷ್ಟ್ರೀಯ ಮಾಧ್ಯಮಗಳು ವರದಿ ಮಾಡಿದ್ದು, ಪ್ರಸ್ತುತ ವೈರಲ್ ಆಗಿರುವ ಆಡಿಯೋ ಸಂದೇಶದಲ್ಲಿ ಹುತಾತ್ಮೆ ಎಂದು ಉಲ್ಲೇಖಿಸಲಾಗಿದೆ. ತನ್ನ ಭಯೋತ್ಪಾದಕರು ಯಾವುದೇ ಲೌಕಿಕ ಸೌಕರ್ಯಗಳನ್ನು ಬೇಡುವುದಿಲ್ಲ ಮತ್ತು ಯಾವುದೇ ವೈಯಕ್ತಿಕ ಲಾಭದ ಅಗತ್ಯವಿಲ್ಲ ಎಂದು ಮಸೂದ್ ಅಜರ್ ಹೇಳಿರುವುದು ಆಡಿಯೋದಲ್ಲಿ ದಾಖಲಾಗಿದೆ. ಆದಾಗ್ಯೂ, ಆಡಿಯೊ ರೆಕಾರ್ಡಿಂಗ್‌ನ ದಿನಾಂಕ ಮತ್ತು ಸತ್ಯಾಸತ್ಯತೆಯನ್ನು ಸ್ವತಂತ್ರವಾಗಿ ಪರಿಶೀಲಿಸಲು ಸಾಧ್ಯವಾಗಲಿಲ್ಲ.

ಕೋಲಾಹಲ: ಅಂತೆಯೇ ಈ ಭಯೋತ್ಪಾದಕರ ಸಂಪೂರ್ಣ ಪಟ್ಟಿಯನ್ನು ಸಾರ್ವಜನಿಕಗೊಳಿಸಿದರೆ, ಅದು ಸಾಮಾಜಿಕ ಮಾಧ್ಯಮದಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಗುತ್ತದೆ ಎಂದು ಅದು ಹೇಳುತ್ತದೆ.

ಅಂದಹಾಗೆ ಜೈಶ್–ಎ–ಮೊಹಮ್ಮದ್‌ಗೆ ಸಂಬಂಧಿಸಿದ ಇಂತಹ ಆಡಿಯೋ ಅಥವಾ ವಿಡಿಯೋ ಸಂದೇಶಗಳು ಹೊರಹೊಮ್ಮುತ್ತಿರುವುದು ಇದೇ ಮೊದಲಲ್ಲ.



ಚಾಮುಂಡಿಬೆಟ್ಟ ಪಾದದಲ್ಲಿ ಪ್ರಸಾದ ವಿನಿಯೋಗ...

ಚಾಮುಂಡಿಬೆಟ್ಟ ಪಾದದ ಹಿರಿಯ ನಾಗರೀಕರ ಬಳಗದ 10ನೇ ವಾರ್ಷಿಕೋತ್ಸವ ಹಾಗೂ ಧನುರ್ಮಾಸದ ಅಂಗವಾಗಿ ಚಾಮುಂಡಿಬೆಟ್ಟ ಪಾದದಲ್ಲಿರುವ ಗಣಪತಿ ವಿಗ್ರಹಕ್ಕೆ ಭಾನುವಾರ ವಿಶೇಷ ಪೂಜೆ ನೆರವೇರಿಸಲಾಯಿತು. ಪೂಜೆ ನಂತರ ಬೆಟ್ಟ ಹತ್ತುವ ಭಕ್ತರಿಗೆ ಬಳಗದವರು ಪ್ರಸಾದ ವಿತರಣೆ ಮಾಡಿದರು.

ವಿಪಕ್ಷ ನಾಯಕ ಅಶೋಕ್ ಸಮ್ಮುಖದಲ್ಲಿ ಚಾಮರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿತರ ಪ್ರಹಸನ!



ಮೈಸೂರಿನ ಹೋಟೆಲ್‌ವೊಂದರಲ್ಲಿ ಬಿಜೆಪಿ ನಾಯಕ ಆರ್.ಅಶೋಕ್ ಸಮ್ಮುಖದಲ್ಲಿ ಚಾಮರಾಜ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾದ ಎಲ್.ನಾಗೇಂದ್ರ, ಪ್ರತಾಪ್ ಸಿಂಹ, ಜಯಪ್ರಕಾಶ್ ಇನ್ನಿತರ ಮುಖಂಡರು ಸೇರಿದ್ದರು.

ಮೈಸೂರು, ಜ.11– ಚಾಮರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ನನಗೇ ಬೇಕು ಎನ್ನುತ್ತಿರುವ ಮುಖಂಡರೊಟ್ಟಿಗೆ ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ಚಹಾ ಸವಿಯುತ್ತಾ ಕೆಲಕಾಲ ಹರಟಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ನಂತರ ಆರ್.ಅಶೋಕ್, ದಿವಾನ್ಸ್ ರಸ್ತೆಯ ಖಾಸಗಿ ಹೋಟೆಲ್‌ಗೆ ತೆರಳಿದರು. ಅವರೊಂದಿಗೆ ಚಾಮರಾಜ ಕ್ಷೇತ್ರದ ಟಿಕೆಟ್ ಆಕಾಂಕ್ಷಿಗಳಾದ ಮಾಜಿ ಶಾಸಕ ಎಲ್. ನಾಗೇಂದ್ರ, ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ಹೊರಟರು. ಎಲ್ಲರೂ ಹೋಟೆಲ್‌ನಲ್ಲಿರುವಾಗ ಮತ್ತೋರ್ವ ಆಕಾಂಕ್ಷಿ ಜಯಪ್ರಕಾಶ್(ಜೆಪಿ) ಅಲ್ಲಿ ಸೇರಿಕೊಂಡರು.

ಅಶೋಕ್ ಅವರ ಬಲಗಡೆ ಎಲ್.ನಾಗೇಂದ್ರ ಹಾಗೂ ಎಡಗಡೆ ಪ್ರತಾಪ್ ಸಿಂಹ ಆಸೀನರಾದರೆ, ಮುಂದಿನ ಟೇಬಲ್ ಬಳಿ ಜಯಪ್ರಕಾಶ್ ಕುಳಿತಿದ್ದರು. ಆಸುಪಾಸಲ್ಲಿ ಸಂಸದ ಯದುವೀರ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಮತ್ತಿತರರಿದ್ದರು. ಈ ವೇಳೆ ಕೆಲವರು, ಚಾಮರಾಜ ಟಿಕೆಟ್ ಆಕಾಂಕ್ಷಿಗಳೆಲ್ಲಾ ಒಟ್ಟಿಗೆ ಸೇರಿದ್ದಾರೆ, ಆದರೆ ಡಾ.ಶುಶ್ರುತ್‌ಗೌಡ ಒಬ್ಬರು ಇಲ್ಲಿಲ್ಲ. ಅವರೂ ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಛೇಡಿಸಿದರು. ಇದಕ್ಕೆ ಅಶೋಕ್ ಸೇರಿದಂತೆ ಎಲ್ಲರೂ ನಕ್ಕು ಸುಮ್ಮನಾದರು.

ನಾನು ಈ ಊರಿನವನಲ್ಲ: ಈ ವೇಳೆ, ಚುನಾವಣೆಗೆ ಇನ್ನೂ ಎರಡೂಕಾಲು ವರ್ಷವಿರುವಾಗಲೇ ಚಾಮರಾಜ ಕ್ಷೇತ್ರದ ಟಿಕೆಟ್‌ಗೆ ಪೈಪೋಟಿ ಶುರುವಾಗಿರುವ ಬಗ್ಗೆ ಪ್ರಶ್ನಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅಶೋಕ್, ನಾನು ಈ ಊರಿನವನಲ್ಲಪ್ಪ ಎಂದಷ್ಟೇ ಹೇಳಿದರು. ಇದಕ್ಕೂ ಮುನ್ನ ಸುದ್ದಿಗೋಷ್ಠಿ ನಂತರ ಮಾಧ್ಯಮದವರೊಂದಿಗೆ ಸಹಜ ಮಾತುಕತೆ ವೇಳೆ, ಮುಂದೆ ನಮ್ಮದೇ ಸರ್ಕಾರ ಬರುವುದರಿಂದ ಟಿಕೆಟ್‌ಗೆ ಪೈಪೋಟಿ ಶುರುವಾಗಿದೆ ಎಂದು ನಗುತ್ತಾ ಹೇಳಿದರು. ಇತ್ತೀಚಿನ ಬೆಳವಣಿಗೆ ಬಗ್ಗೆ ಅಶೋಕ್ ಅವರು ಯಾವುದೇ ಮಾತುಕತೆ ನಡೆಸಿಲ್ಲ ಎಂದು ಎಲ್.ನಾಗೇಂದ್ರ ಸ್ಪಷ್ಟಪಡಿಸಿದ್ದಾರೆ.

ಮುಂದುವರೆದ ಜನಸಂಪರ್ಕ: ಚಾಮರಾಜ ಕ್ಷೇತ್ರದ ಬಿಜೆಪಿ ಟಿಕೆಟ್ ವಿಚಾರವಾಗಿ ಪ್ರತಾಪ್ ಸಿಂಹ ಹೇಳಿಕೆ, ಹೊಸ ಬೆಳವಣಿಗೆಗೆ ಕಾರಣವಾಗಿದೆ. ಅವರು, ರಾಷ್ಟ್ರ ರಾಜಕಾರಣದಿಂದ ರಾಜ್ಯ ರಾಜಕಾರಣಕ್ಕೆ ಬರುವುದಾಗಿ ಹೇಳುವುದರೊಂದಿಗೆ ಚಾಮರಾಜ ಕ್ಷೇತ್ರದಲ್ಲಿ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ ಬಳಿಕ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ ಸಿಡಿದೆದ್ದರು. ಇಷ್ಟು ಮುಂಚಿತವಾಗಿ ಟಿಕೆಟ್ ಬಗ್ಗೆ ಮಾತನಾಡುವ ಅಗತ್ಯವೇನು ಎಂದು ಪ್ರಶ್ನಿಸುತ್ತಲೇ ಪ್ರತಾಪ್ ಸಿಂಹ ವಿರುದ್ಧ ಹರಿಹಾಯ್ದರು. ಇವರಿಬ್ಬರ ವಾಕ್ಸಮರದ ನಡುವೆ ಖ್ಯಾತ ನರರೋಗತಜ್ಞ ಡಾ.ಶುಶ್ರುತ್ ಗೌಡ ಅವರು, ನಾನೇನು ರಾಜಕೀಯ ಸನ್ಯಾಸಿಯಲ್ಲ, ನಾನೂ ಕೂಡ ಪ್ರಬಲ ಆಕಾಂಕ್ಷಿ. ಆದರೆ ಈಗಲೇ ಟಿಕೆಟ್ ವಿಚಾರ ಚರ್ಚಿಸುವುದು ಸರಿಯಲ್ಲ, ಅದನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಕುಟುಕಿದ್ದರು. ಬಳಿಕ ಮುಖಂಡ ಜಯಪ್ರಕಾಶ್ ಸುದ್ದಿಗೋಷ್ಠಿ ನಡೆಸಿ, ನಾನು ಮೂರು ದಶಕಗಳಿಂದ ಪಕ್ಷದ ಕೆಲಸ ಮಾಡುತ್ತಿದ್ದೇನೆ. ಶಂಕರಲಿಂಗೇಗೌಡರ ಕಾಲದಿಂದಲೂ ಆಕಾಂಕ್ಷಿತನಾಗಿದ್ದರೂ ಪಕ್ಷದ ಸೂಚನೆ ಪರಿಪಾಲಿಸಿದ್ದೇನೆ. ಈ ಬಾರಿ ನನ್ನನ್ನು ಪರಿಗಣಿಸಬೇಕು ಎಂದು ಆಗ್ರಹಿಸಿದ್ದರು. ಈ ಎಲ್ಲಾ ಬೆಳವಣಿಗೆಯಿಂದ ಟಿಕೆಟ್ ಆಕಾಂಕ್ಷಿಗಳ ಕ್ಷೇತ್ರ ಪ್ರದಕ್ಷಿಣೆ ಚುರುಕುಗೊಂಡಿದೆ. ಒಂದಿಲ್ಲೊಂದು ನೆಪದಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಮತದಾರರನ್ನು ಭೇಟಿ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದರಲ್ಲೂ ಪೈಪೋಟಿ ಗ್ಯಾರಂಟಿ ಎನ್ನಲಾಗುತ್ತಿದೆ.

ಅಕ್ರಮಕ್ಕೆ ಆಸ್ಪದ ನೀಡದ್ದಕ್ಕೆ ಶಾಸಕ ಹರೀಶ್‌ಗೌಡರ ವಿರುದ್ಧ ಅನಗತ್ಯ ಹೇಳಿಕೆ

ಕಾಂಗ್ರೆಸ್ ವಕ್ತಾರ ರಾಜೇಶ್ ಆರೋಪ



ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್. ರಾಜೇಶ್ ಮಾತನಾಡುತ್ತಿರುವುದು

ಮೈಸೂರು, ಜ.11(ಜಿಎ)– ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಜಾಗ ಕಬಳಿಕೆ ಮಾಡುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಮ ಕೈಗೊಳ್ಳುವಂತೆ ಶಾಸಕ ಕೆ.ಹರೀಶ್‌ಗೌಡ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಈ ಅಕ್ರಮದಲ್ಲಿ ಭಾಗಿಯಾಗಿರುವ ಡಾ.ಸುಶ್ರುತ್ ಗೌಡ ಅವರಿಗೆ ಇದು ನುಂಗಲಾರದ ತುತ್ತಾಗಿದೆ. ಆ ಕಾರಣಕ್ಕೆ ಹರೀಶ್‌ಗೌಡರ ವಿರುದ್ಧ ವೃಥಾ ಟೀಕೆ ಮಾಡುತ್ತಿದ್ದಾರೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್. ರಾಜೇಶ್ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುವೆಂಪು ವಿದ್ಯಾವರ್ಧಕ ಟ್ರಸ್ಟ್‌ಗೆ ಹೊಂದಿಕೊಂಡಂತಿರುವ ಹಿನಕಲ್ ಸರ್ವೆ ನಂಬರ್155/10 ಎಕರೆ ಜಾಗಕ್ಕೆ ತರಾತುರಿಯಲ್ಲಿ ಖಾತೆ ಮಾಡಿಕೊಡಲಾಗಿತ್ತು. ಈ ಬಗ್ಗೆ 2024ರಲ್ಲಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ವರದಿ ಪ್ರಕಟವಾಗಿತ್ತು. ಈ ಹಿನ್ನೆಲೆಯಲ್ಲಿ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ ಸೇರಿದಂತೆ ಇಬ್ಬರನ್ನು ಅಮಾನತುಗೊಳಿಸಲಾಗಿತ್ತು. ಇದರ ಹಿಂದೆ ದೊಡ್ಡ ಜಾಲವೇ ಇರುವುದು ಸಹ ಬೆಳಕಿಗೆ ಬಂದಿತ್ತು ಎಂದರು.


ಈ ಅಕ್ರಮ ಬಯಲಿಗೆ ಬಂದ ಹಿನ್ನೆಲೆಯಲ್ಲಿ ಶಾಸಕ ಕೆ. ಹರೀಶ್‌ಗೌಡರು, ಪಾಲಿಕೆ ಆಯುಕ್ತರು ಹಾಗೂ ಜಿಲ್ಲಾಧಿಕಾರಿಗಳ ಗಮನ ಸೆಳೆದು ಅನಧಿಕೃತ ವ್ಯಕ್ತಿಗಳಿಗೆ ಮಾಡಿಕೊಟ್ಟಿದ್ದ ಖಾತೆ ರದ್ದುಪಡಿಸಲು ಆಗ್ರಹಿಸಿದ್ದರು. ಈ ನಡುವೆ ಡಾ. ಸುಶ್ರುತ್ ಗೌಡರೂ ಈ ಜಾಗಕ್ಕೆ ಸ್ವಾಧೀನ ರಹಿತ ಒಪ್ಪಂದ ಕ್ರಯ ಮಾಡಿಕೊಂಡಿದ್ದರು. ಹೀಗಾಗಿ ಇಂತಹ ಅಕ್ರಮದ ವಿರುದ್ಧ ಧ್ವನಿಯೆತ್ತಿದ ಕಾರಣ ಡಾ.ಸುಶ್ರುತ್‌ಗೌಡರು, ಶಾಸಕರ ವಿರುದ್ಧ ಕ್ಷುಲ್ಲಕ ಕಾರಣ ಮುಂದೆ ನೀಡಿ ಟೀಕಿಸುತ್ತಿದ್ದಾರೆ ಎಂದು ತಿಳಿಸಿದರು.

ಅಕ್ರಮ ಎಸಗಿರುವ ಕಾರಣ ಡಾ.ಸುಶ್ರುತ್ ಗೌಡ ಅವರನ್ನು 24 ಗಂಟೆಯೊಳಗೆ ಬಂಧಿಸಬೇಕು. ಇಲ್ಲವಾದರೆ, ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಶಾಸಕ ಕೆ.ಹರೀಶ್‌ಗೌಡ ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲ ಎಂದು ಸುಶ್ರುತ್‌ಗೌಡ ಆರೋಪಿಸಿದ್ದಾರೆ. ಆದರೆ, ಮೈಸೂರಿನಲ್ಲಿ ಅತೀ ಹೆಚ್ಚು ಅಭಿವೃದ್ಧಿ ಹೊಂದಿರುವ ಕ್ಷೇತ್ರವೆಂದರೆ ಅದು ಚಾಮರಾಜ ಕ್ಷೇತ್ರ ಮಾತ್ರ. ಕ್ಷೇತ್ರದ ಎಲ್ಲಾ ವಾರ್ಡ್‌ಗಳಲ್ಲಿ ಪಾದಯಾತ್ರೆ ಮಾಡಿ ದಲಿತರು, ಅಲ್ಪಸಂಖ್ಯಾತರ ಮನೆ ಬಾಗಿಲಿಗೆ ತೆರಳಿ, ಅವರ ಕುಂದು–ಕೊರತೆ ವಿಚಾರಿಸಿ, ಕ್ಷೇತ್ರದ ಅಭಿವೃದ್ಧಿಗೆ ಅಂದಾಜು 800 ಕೋಟಿ ರೂ. ಅನುದಾನ ತಂದಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಡಾ.ನಾಗರಾಜ್, ವೆಂಕಟೇಶ್, ಸಿದ್ದಯ್ಯ, ಪ್ರವೀಣ್, ರಾಮು, ರಾಜ್‌ಕುಮಾರ್ ಉಪಸ್ಥಿತರಿದ್ದರು.

ಸರ್ವೆ ನಂಬರ್155/10 ಎಕರೆ ಜಾಗಕ್ಕೆ ಸಂಬಂಧಿಸಿದಂತೆ ಈಗಾಗಲೇ ಖ್ಯಾತ ವಕೀಲರಾದ ಓ. ಶಾಮ್ ಭಟ್ ಅವರು 2024ರ ಸೆಪ್ಟೆಂಬರ್ 22ರಂದು ಪತ್ರಿಕಾಗೋಷ್ಠಿಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.



ಈ ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿ ಇದ್ದು, ಅಂತಿಮ ತೀರ್ಪು ಬಾಕಿಯಿದೆ. ಈ ಹಿನ್ನೆಲೆಯಲ್ಲಿ ಈ ವಿಚಾರದಲ್ಲಿ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳ ವಿರುದ್ಧ ಆಧಾರರಹಿತ ಆರೋಪಗಳು, ತಪ್ಪು ಮಾಹಿತಿ ಅಥವಾ ಪೂರ್ವಾಗ್ರಹಪೂರಿತ ಹೇಳಿಕೆಗಳನ್ನು ನೀಡುವುದು ನ್ಯಾಯಾಲಯ ನಿಂದನೆ ಮತ್ತು ಮಾನಹಾನಿ ಪ್ರಕರಣಗಳಿಗೆ ಒಳಪಡುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ನಾನು ಯಾರದೇ ಆರೋಪಕ್ಕೆ ಪ್ರತಿಕ್ರಿಯಿಸುವುದಿಲ್ಲ.

ಈ ಸಂಬಂಧ ಯಾವುದೇ ವ್ಯಕ್ತಿಗಳು ಅಥವಾ ಗುಂಪುಗಳು ಊಹಾಪೋಹ, ಇಲ್ಲವೇ ಏಕಪಕ್ಷೀಯ ಹೇಳಿಕೆಗಳನ್ನು ಪ್ರಕಟಿಸಿದರೆ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ಈ ಪ್ರಕರಣದಲ್ಲಿ ಎಲ್ಲರೂ ನ್ಯಾಯಾಲಯದ ತೀರ್ಪಿಗೆ ಗೌರವ ನೀಡಬೇಕು ಹಾಗೂ ಕಾನೂನಿನ ಚೌಕಟ್ಟಿನೊಳಗೆ ಮಾತ್ರ ಪ್ರತಿಕ್ರಿಯೆ ನೀಡಬೇಕು.

– ಡಾ.ಸುಶ್ರುತ್‌ಗೌಡ, ನರರೋಗ ತಜ್ಞ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಗಂಡ-ಹೆಂಡ್ತಿ ಅಂದ್ರೆ ರೊಟ್ಟಿ-ಪಲ್ಯದಂತೆ. ಗಂಡ ರೊಟ್ಟಿಯಾದ್ರೆ ಹೆಂಡ್ತಿ ಪಲ್ಯದಂಗೆ.
ಗಂಡ : ಹೌದೌದು... ಹಂಗೆ ರೊಟ್ಟಿಗೆ ಎರಡ್ಮೂರು ರೀತಿ ಪಲ್ಯ ಇದ್ರೆ ಭಾರೀ ರುಚಿ ಇರುತ್ತೆ!

ಮೈಸೂರು ಮಿತ್ರ

ಸೋಮವಾರ, ಜನವರಿ 12, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಸೋಲೆ ನಿನ್ನ ನಿಜವಾದ ಶಿಕ್ಷಕ, ಏಕೆಂದರೆ ನೀನು ಗೆಲ್ಲುವವರೆಗೂ ಅದು ನಿನ್ನ ಜೊತೆಗಿದ್ದು, ಪಾಠ ಕಲಿಸುತ್ತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕದ್ದು ಹೋಳಿಗೆ ಕೊಟ್ಟ್ರೆ ಬೆಲ್ಲ ಸಾಲದು ಎಂದಳಂತೆ

ನಿಮ್ಮ ಪತ್ರಗಳು

ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೆವಾಲ ಎಲ್ಲಿ ಹೋದರು?

ಮಾನ್ಯರೆ,



ಕರ್ನಾಟಕ ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಇತ್ತೀಚೆಗೆ ಪಕ್ಷದ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸದೇ ನಿರ್ಲಿಪ್ತರಾಗಿರುವುದು ಅಚ್ಚರಿಗೆ ಕಾರಣವಾಗಿದೆ. ಕಳೆದ ಕೆಲ ತಿಂಗಳಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಕುರ್ಚಿ ಕಿತ್ತಾಟದ ವಿದ್ಯಮಾನಗಳಲ್ಲೂ ಅವರ ಗೈರುಹಾಜರಿ ಎದ್ದು ಕಾಣುತ್ತಿದೆ. ಅವರ ಈ ದಿಢೀರ್ ನಿರ್ಧಾರದ ಹಿಂದಿರುವ ಕಾರಣ ಏನೆಂಬುದು ಇನ್ನೂ ಗುಟ್ಟಾಗಿಯೇ ಉಳಿದಿದೆ.

ಸರ್ಕಾರ ರಚನೆ ಆರಂಭದಿಂದಲೂ ಒಂದಲ್ಲ ಒಂದು ಸಭೆಗಳಲ್ಲಿ ಭಾಗವಹಿಸಿ ಸರ್ಕಾರದ ಒಂದು ಭಾಗವೇ ಆಗಿದ್ದ ಸುರ್ಜೆವಾಲರವರು ಇತ್ತೀಚೆಗೆ ಎಲ್ಲೂ ಕಾಣಿಸದೇ ಅಜ್ಞಾತಗಿರುವ ಹಿಂದಿನ ಮರ್ಮ ತಿಳಿಯದಾಗಿದೆ. ರಾಜ್ಯ ಕಾಂಗ್ರೆಸ್ ಉಸ್ತುವಾರಿಯಲ್ಲಿ ಕೆ.ಸಿ.ವೇಣುಗೋಪಾಲ್ ಹಾಗೂ ಸುರ್ಜೆವಾಲ ಅವರ ನಿರ್ಧಾರಗಳೇ ಪ್ರಮುಖವಾಗಿ ಕೇಳಿಬರುತ್ತಿದ್ದವು. ಇತ್ತೀಚೆಗೆ ಸಚಿವ-ಶಾಸಕರ ಪ್ರತ್ಯೇಕ ಸಭೆ ನಡೆಸಿದ್ದು ಉಂಟು ಹಾಗೂ ಕೆಲ ಅಧಿಕಾರಿಗಳ ಜೊತೆ ಸಭೆ ನಡೆಸುವ ಮೂಲಕ ವಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದ್ದ ಸುರ್ಜೆವಾಲ ತದನಂತರ ಪಕ್ಷದ ಯಾವುದೇ ವೇದಿಕೆ ಹಾಗೂ ಸಭೆಗಳಲ್ಲಿ ಕಾಣಸಿಗುತ್ತಿಲ್ಲ.

ಹೈಕಮಾಂಡ್ ಏನಾದರೂ ಅವರ ಸ್ಥಾನ ಪಲ್ಲಟಗೊಳಿಸಿದೆಯೇ ಎಂಬುದು ನಿಖರವಾಗಿ ತಿಳಿದುಬರುತ್ತಿಲ್ಲ ಅಥವಾ ಪಂಜಾಬ್ ಕಾಂಗ್ರೆಸ್ ಅಧ್ಯಕ್ಷ ಹುದ್ದೆಯ ಆಕಾಂಕ್ಷಿಯಾಗಿದ್ದ ಅವರನ್ನು ಪಕ್ಷ ಕಡೆಗಣಿಸಿದ್ದೂ ಇದಕ್ಕೆ ಕಾರಣವಿರಬಹುದೆಂಬ ಮಾತುಗಳನ್ನು ಅಲ್ಲಗಳೆಯುವಂತಿಲ್ಲ. ಇನ್ನೊಬ್ಬ ಉಸ್ತುವಾರಿ ಕೆ.ಸಿ.ವೇಣುಗೋಪಾಲ್ ಸರ್ಕಾರದ ಆಡಳಿತದಲ್ಲಿ ಅನಗತ್ಯ ಹಸ್ತಕ್ಷೇಪ ನಡೆಸುತ್ತಿರುವ ಆರೋಪಗಳಿವೆ. ಇತ್ತೀಚೆಗೆ ಬೆಂಗಳೂರಿನ ಕೊಗಿಲು ಬಡಾವಣೆಯ ಮನೆ ಕಳೆದುಕೊಂಡ ನಿರಾಶ್ರಿತರ ಪರ ಬ್ಯಾಟಿಂಗ್ ಬೀಸಿ ಚರ್ಚೆಗೆ ಗ್ರಾಸವಾಗಿದ್ದರು. ಇದೆಲ್ಲವನ್ನು ಗಮನಿಸಿದರೆ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ದೆಹಲಿ ನಾಯಕರ ಅಣತಿಯಂತೆ ನಡೆಯುತ್ತಿದೆಯೇ ಎಂಬ ಶಂಕೆ ವ್ಯಕ್ತವಾಗುತ್ತದೆ.

-ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು.

ಸಿದ್ದರಾಮಯ್ಯ-ಡಿ.ದೇವರಾಜ ಅರಸು: ಯಾರು ಹಿತವರು?

ಮಾನ್ಯರೇ,

ಡಿ.ದೇವರಾಜ ಅರಸು ಅವರು 7 ವರ್ಷ 239 ದಿನ ಕರ್ನಾಟಕದ ಮುಖ್ಯ





ಮಂತ್ರಿ ಆಗಿದ್ದರು. ಸಿದ್ದರಾಮಯ್ಯನವರು 7 ವರ್ಷ 240 ದಿನ ಮುಗಿಸಿ ಮುಂದೆ ಸಾಗುತ್ತಿದ್ದಾರೆ. ಇನ್ನೂ ಮುಂದೆ ಎಷ್ಟು ದಿವಸವೋ ಅಷ್ಟು ದಿನ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದು ಕೆಲವರು ಹೇಳುತ್ತಿದ್ದಾರೆ. ಡಿ.ದೇವರಾಜು ಅರಸು ಎಂದರೆ ನೆನಪಾಗುವುದು ಅವರ ಆಡಳಿತದಲ್ಲಿ ರೂಪಿಸಲಾದ ಭೂ ಸುಧಾರಣೆ, ಜೀತ ಪದ್ಧತಿ ನಿರ್ಮೂಲನೆ ಪ್ರಮುಖವಾದುದು. ಭೂ ಸುಧಾರಣೆಯ ಕಾಯ್ದೆಯಿಂದ 7,80,000ಗಿಂತ ಹೆಚ್ಚು ಬಡ ಗೇಣಿದಾರರು, ಭೂ ಮಾಲೀಕರಾದರು. ಉಳುವವನೇ ಭೂಮಿಯ ಒಡೆಯ ಎಂದು ಘೋಷಣೆ ಮಾಡಿ 22 ಲಕ್ಷ ಎಕರೆ ಭೂಮಿಯನ್ನು ಭೂ ರೈತ ಬಡವರಿಗೆ ಹಂಚಿದರು. ಈ ಕಾಯ್ದೆ ಮತ್ತು ಕಾರ್ಯಕ್ರಮವು ಇಂದಿಗೂ ಎಂದಿಗೂ ಜನ ಮನದಲ್ಲಿ ಅಚ್ಚಳಿಯದೆ ಉಳಿದಿದೆ.

ಸಿದ್ದರಾಮಯ್ಯನವರು ತಂದ ಗ್ಯಾರಂಟಿಗಳ ಕಾರ್ಯಕ್ರಮಗಳು ಅನ್ನಭಾಗ್ಯ, ಗೃಹ ಲಕ್ಷ್ಮಿ, ಭಾಗ್ಯಜ್ಯೋತಿ, ಶಕ್ತಿ ಯೋಜನೆ. ಯುವನಿಧಿ ಕಾರ್ಯಕ್ರಮಗಳು ಹಾಗೂ 16ನೇ ಬಜೆಟ್ ಮಂಡನೆ ಮಾಡಿ ಹಲವು ಜನಪರ ಕಾರ್ಯಕ್ರಮ ಮಾಡಿರುವ ಕೀರ್ತಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ. ಅಧಿಕಾರ ಹಂಚಿಕೆ, ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆ ನಡೆಯುತ್ತಲೇ ಇವೆ. ಇದರ ನಡುವೆ ಇವರು 17ನೇ ಬಜೆಟ್ ಮಂಡಿಸುವ ತಯಾರಿಯಲ್ಲಿದ್ದಾರೆ. ತಮ್ಮ ನಾಯಕತ್ವದಲ್ಲಿಯೇ ಪೂರ್ಣ ಅವಧಿಯ ಆಡಳಿತ ನಡೆಸುವರೇ ಎಂದು ಕಾದು ನೋಡಬೇಕಾಗಿದೆ. ಇವರಿಬ್ಬರಲ್ಲಿ ಯಾರು ಹಿತವರು ಎಂಬ ಚರ್ಚೆಗಳು ನಡೆಯುತ್ತಿದೆ. **-ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು.**

ಈ ರಸ್ತೆಗಳು ಏಕಮುಖ ಸಂಚಾರವೊ ಅಥವಾ ದ್ವಿ-ಮುಖ ಸಂಚಾರವೊ

ಮಾನ್ಯರೆ,

ಮೈಸೂರು ನಗರದ ಅತ್ಯಂತ ಕಿರಿದಾದ ಮತ್ತು ಇಕ್ಕಟ್ಟಾದ ರಸ್ತೆ ಕೆ.ಟಿ.ಸ್ಟ್ರೀಟ್ (ಕಾಳಮ್ಮ ಗುಡಿ ರಸ್ತೆ) ಎಂದು ಪ್ರಚಲಿತದಲ್ಲಿರುವ ಈ ರಸ್ತೆಯು ಏಕಮುಖ ಸಂಚಾರವಿರುತ್ತದೆ. ಆದರೆ, ಈ ರಸ್ತೆಯಲ್ಲಿ ಒನ್-ವೇ ಲೆಕ್ಕಕ್ಕಿರುವುದಿಲ್ಲ. ಈ ರಸ್ತೆಯು ಅತ್ಯಂತ ಕಿರಿದಾಗಿದ್ದು ಏಕಮುಖ ಸಂಚಾರ ಪ್ರಾರಂಭವಾಗುವ ಇರ್ವಿನ್ ರಸ್ತೆ ಕಡೆಯಿಂದ ಬರುವ ಕಾರು, ಸ್ಕೂಟರ್‌ಗಳು ವೇಗವಾಗಿಯೇ ಬರುತ್ತದೆ. ಇದರಿಂದ ಎದುರುಗಡೆಯಿಂದ ಬರುವ ವಾಹನ ಸವಾರರು ಚಾಲನೆ ಮಾಡುವಾಗ ಗೊಂದಲಕ್ಕೆ ಒಳಗಾಗಿ ಸಣ್ಣ-ಪುಟ್ಟ ಅಪಘಾತಗಳು ಸಂಭವಿಸುತ್ತಿವೆ.

ಸಯ್ಯಾಜಿರಾವ್ ರಸ್ತೆಯಲ್ಲಿ ಕಾವೇರಿ ಎಂಪೋರಿಯಂ ರಸ್ತೆಯ ಮುಂದೆ ವಿರುದ್ದ ದಿಕ್ಕಿನಲ್ಲಿ ವಾಹನ ಸವಾರರು ತಮ್ಮ ವಾಹನಗಳನ್ನು ಚಾಲನೆ ಮಾಡಿಕೊಂಡು ವಿಶ್ವೇಶ್ವರಯ್ಯ ಸರ್ಕಲ್ ದಾಟುತ್ತಾರೆ. ಅದೇ ರೀತಿ ವಿಶ್ವೇಶ್ವರಯ್ಯ ಸರ್ಕಲ್ ನಿಂದ ವಾಹನ ಚಾಲನೆ ಮಾಡಿಕೊಂಡು ಸಯ್ಯಾಜಿರಾವ್ ರಸ್ತೆಯ ಮೂಲಕ ಬಂದು ಧನ್ವಂತ್ರಿ ರಸ್ತೆಗೆ ಬರುತ್ತಾರೆ. ಈ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ದ್ವಿ-ಚಕ್ರ ವಾಹನ ಸವಾರರು ಸಾಗುವುದು ಸರ್ವೆ ಸಾಮಾನ್ಯವಾಗಿದೆ. ಆದರೆ ಸಂಚಾರಿ ಪೊಲೀಸರು ಮಾತ್ರ ಹೆಲ್ಮೆಟ್ ತಪಾಸಣೆಯಲ್ಲಿ ನಿರತರಾಗಿರುತ್ತಾರೆ. ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಏಕಮುಖ (ಒನ್ ವೇ) ಸಂಚಾರ ಇದೆಯೋ/ಇಲ್ಲವೋ ತಿಳಿಯದಾಗಿದೆ. ಸಾಮಾನ್ಯವಾಗಿ ಈ ರಸ್ತೆಯಲ್ಲಿ ಎರಡು ಕಡೆ ವಾಹನ ಸವಾರರು ಚಾಲನೆಯಲ್ಲಿರುತ್ತಾರೆ. ಒನ್-ವೇ ಸಂಚಾರ ಆರಂಭವಾಗುವ ಧನ್ವಂತ್ರಿ ರಸ್ತೆಯಲ್ಲಿ ವಾಹನ ಚಾಲನೆ ಮಾಡುವವರನ್ನು ತಡೆಯಬಹುದು. ಆದರೆ, ವಾಹನ ಸವಾರರು ನಾರಾಯಣ ಶಾಸ್ತ್ರಿ ರಸ್ತೆಯಿಂದ ವಿನೋಬ ರಸ್ತೆಗೆ ಬಂದ ನಂತರ ಸಂಚಾರಿ ವಿಭಾಗದವರು ವಾಹನಗಳನ್ನು ತಡೆದು ದಂಡ ಕಟ್ಟಿಸುತ್ತಾರೆ ಅಥವಾ ಹಿಂದಕ್ಕೆ ಕಳುಹಿಸುತ್ತಾರೆ. ವಾಹನ ಸವಾರರು ಗೊಂದಲಕ್ಕೆ ಒಳಗಾಗುವ ಮುನ್ನ ಸಂಚಾರ ನಿಯಂತ್ರಣ ಮಾಡುವಂತೆ ಮನವಿ. **-ಎಂ.ಎನ್.ಧರಣಿವೆಂಕಟೇಶ, ಸಾಮಾಜಿಕ ಕಾರ್ಯಕರ್ತ, ಮೈಸೂರು.**



ಜಿ. ಎಲ್. ತ್ರಿಪುರಾಂತಕ
ಮೊ: 96866-77284

ಅರಿವು


ವೃತ್ತಿ ಪ್ರೀತಿಯಿಂದ ನಿತ್ಯ ಸಂತೃಪ್ತಿ....!

ಮನುಷ್ಯನಾಗಿ ಹುಟ್ಟಿದ ಮೇಲೆ ಏನಾದರೊಂದು ಕಾಯಕ ಮಾಡಿ ಬದುಕುವುದು ಪ್ರಕೃತಿ ಧರ್ಮ. ಕಾಯಕ ಎಂಬುದು ಕಾಯವನ್ನು ಕಾಯುವುದಲ್ಲದೆ ಮಾನಸಿಕ ಸ್ಥಿತಿಯನ್ನು ಕಾಪಾಡುತ್ತದೆ. ಒಲಿದಿರುವ ವೃತ್ತಿಯನ್ನು ಒಲವಿನಿಂದ ಮಾಡುವವರಿಗೆ ನೆಮ್ಮದಿಯು, ಸಂತೃಪ್ತಿ ಸುಲಭವಾಗಿ ಪ್ರಾಪ್ತಿಯಾಗುತ್ತದೆ. ನಮ್ಮ ಶಕ್ತಿ ಹಾಗೂ ಯುಕ್ತಿಗೆ ತಕ್ಕಂತೆ ಯಾವುದಾದರೊಂದು ಕೆಲಸ ದೊರಕಿರುತ್ತದೆ. ಅದನ್ನು ಅಷ್ಟೇ ಪ್ರೀತಿಯಿಂದ, ಕಾಳಜಿಯಿಂದ, ಆಸೆಯಿಂದ, ಆನಂದದಿಂದ ಮಾಡಬೇಕು. ಕೆಲವರಿಗೆ ಅವರ ಅರ್ಹತೆಗೆ ತಕ್ಕಂತೆ ಕೆಲಸ ದೊರಕಿರುವುದಿಲ್ಲ. ಅಂದ ಮಾತ್ರಕ್ಕೆ **ಇರುವ ಕೆಲಸವನ್ನು ಮನಸ್ಸಿಲ್ಲದೆ ಮಾಡಬಾರದು. ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು, ದೊರೆತುದ ಹಸಾದವೆಂದುಣ್ಣು ಗೊಣಗಿಡದೆ, ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ, ಹೊರಡು ಕರೆ ಬರಲ್ ಅಳದೆ- ಮಂಕುತಿಮ್ಮ?** ಎಂದು **ಡಿ.ವಿ.ಗುಂಡಪ್ಪ(ಡಿವಿಜಿ)**ನವರು ತಮ್ಮ ಕಗ್ಗವೊಂದರಲ್ಲಿ ಹೇಳಿದ್ದಾರೆ. ಪಾಲಿಗೆ ಬಂದದ್ದು ಪಂಚಾಮೃತ ಎಂದು ಭಾವಿಸಿ ವೃತ್ತಿ ನಿರ್ವಹಿಸಿ ತೃಪ್ತಿಪಡುವವರೇ ನಿಜಸುಖಿಗಳು.

ಎಷ್ಟೋ ಜನರಿಗೆ ಒಂದು ಸಮಸ್ಯೆ ಇದೆ. ತಮಗಿರುವ ಕೆಲಸವನ್ನು ಮನಃಪೂರ್ವಕವಾಗಿ ಅನುಭವಿಸದೆ ಬೇರೆಯವರ ಕೆಲಸ ಕುರಿತಾಗಿಯೇ ಆಲೋಚಿಸುತ್ತಿರುತ್ತಾರೆ. ಅವರ ಕೆಲಸ ಉತ್ತಮವಾದದ್ದು, ತನ್ನ ಕೆಲಸ ಮಾತ್ರ ತುಚ್ಛವಾದದ್ದು ಎಂದು ಭಾವಿಸುತ್ತಾರೆ. ಈ ರೀತಿ ಅನ್ಯಮನಸ್ಕರಾಗಿ ಕೆಲಸ ಮಾಡುವ ಬದಲು, ಆ ಕೆಲಸವನ್ನು ಬಿಟ್ಟು, ತಾವು ಪ್ರೀತಿಸುವ ಕೆಲಸಕ್ಕೆ ಸೇರಬೇಕು. ಅದು ಸಾಧ್ಯವಿಲ್ಲದೇ ಇದ್ದಲ್ಲಿ ಇರುವ ಕೆಲಸವನ್ನೇ ಪ್ರೀತಿಸಬೇಕು. ತಮ್ಮ ಕೆಲಸವನ್ನು ತಾವೇ ಪ್ರೀತಿಸಿದಿದ್ದರೆ, ಅದನ್ನು ಬೇರೆಯವರು ಹೇಗೆ ಪ್ರೀತಿಸಲು ಸಾಧ್ಯ? ತಮ್ಮ ಕೆಲಸದ ಬಗ್ಗೆ ತಮಗೇ ಗೌರವ ಇಲ್ಲದಿದ್ದರೆ, ಇತರರು ಹೇಗೆ ಗೌರವ ಕೊಡಲು ಸಾಧ್ಯ? ಯಾವುದೇ ಕಾರಣಕ್ಕೂ ನಿತ್ಯ ತಮ್ಮ ವೃತ್ತಿಯನ್ನು ಬೈದುಕೊಂಡು ಕೆಲಸ ಮಾಡಬಾರದು. ಹಾಗೆ ಮಾಡಿದಲ್ಲಿ ಅದು ನಮ್ಮ ಕಾಯಕಕ್ಕೆ ಮಾಡುವ ದ್ರೋಹ, ಅಷ್ಟೇ ಅಲ್ಲ ಸಂಸ್ಥೆಗೆ ಮಾಡುವ ದ್ರೋಹವಾಗಿರುತ್ತದೆ. ತನ್ಮೂಲಕ ಅದೊಂದು ದೇಶದ್ರೋಹವೇ ಆಗಿಬಿಡುತ್ತದೆ. ನಮ್ಮ ಕೆಲಸ ನಮಗೆ ಹೊರೆ ಎನಿಸುವುದು ನಮಗೆ ಅದರ ಬಗ್ಗೆ ಇರುವ ಭಾವದಿಂದ. ನಮಗೆ ಉತ್ತಮ ಭಾವನೆ ಇದ್ದರೆ ಮಾಡುವ ಕೆಲಸ ಎಷ್ಟೇ ಕಷ್ಟವಾದರೂ ಅದು ಸುಲಭ, ಹಗುರ ಎನಿಸಿಬಿಡುತ್ತದೆ.

ತಾವು ಮಾಡುವ ವೃತ್ತಿಯಲ್ಲಿ ಬದ್ಧತೆ, ಪ್ರಾಮಾಣಿಕತೆ, ನೈತಿಕತೆ, ಕೌಶಲ್ಯ, ಸಮಯಪಾಲನೆ, ಶಿಸ್ತುಪಾಲನೆ ಮುಖ್ಯ. ತಮಗೆ ಲಭ್ಯವಾಗಿರುವ ಕೆಲಸದಲ್ಲಿ ನೈಪುಣ್ಯತೆಯನ್ನು ವೃದ್ಧಿಸಿಕೊಳ್ಳುವ ಮನೋಭಾವ ವೃದ್ಧಿಸಿಕೊಳ್ಳಬೇಕು. ಅನೇಕರು ಒಂದು ಕೆಲಸ ಸಿಗುವವರೆಗೆ ತುಂಬಾ ಕಷ್ಟಪಟ್ಟಿರುತ್ತಾರೆ. ಕೆಲಸ ಸಿಕ್ಕ ಮೇಲೆ ಏನೇನೋ ಕಾರಣಕ್ಕೆ ಕೆಲಸವನ್ನು ಕಾಟಾಚಾರಕ್ಕಾಗಿ ಮಾಡುತ್ತಿರುತ್ತಾರೆ. ಒಂದು ರೀತಿ ಅಸಡ್ಡೆಯಿಂದ ಮಾಡುತ್ತಾ, ತಮ್ಮ ಸಹೋದ್ಯೋಗಿಗಳಲ್ಲಿಯೂ ಒಂದು ರೀತಿಯ ಆಲಸ್ಯ ಮೂಡುವಂತೆ ಮಾಡಿಬಿಡುತ್ತಾರೆ. ಒಂದು ಕೊಳೆತ ಹಣ್ಣು ತನ್ನ ಸಂಪರ್ಕಕ್ಕೆ ಬರುವ ಹಣ್ಣುಗಳನ್ನು ಹಾಳುಮಾಡುವಂತೆ, ಒಬ್ಬ ಸೋಮಾರಿ ನೌಕರ ಹತ್ತಾರು ನೌಕರರ ಮೇಲೆ ಪರೋಕ್ಷವಾಗಿ ಕೆಟ್ಟ ಪರಿಣಾಮ ಬೀರುತ್ತಿರುತ್ತಾನೆ. ಅವರಿಗೆ ಸಿಕ್ಕಿರುವ ಕೆಲಸವು ಸಾವಿರ ಜನರ ಕನಸಿನ ಕೆಲಸ ಎಂಬುದನ್ನು ಅರಿಯಬೇಕು. ಕೈಯಲ್ಲಿ ಇರುವ ಕೆಲಸವನ್ನು ಸಮರ್ಪಣಾ ಮನೋಭಾವದಿಂದ ಮಾಡಿದಾಗ ಸಂತೃಪ್ತಿ ಪ್ರಾಪ್ತಿಯಾಗುತ್ತದೆ. ಅಸಮಾಧಾನದಿಂದ ಮಾಡಿದರೆ ನಿತ್ಯವೂ ಅತೃಪ್ತಿಯನ್ನು ಕಾಣಬೇಕಾಗುತ್ತದೆ. ಮಾಡುವ ಕೆಲಸವನ್ನು ಮನವಿಟ್ಟು ಮಾಡದೆ, ಅದರಲ್ಲಿ ಅತೃಪ್ತಿ ದೊರಕುತ್ತಿದೆ ಎಂದು ಕೊರಗುತ್ತಾ, ತೃಪ್ತಿ, ಶಾಂತಿ, ಸಮಾಧಾನಕ್ಕಾಗಿ ದೇವಸ್ಥಾನಗಳನ್ನು ಅಲೆಯುವ ಅನೇಕ ಅಧಮರನ್ನು ಕಾಣಬಹುದು.

ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡದ ಮನುಜರನ್ನು ದೇವರು ತಾನೆ ಮೆಚ್ಚಲು ಸಾಧ್ಯವೇ? ಮಾಡುವ ಕೆಲಸಕ್ಕೆ ಮೋಸ ಮಾಡಿ, ದೇವರಿಗೆ ಅರ್ಚನೆ, ಅಭಿಷೇಕ ಮಾಡಿಸಿ, ಹುಂಡಿಗೆ ಹಣ ಹಾಕಿದರೆ ಭಕ್ತನಿಗೆ ಸಮಾಧಾನವಾಗಬಹುದು, ದೇವರು ಮಾತನಾಡುವ ಹಾಗಿದ್ದರೆ ಇಂಥವರನ್ನು ಬೈದು ಗುಡಿಯಿಂದ ಹೊರಹಾಕುತ್ತಿದ್ದ. ಅದಕ್ಕಾಗಿಯೇ ಶರಣರು,



> ❝ ಎಷ್ಟೋ ಜನ ಮಕ್ಕಳು ತಾವು ಉನ್ನತವಾದುದ್ದನ್ನು ಸಾಧಿಸಿದಾಗ ತಾಯಿ-ತಂದೆಯರು ನಿರ್ವಹಿಸುತ್ತಿದ್ದ ವೃತ್ತಿಯಿಂದ ಮುಕ್ತಿ ಪಡೆಯುವಂತೆ ಒತ್ತಡ ಹಾಕುತ್ತಾರೆ. ಹಾಗೆ ಕೆಲವರು ಹೆತ್ತವರು ಮಕ್ಕಳ ಮಾತು ಕೇಳಿ ಸಮಾಜದಲ್ಲಿ ಗೌರವ ವೃದ್ಧಿಸಿಕೊಳ್ಳಲು ವೃತ್ತಿಯಿಂದ ನಿವೃತ್ತಿ ಪಡೆಯುತ್ತಾರೆ. ಆ ನಂತರ ಅನೇಕ ರೀತಿಯ ತೊಂದರೆಗಳನ್ನು ಸಹ ಅನುಭವಿಸುತ್ತಾರೆ. ಆದರೆ ಕೆಲವು ವಿಶೇಷ ವ್ಯಕ್ತಿಗಳು ಮಕ್ಕಳು ಮಾತ್ರ ಎಷ್ಟೇ ದೊಡ್ಡ ಸಂಬಳದ ಉತ್ತಮ ಕೆಲಸದಲ್ಲಿದ್ದರೂ, ತಮಗೆ ಅನ್ನ-ಬಟ್ಟೆ ನೀಡಿದ ವೃತ್ತಿಯನ್ನು ತಮ್ಮಲ್ಲಿ ಶಕ್ತಿ ಇರುವವರೆಗೂ ಮುಂದುವರಿಸುತ್ತಾರೆ. ಕೇವಲ ಹಣಗಳಿಕೆಯ ಉದ್ದೇಶವಾಗಿರದೆ ಅದರಲ್ಲಿ ಅವರು ಸ್ವಾವಲಂಬನೆ, ಆತ್ಮಗೌರವ, ಆತ್ಮಸಂತೃಪ್ತಿ ಕಂಡುಕೊಂಡಿರುತ್ತಾರೆ. ಇಳಿವಯಸ್ಸಿನಲ್ಲಿ ಉತ್ತಮ ಆರೋಗ್ಯ ಉಳಿಸಿಕೊಳ್ಳುವುದಕ್ಕೆ ಅವರ ವೃತ್ತಿ ಪ್ರೀತಿಯೂ ಸಹ ಕಾರಣವಾಗಿರುತ್ತದೆ.

ಕಾಯಕವೇ ಕೈಲಾಸ ಎಂಬುದಾಗಿ ಹೇಳಿರುವುದು. ತಮ್ಮ ವೃತ್ತಿಯನ್ನು ದೈವಭಕ್ತಿಯಂತೆ ನಿರ್ವಹಿಸಿದರೆ ಯಾವ ಪೂಜೆ, ಪುನಸ್ಕಾರಗಳ ಅವಶ್ಯಕತೆಯೇ ಇರುವುದಿಲ್ಲ. ಕೆಲವರು ಕೆಲಸ ಸಿಗುವವರೆಗೆ ತಪಸ್ಸಿನ ರೀತಿಯಲ್ಲಿ ಪರಿಶ್ರಮ ಹಾಕಿರುತ್ತಾರೆ. ಉತ್ತಮ ಕೆಲಸ ಸಿಕ್ಕಿದ ಮೇಲೆ ವೃತ್ತಿ ಬದ್ಧತೆಯನ್ನು ಮರೆತುಬಿಡುತ್ತಾರೆ. ಹೇಗೆ ಒಬ್ಬ ಕುರುಡನಿಗೆ ಕಣ್ಣು ಬಂದಾಕ್ಷಣ ಅವನ ಊರುಗೋಲನ್ನು ಬೆಂಕಿಗೆ ಹಾಕುತ್ತಾನೆಯೋ ಹಾಗೆ ಅನೇಕರು ಒಂದು ವೃತ್ತಿ ಭದ್ರತೆ ಸಿಕ್ಕಿದಾಕ್ಷಣ ವೃತ್ತಿ ಬದ್ಧತೆಗೆ ತಿಲಾಂಜಲಿ ಹೇಳಿಬಿಡುತ್ತಾರೆ.

ಎಷ್ಟೋ ಜನ ತಾಯಿ-ತಂದೆಯರು ತಾವು ನಿರ್ವಹಿಸುವ ಕೆಲಸದ ಕುರಿತು ಮಕ್ಕಳ ಮುಂದೆ ತುಂಬಾ ಕೇವಲವಾಗಿ ಮಾತನಾಡುತ್ತಿರುತ್ತಾರೆ. ನಮ್ಮಂತೆ ಆಗಬೇಡ, ನೀನು ಇನ್ನೂ ಉತ್ತಮ ವೃತ್ತಿ ಆಯ್ಕೆ ಮಾಡಿಕೋ? ಎಂದು ಸಲಹೆ ನೀಡುವುದು ಸಹಜ ಎನಿಸಬಹುದು. ಅಂತಹ ವೃತ್ತಿ ಆಯ್ಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಆರ್ಥಿಕ ಸಹಾಯವನ್ನು ಆ ತಾಯಿ-ತಂದೆ ಮಾಡಿದ ವೃತ್ತಿಯಿಂದಲೇ ದೊರಕಿರುತ್ತದೆ ಎಂಬುದನ್ನು ಮರೆತಿರುತ್ತಾರೆ. ಎಷ್ಟೋ ಜನ ಮಕ್ಕಳು ತಾವು ಉನ್ನತವಾದುದ್ದನ್ನು ಸಾಧಿಸಿದಾಗ ತಾಯಿ-ತಂದೆಯರು ನಿರ್ವಹಿಸುತ್ತಿದ್ದ ವೃತ್ತಿಯಿಂದ ಮುಕ್ತಿ ಪಡೆಯುವಂತೆ ಒತ್ತಡ ಹಾಕುತ್ತಾರೆ. ಹಾಗೆ ಕೆಲವರು ಹೆತ್ತವರು ಮಕ್ಕಳ ಮಾತು ಕೇಳಿ ಸಮಾಜದಲ್ಲಿ ಗೌರವ ವೃದ್ಧಿಸಿಕೊಳ್ಳಲು ವೃತ್ತಿಯಿಂದ ನಿವೃತ್ತಿ ಪಡೆಯುತ್ತಾರೆ. ಆ ನಂತರ ಅನೇಕ ರೀತಿಯ ತೊಂದರೆಗಳನ್ನು ಸಹ ಅನುಭವಿಸುತ್ತಾರೆ.

ಆದರೆ, ಕೆಲವು ವಿಶೇಷ ವ್ಯಕ್ತಿಗಳು ಮಕ್ಕಳು ಮಾತ್ರ ಎಷ್ಟೇ ದೊಡ್ಡ ಸಂಬಳದ ಉತ್ತಮ ಕೆಲಸದಲ್ಲಿದ್ದರೂ, ತಮಗೆ ಅನ್ನ-ಬಟ್ಟೆ ನೀಡಿದ ವೃತ್ತಿಯನ್ನು ತಮಗೆ ಶಕ್ತಿ ಇರುವವರೆಗೂ ಮುಂದುವರಿಸುತ್ತಾರೆ. ಕೇವಲ ಹಣ ಗಳಿಕೆಯ ಉದ್ದೇಶವಾಗಿರದೆ ಅದರಲ್ಲಿ ಅವರು ಸ್ವಾವಲಂಬನೆ, ಆತ್ಮಗೌರವ, ಆತ್ಮಸಂತೃಪ್ತಿ ಕಂಡುಕೊಂಡಿರುತ್ತಾರೆ. ಇಳಿವಯಸ್ಸಿನಲ್ಲಿ ಉತ್ತಮ ಆರೋಗ್ಯ ಉಳಿಸಿಕೊಳ್ಳುವುದಕ್ಕೆ ಅವರ ವೃತ್ತಿ ಪ್ರೀತಿಯೂ ಸಹ ಕಾರಣವಾಗಿರುತ್ತದೆ.

ತಾವು ತೆಗೆದುಕೊಳ್ಳುವ ಸಂಬಳಕ್ಕಾದರು ತಮ್ಮ ವೃತ್ತಿಗೆ ನ್ಯಾಯ ಒದಗಿಸಬೇಕಾದುದು ವೃತ್ತಿ ಧರ್ಮ. ಎಷ್ಟೋ ಜನರು ಸೇವಾವಧಿ ಹೆಚ್ಚಾದಂತೆ, ಅನುಭವ ಹೆಚ್ಚಾದಂತೆ ತಮ್ಮ ಸಾಮರ್ಥ್ಯ ಹಾಗೂ ಕೆಲಸದ ಗುಣಮಟ್ಟ ಹೆಚ್ಚಿಸಿಕೊಳ್ಳುವ ಬದಲು ತಮ್ಮ ಆರ್ಥಿಕ ಸ್ಥಿತಿ ವೃದ್ಧಿಸಿಕೊಂಡು, ಮಾಡುವ ಕರ್ತವ್ಯದಿಂದ, ಇರುವ ಜವಾಬ್ದಾರಿಯಿಂದ ಹೇಗೆ ತಪ್ಪಿಸಿಕೊಳ್ಳಬೇಕು ಎಂದು ಚಿಂತಿಸಿ ಹೊಣೆಗೇಡಿಗಳಾಗುತ್ತಾರೆ. ಇವರಿಗೆ ಜಾತಿ, ಧರ್ಮ, ಯಾರದೋ ಕುಮ್ಮಕ್ಕು, ಶಿಫಾರಸ್ಸು ಹೀಗೆ ವಿವಿಧ ಕಾರಣಗಳಿಗೆ ವ್ಯವಸ್ಥೆಯಲ್ಲಿ ಒಂದು ಭದ್ರತೆ ಇರುತ್ತದೆ. ಅವರು ತಮ್ಮ ಮೇಲಾಧಿಕಾರಿಗಳಿಗೂ ಗೌರವ ಕೊಡದೆ, ತಾವು ಮಾಡುವ ಕೆಲಸಕ್ಕೂ ಗೌರವ ಕೊಡದೆ, ವೃತ್ತಿಗೆ ಮಹಾಮೋಸವನ್ನು ಮಾಡುತ್ತಿರುತ್ತಾರೆ. ಸರ್ಕಾರದ ಕೆಲಸ ದೇವರ ಕೆಲಸ ಎಂದು ತಿಳಿದಿದ್ದರೂ ದ್ರೋಹ ಮಾಡುವ ಸರ್ಕಾರಿ ನೌಕರ ಮಹಾನುಭಾವರು ಇದ್ದಾರೆ.

ಅದರಲ್ಲೂ ಶಿಕ್ಷಣ ಕ್ಷೇತ್ರದಲ್ಲಿಯೂ ಈ ರೀತಿಯ ವೃತ್ತಿ ಮೋಸ ಕಾಣುತ್ತಿರುವುದು ದೇಶದ ಬೆಳವಣಿಗೆಗೆ ಮಾರಕವಾದ ಸಂಗತಿ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಹಾಜರಾತಿಗೆ ಬಯೋಮೆಟ್ರಿಕ್ ವ್ಯವಸ್ಥೆ ಮಾಡಿರುವುದು ಶಿಕ್ಷಣ ವ್ಯವಸ್ಥೆಯ ಅಧಃಪತನದ ಸ್ಪಷ್ಟ ಸಂಕೇತಗಳಲ್ಲಿ ಒಂದಾಗಿದೆ. ಮೌಲ್ಯಗಳನ್ನು ಬೋಧಿಸುವ ಶಿಕ್ಷಕರೆ ಮೌಲ್ಯಗಳನ್ನು ಗಾಳಿಗೆ ತೂರಿ, ನೈತಿಕತೆಗೆ ತಿಲಾಂಜಲಿ ಹೇಳುತ್ತಾರೆ ಎಂದರೆ ದೇಶವನ್ನು ಯಾರು ಕಾಪಾಡಬೇಕು?

ಕಾಲವೊಂದಿತ್ತು, ಶಿಕ್ಷಕರು ಸ್ವಧರ್ಮರೂಪದಲ್ಲಿ ಪಾಠ ಪ್ರವಚನಗಳನ್ನು ಮಾಡುತ್ತಾ ವಿದ್ಯಾರ್ಥಿಗಳ ಪಾಲಿಗೆ ದೇವರಂತೆ ಕಾಣುತ್ತಿದ್ದರು. ಆದರೆ ಇಂದು ಕೆಲಸ ಕಳುವಲ್ಲಿ ಶಿಕ್ಷಕರಿಗೆ ಸ್ಪರ್ಧೆ ಏರ್ಪಟ್ಟಂತೆ ಇದೆ. ಆದರೆ ಇಂದಿಗೂ ಶಿಕ್ಷಕ ವೃತ್ತಿ ಎಂಬುದು ಯಾವ ದೇಶ ಸೇವೆಗೂ ಕಮ್ಮಿಯಿಲ್ಲ ಎಂದು ಭಾವಿಸಿ, ತನು-ಮನ-ಧನವನ್ನು ಅರ್ಪಿಸಿ ಸೇವೆ ಮಾಡುವ ಶಿಕ್ಷಕರು ಇದ್ದಾರೆ. ಅವರುಗಳು ಸಂಖ್ಯೆ ವಿರಳ. ಬೇರೆ ವೃತ್ತಿಗಳನ್ನು ಬಿಟ್ಟು ಶಿಕ್ಷಕ ವೃತ್ತಿ ಬಗ್ಗೆ ಹೆಚ್ಚಾಗಿ ಉಲ್ಲೇಖಿಸಲು ಒಂದು ಕಾರಣವಿದೆ. ಶಿಕ್ಷಕರು, ಕೇವಲ ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣ ಮಾಡುವ ನಿರ್ಮಾತೃಗಳಷ್ಟೇ ಅಲ್ಲ. ದೇಶ ವೊಂದರ ಬೆಳವಣಿಗೆಯ ದಿಕ್ಸೂಚಿಗಳು. 'ಒಂದು ದೇಶವನ್ನು ನಾಶಪಡಿಸಬೇಕೆಂದರೆ, ಆ ದೇಶದ ಶಿಕ್ಷಣ ವ್ಯವಸ್ಥೆಯನ್ನು ಹಾಳು ಮಾಡಿದರೆ ಸಾಕು' ಎಂಬ ಮಾತೊಂದಿದೆ. ಹೌದು, ಶಿಕ್ಷಣ ವ್ಯವಸ್ಥೆ ಕುಸಿದರೆ ಆ ದೇಶ ಕುಸಿಯಲು ಬಹಳ ವರ್ಷಗಳು ಬೇಕಿಲ್ಲ. ಎಲ್ಲಾ ವೃತ್ತಿಗಳನ್ನು ಸೃಷ್ಟಿಸುವ ವೃತ್ತಿ ಇದಾದ್ದರಿಂದ ಶಿಕ್ಷಕ ವೃತ್ತಿ ನಿರ್ವಹಿಸುವವರು ತಮ್ಮ ವೃತ್ತಿಯನ್ನು ತುಂಬಾ ಗಂಭೀರವಾಗಿ ಪರಿಗಣಿಸಬೇಕು. ಇಲ್ಲವಾದಲ್ಲಿ ಒಂದು ಪೀಳಿಗೆಯನ್ನೇ ಹಾಳು ಮಾಡಿದ ಅಪಖ್ಯಾತಿಗೆ ಶಿಕ್ಷಕರು ಗುರಿಯಾಗಬೇಕಾಗುತ್ತದೆ.

ವಿದ್ಯಾರ್ಥಿಗಳು ಉತ್ತಮ ಗುರುಗಳನ್ನು ಸ್ಮರಿಸಿಕೊಳ್ಳುವಂತೆ, ಸರಿಯಾಗಿ ಪಾಠ ಮಾಡದೆ, ಮಾರ್ಗದರ್ಶನ ಮಾಡದೆ ತಮ್ಮ ಭವಿಷ್ಯ ಹಾಳುಗೆಡವಿದ ಶಿಕ್ಷಕರನ್ನು ಸಹ ಶಪಿಸುತ್ತಾರೆ. ಶಿಕ್ಷಕರು ಪರೋಪಕಾರಕ್ಕೆ ತಮ್ಮ ವೃತ್ತಿಯನ್ನು ಪ್ರೀತಿಯಿಂದ ಮಾಡದೇ ಇದ್ದರೂ, ತಮ್ಮ ಆತ್ಮತೃಪ್ತಿಗಾದರೂ ವೃತ್ತಿಯನ್ನು ಪ್ರೀತಿಯಿಂದ ಮಾಡಬೇಕು.


ವೃತ್ತಿ ನಿರ್ವಹಿಸುವವರು ಮತ್ತೊಬ್ಬರೊಂದಿಗೆ ಹೋಲಿಸಿಕೊಂಡು ಈರ್ಷೆಪಡುತ್ತಾ ಇದ್ದರೆ, ಇರುವ ನೆಮ್ಮದಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಅವರ ವೃತ್ತಿ ಅವರಿಗೆ, ನಮ್ಮ ವೃತ್ತಿ ನಮಗೆ ಎಂದು ಭಾವಿಸುವುದು ಜಾಣತನ. ಹಣ ಗಳಿಕೆಯೇ ವೃತ್ತಿಯ ಮಾನದಂಡವಾದಲ್ಲಿ, ಗಳಿಸಿದ ಹಣದಿಂದ ಸುಖ ಸೌಕರ್ಯ ಕಂಡುಕೊಳ್ಳಬಹುದೇ ಹೊರತು ನೆಮ್ಮದಿಯನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲ. ಮಾಡುವ ವೃತ್ತಿಯಲ್ಲಿ ಹಣದಷ್ಟೇ ಅದರಿಂದ ಒಂದು ಸಂತೃಪ್ತಿ ಗಳಿಸಿಕೊಳ್ಳುವ ಇಚ್ಛೆ ಇರಬೇಕು. ಹಣ ಸಿಗುತ್ತದೆ ಎಂದು ದೇಶದ್ರೋಹದಂತಹ ಕೆಲಸ ಮಾಡಿದರೆ, ಎಷ್ಟೇ ಹಣವಿದ್ದರೂ ನೆಮ್ಮದಿಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಮಾಡುವ ವೃತ್ತಿಯು ಎಂತಹುದೇ ಇರಲಿ ಆ ವೃತ್ತಿಗೆ ಗೌರವಕೊಟ್ಟು ಮಾಡಿದರೆ ಆ ವೃತ್ತಿಯು ನಿತ್ಯ ಸಂತೃಪ್ತಿ ಕೊಡುವುದರಲ್ಲಿ ಅನುಮಾನವೇ ಇಲ್ಲ. ಹಾಗಾಗಿ ಅನ್ನ ಕೊಡುವ ಯಾವುದೇ ವೃತ್ತಿಯನ್ನು ಅವಮಾನ, ಕೀಳೆಂದು ಭಾವಿಸದೆ ಅಭಿಮಾನದಿಂದ ಮಾಡುವ ಮನೋಭಾವ ನಮ್ಮಲ್ಲಿರಬೇಕು.

ಹೂರಣ: ತನ್ನ ವೃತ್ತಿಯನ್ನು ಪ್ರೀತಿಸದೇ ಇರುವವನು ಯಾರ ಪ್ರೀತಿಗೂ ಅರ್ಹನಾಗಿರುವುದಿಲ್ಲ.

ಗೋವಾ ಮಾದರಿ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ



ಉಳ್ಳಾಲ ತಾಲೂಕಿನ ನರಿಂಗಾನದಲ್ಲಿ ಆಯೋಜಿಸಿದ್ದ ಲವ-ಕುಶ ಜೋಡುಕರೆ ಕಂಬಳದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು.



ಮಂಗಳೂರು, ಜ.11- ಕರಾವಳಿ, ಮಲೆನಾಡು ಭಾಗಗಳ ಜಿಲ್ಲೆಗಳಲ್ಲಿ ಕೇರಳ ಮತ್ತು ಗೋವಾ ಮಾದರಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಬೇಕು. ಪ್ರವಾಸೋದ್ಯಮ ಅಭಿವೃದ್ಧಿ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳೆರಡೂ ವಿಫಲವಾಗಿವೆ. ಇಲ್ಲಿ ಹೆಚ್ಚಿನ ಉದ್ಯೋಗಾವಕಾಶ ಇಲ್ಲದ ಕಾರಣ ಮಂಗಳೂರು ಭಾಗದ ಜನರು ದುಬೈ, ಮುಂಬೈ, ಬೆಂಗಳೂರಿಗೆ ವಲಸೆ ಹೋಗುತ್ತಿದ್ದಾರೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕರಾವಳಿ ಭಾಗದಲ್ಲಿ ಹೇರಳವಾಗಿ ಪ್ರಕೃತಿ ಸಂಪತ್ತು ಇದ್ದರೂ ಸರಿಯಾಗಿ ಬಳಕೆಯಾಗುತ್ತಿಲ್ಲ. ಇಲ್ಲಿನ ಶಾಸಕರ ಜೊತೆ ಮಾತನಾಡಿದ್ದೇನೆ. ಅವರು ಆಸಕ್ತಿ ತೋರಿಸಿದ್ದಾರೆ. ಟೂರಿಸಂ ಪಾಲಿಸಿ ಬಗ್ಗೆ ಚರ್ಚೆ ಮಾಡಿದ್ದೇವೆ. ಇಲ್ಲಿಗೆ ಏನಾದರೂ ವಿಶೇಷ ಯೋಜನೆ ರೂಪಿಸಲಿದ್ದೇವೆ ಎಂದರು.

ಮಂಗಳೂರು ಏರ್ ಪೋರ್ಟ್‌ನಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಮುಂಬೈ, ಬೆಂಗಳೂರಿನಲ್ಲಿರುವ ಉದ್ಯಮಿಗಳು ಸ್ವಂತ ಊರಿಗೆ ಬಂದು ಹೂಡಿಕೆ ಮಾಡಲು ಆಸಕ್ತಿ ತೋರಿಸಿದ್ದಾರೆ. ಸಹಕಾರ ಕೊಡುತ್ತೇವೆ ಎಂದಿದ್ದಾರೆ. ಅವರು ಕೆಲಸ ಮಾಡಿದರೆ ಇಲ್ಲಿನ ಯುವಜನಾಂಗಕ್ಕೆ ಉದ್ಯೋಗ ಸೃಷ್ಟಿಯಾಗುತ್ತದೆ. ಸರ್ಕಾರ ಅವರಿಗೆ ಸಹಾಯ ಮಾಡುತ್ತದೆ ಎಂದರು.

ಕರಾವಳಿ ಟೂರಿಸಂ ಪಾಲಿಸಿ: ಕರಾವಳಿ ಭಾಗಕ್ಕೆ ಟೂರಿಸಂ ಪಾಲಿಸಿ ಮಾಡುತ್ತದೆ. ಉದ್ಯಮಿಗಳು, ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇವೆ. ಇದಕ್ಕೆ ಖಾಸಗಿ ಸಹಭಾಗಿತ್ವ ಬೇಕಾಗುತ್ತದೆ ಎಂದರು.

ನರಿಂಗಾನದಲ್ಲಿ ಕಂಬಳಕ್ಕೆ ಚಾಲನೆ: ಮಂಗಳೂರು ಹತ್ತಿರ ಉಳ್ಳಾಲ ತಾಲೂಕಿನ ನರಿಂಗಾನದಲ್ಲಿ ಆಯೋಜಿಸಲಾಗಿದ್ದ ಲವ-ಕುಶ ಜೋಡುಕರೆ ಕಂಬಳದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾಗವಹಿಸಿದ್ದರು. ಕೋಣಗಳ ಓಟಕ್ಕೆ ಡಿಕೆಶಿ ಫಿದಾ ಆಗಿದ್ದು, ಸ್ಪೀಕರ್ ಯು.ಟಿ.ಖಾದರ್ ಅವರ ನಾಯಕತ್ವದಲ್ಲಿ ಕಂಬಳ ಆಯೋಜಿಸಲಾಗಿತ್ತು. ಇದೇ ವೇಳೆ ತುಳು ಭಾಷೆಯನ್ನು ಕರ್ನಾಟಕ ರಾಜ್ಯದ ಹೆಚ್ಚುವರಿ ಅಧಿಕೃತ ಭಾಷೆಯಾಗಿ ಘೋಷಿಸಬೇಕು ಮತ್ತು ಅದನ್ನು ಭಾರತದ ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಲು ಕ್ರಮ ಕೈಗೊಳ್ಳುವಂತೆ ಡಿಸಿಎಂ ಬಳಿ ಬೇಡಿಕೆ ಇಡಲಾಯಿತು.

ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ, ವೀಡಿಯೊ ಹರಿಬಿಟ್ಟ ಆರೋಪಿಗಳು

ಹುಬ್ಬಳ್ಳಿ ಪೊಲೀಸರಿಂದ ಮೂವರ ಬಂಧನ!



ಅತ್ಯಾಚಾರಿ ಆರೋಪಿಗಳು

ಹುಬ್ಬಳ್ಳಿ, ಜ.11- ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೃತ್ಯದ ವೀಡಿಯೊವನ್ನು ಹಂಚಿಕೊಂಡಿದ್ದ ಮೂವರು ಆರೋಪಿಗಳನ್ನು ಹುಬ್ಬಳ್ಳಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಮಹಿಳೆಗೆ ಮದ್ಯ ಕುಡಿಸಿ ಆಕೆಯ ಮೇಲೆ ಗ್ಯಾಂಗ್ ರೇಪ್ ಮಾಡಿರುವ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಗೆ ಬಂದು ಸಂತ್ರಸ್ತೆ ನೀಡಿದ್ದ ದೂರಿನ ಆಧಾರದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಕಾಮುಕರು ಕೃತ್ಯದ ವಿಡಿಯೋ ಕೂಡ ಮಾಡಿಕೊಂಡು ಅದನ್ನು ಹರಿಬಿಟ್ಟಿದ್ದರು.

ದೂರಿನ ಆಧಾರದ ಮೇಲೆ ಪೊಲೀಸರು ತಕ್ಷಣ ಕ್ರಮ ಕೈಗೊಂಡು ಶಿವಾನಂದ (29) ಮತ್ತು ಗಣೇಶ್ ಗಿಡ್ಡಣ್ಣವರ (31) ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರು ಶಿವಶಂಕರ ಕಾಲೋನಿ ನಿವಾಸಿಗಳಾಗಿದ್ದಾರೆ. ಅತ್ಯಾಚಾರಕ್ಕೊಳಗಾದ ಮಹಿಳೆಯನ್ನು ತಕ್ಷಣ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಚಿಕಿತ್ಸೆ ನೀಡಲಾಗಿದ್ದು, ಆಕೆಯ ಆರೋಗ್ಯ ಸ್ಥಿರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆ ಬಗ್ಗೆ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರ್ ಎನ್.ಶಶಿಕುಮಾರ್ ಪ್ರತಿಕ್ರಿಯಿಸಿದ್ದು, ಜನವರಿ 9ರಂದು ಅಂಬೇಡ್ಕರ್ ಮೈದಾನದಿಂದ ಇಬ್ಬರು ಯುವಕರು ಆಟೋದಲ್ಲಿ ಮಹಿಳೆಯನ್ನು ಕರೆದೊಯ್ದಿದ್ದರು. ಮದ್ಯ ಕುಡಿಸಿ ಅನುಚಿತವಾಗಿ ವರ್ತಿಸಿ ವೀಡಿಯೊ ಮಾಡಿಕೊಂಡಿದ್ದಾರೆ.

ಒಂದು ದಿನದ ನಂತರ ಅತ್ಯಾಚಾರಕ್ಕೊಳಗಾದ ಮಹಿಳೆ ಠಾಣೆಗೆ ಬಂದು ಅತ್ಯಾಚಾರ ಮಾಡಿ ವೀಡಿಯೊ ಮಾಡಿ ಹರಿಬಿಟ್ಟ ಬಗ್ಗೆ ದೂರು ನೀಡಿದ್ದಾಳೆ.

ಪ್ರಕರಣ ಸಂಬಂಧ ಆರೋಪಿಗಳಾದ ಶಿವಾನಂದ, ಗಣೇಶ್‌ಗೆ ಸ್ಥಳೀಯರು ಥಳಿಸಿದ್ದಾರೆ. ಕಟ್ಟಿಹಾಕಿ ತಲೆ ಬೋಳಿಸಿದ್ದಾರೆ. ಹಲ್ಲೆ ಸಂಬಂಧ ನಾಲ್ವರ ವಿರುದ್ಧ ದೂರು ದಾಖಲಾಗಿದೆ ಎಂದು ತಿಳಿಸಿದ್ದಾರೆ.

ಆರೋಪಿಗೆ ಥಳಿಸಿದವರ ಮೇಲೆಯೇ ಪ್ರಕರಣ: ಇನ್ನು ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದ ಆರೋಪಿಗಳನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದ ನಾಲ್ವರ ವಿರುದ್ಧವೂ ದೂರು ದಾಖಲಾಗಿದ್ದು, ಇದು ಭಾರಿ ಆಕ್ರೋಶಕ್ಕೆ ಕಾರಣವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ

ಮೈಸೂರಲ್ಲಿ ಶೀತಗಾಳಿಯಿಂದ ಮೈ ಕೊರೆಯುವ ಚಳಿ

●ಕೆಲವೆಡೆ ತುಂತುರು ಮಳೆ; ಜ.15ರಂದು ವಾತಾವರಣ ಸಹಜ ಸ್ಥಿತಿಗೆ ಬರಲಿದೆ ●ಮುಂಜಾನೆ ರೈತ ಸಂತೆಯಲ್ಲಿ ಬೆಂಕಿ ಕಾದ ರೈತರು



ಶೀತಗಾಳಿಯ ಪರಿಣಾಮ ಮೈಕೊರೆಯುವ ಚಳಿ ತಾಳಲಾರದೆ ಮೈಸೂರಿನಲ್ಲಿ ಭಾನುವಾರ ಮುಂಜಾನೆ ಬೆಂಕಿ ಕಾಯುತ್ತಿರುವ ದೃಶ್ಯ

ಮೈಸೂರು, ಜ.11(ಬಿಎಲ್‌ಯು)– ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪರಿಣಾಮ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಶೀತ ಗಾಳಿಯಿಂದ ಮೈಕೊರೆಯುವ ಚಳಿ ಜನರ ಕಂಗಾಲಾಗಿಸಿದೆ.

ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತವು ಉತ್ತರ ಶ್ರೀಲಂಕಾದ ತ್ರಿಕೋನಮಲಿ ಮತ್ತು ಜಾಫ್ನಾದತ್ತ ಹಾಯ್ದಿದೆ. ಪ್ರಸ್ತುತ ವಾಯು ಭಾರ ಕುಸಿತವು ಶಿಥಿಲಗೊಂಡು ಅದರ ಪ್ರಭಾವ ಕುಂದುತ್ತಿದೆ. ಆದರೂ ಶೀತ ಗಾಳಿ ಹಾಗೂ ಮಳೆಯ ತುಂತುರು ಕರಾವಳಿ ಭಾಗದಲ್ಲಿ ಉಂಟಾಗುತ್ತಿದೆ.

ಮೈಸೂರಿನಲ್ಲಿ ಶೀತಗಾಳಿ ಬೀಸುತ್ತಿದ್ದು, ಜನರನ್ನು ತ್ತತರಿಸುವಂತೆ ಮಾಡಿದೆ. ಮಂಜು ಮುಸುಕಿದ ವಾತಾವರಣವಿದ್ದು, ಸೂರ್ಯನ ಕಿರಣಗಳು ಮರೆಯಾಗಿವೆ ಶೀತಗಾಳಿಯ ಪರಿಣಾಮ ಚಾಮುಂಡಿ ಬೆಟ್ಟ ದಟ್ಟ ಮಂಜಿನಿಂದ ಆವೃತ್ತವಾಗಿದೆ.

ಮೈಸೂರಿನಲ್ಲಿ ಊಟಿ, ಮಡಿಕೇರಿ ಹಾಗೂ ಮಲೆನಾಡಿನ ವಾತಾವರಣ ನಿರ್ಮಾಣ ವಾಗಿದ್ದು, ಜನರು ಸ್ವೆಟರ್, ಜರ್ಕಿನ್, ಶಾಲು, ಟೋಪಿ ಧರಿಸುವುದು ಸಾಮಾನ್ಯವಾಗಿದೆ. ಮಳೆಯ ಆರ್ಭಟ ವಿಲ್ಲ. ಆದರೆ ತುಂತುರು ಮಳೆ ಬೀಳುತ್ತಿದೆ.

ಮೈಸೂರಿನಲ್ಲಿ ಇಂದು ಕನಿಷ್ಟ 16 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು, ರಾತ್ರಿ ಹಾಗೂ ಮುಂಜಾನೆ ವೇಳೆ 12 ರಿಂದ 14 ಸೆಲ್ಸಿಯಸ್ ಉಷ್ಣಾಂಶವಿತ್ತು. ಗರಿಷ್ಟ 27.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಮಳೆ ಇರಲಿ, ಚಳಿ ಇರಲಿ, ಬಿಸಿಲಿರಲಿ ರೈತರಿಗಂತೂ ಕಾಯಕ ತಪ್ಪಲ್ಲ. ಮೈಸೂರಿನ ಸುತ್ತಮುತ್ತಲಿನ ರೈತರು ರಾತ್ರಿ ಹಾಗೂ ಮುಂಜಾನೆ ಮಾರುಕಟ್ಟೆಗೆ ತರಕಾರಿ, ಹೂವು ತರುತ್ತಾರೆ. ಆ ವೇಳೆ ಮೈಮುದುಡುವ ಚಳಿಯಿಂದ ಬೆಂಕಿ ಕಾಯುವ ದೃಶ್ಯ ಸಾಮಾನ್ಯವಾಗಿತ್ತು.

ರಾತ್ರಿಯಾಗುತ್ತಿದ್ದಂತೆ ಶೀತಗಾಳಿ ಮತ್ತಷ್ಟು ಹೆಚ್ಚಾಗಿದ್ದು, ಹೊರಗೆ ಬಾರದ ಜನರು ಬೆಚ್ಚಗೆ ಮನೆ ಸೇರಿದ್ದಾರೆ. ಇದರಿಂದ ಮೈಸೂರಲ್ಲಿ ಜನ ಹಾಗೂ ವಾಹನ ಸಂಚಾರ ವಿರಳವಾಗಿದ್ದು, ಹವಾಮಾನ ಇಲಾಖೆ ನೀಡಿರುವ ಮಾಹಿತಿ ಪ್ರಕಾರ ನಾಳೆ ಕೂಡ ಇದೇ ರೀತಿಯ ಶೀತಗಾಳಿ ಬೀಸಲಿದೆ. ಆದರೆ ಮಂಗಳವಾರ ಹಾಗೂ ಬುಧವಾರ ಸ್ವಲ್ಪ ಕಡಿಮೆಯಾಗಲಿದ್ದು, ಜನವರಿ 15ರಂದು ವಾತಾವರಣ ಸಹಜ ಸ್ಥಿತಿಗೆ ಬರಲಿದೆ.



ಭಾನುವಾರ ಮೈಸೂರಿಗೆ ಆಗಮಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರನ್ನು ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಈ ವೇಳೆ ಬಿಜೆಪಿ ನಗರ ಜಿಲ್ಲಾ ಉಪಾಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಸಂಸದ ಪ್ರತಾಪ್ ಸಿಂಹ, ಜಿಲ್ಲಾಧ್ಯಕ್ಷ ಸುಬ್ಬಣ್ಣ, ಮುಖಂಡರಾದ ರಾಮಚಂದ್ರ, ಪರೀಕ್ಷಿತ ಅರಸ್, ಗೋಪಾಲಗೌಡ, ಸೋಮಶೇಖರ್, ಪ್ರದೀಪ್ ಮತ್ತಿತರರು ಉಪಸ್ಥಿತರಿದ್ದರು.

ಕೋಟಿ ಬಾಳುವ ಜಮೀನ ಐದತ್ತು ಲಕ್ಷಕ್ಕೆ ಮಾರಿದ್ದ ರೈತರು ಈಗ ಒಂದು ನಿವೇಶನಕ್ಕೆ ಪರದಾಡುತ್ತಿದ್ದಾರೆ!

●ಶಾಸಕ ಜಿ.ಟಿ.ದೇವೇಗೌಡರ ಬೇಸರ ●ಇರುವ ಜಮೀನು ಮಾರದೆ ಉಳಿಸಿಕೊಳ್ಳಿ; ಆಡಂಬರದ ಜೀವನ ಬಿಡಿ ●ಜಮೀನಿನಲ್ಲಿ ಸೊಪ್ಪು, ತರಕಾರಿ, ಹಣ್ಣು ಬೆಳೆಯಿರಿ ●ಮಹಿಳೆಯ ಉಳಿತಾಯದಿಂದ ಗಂಡಸಿಗೆ ಒಂದಿಷ್ಟು ನೆಮ್ಮದಿ



ಮೈಸೂರಿನ ನಾಗನಹಳ್ಳಿಯಲ್ಲಿ ಭಾನುವಾರ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಕಳಸ್ತವಾಡಿ ವಲಯದ ಸ್ವಸಹಾಯ ಸಂಘಗಳ ಒಕ್ಕೂಟ ಆಯೋಜಿಸಿದ್ದ ಸಾಮೂಹಿಕ ಸತ್ಯ ನಾರಾಯಣ ಪೂಜಾ ಧಾರ್ಮಿಕ ಕಾರ್ಯಕ್ರಮವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು.

ಮೈಸೂರು, ಜ.11(ಬಿಎಲ್‌ಯು)– ಮೈಸೂರು ಸುತ್ತಮುತ್ತಲ ಗ್ರಾಮಗಳ ರೈತರು ಐದತ್ತು ಲಕ್ಷಕ್ಕೆ ಜಮೀನು ಮಾರಾಟ ಮಾಡಿ, ಈಗ ಒಂದು ನಿವೇಶನವೂ ಇಲ್ಲದೆ ಪರದಾಡುತ್ತಿದ್ದಾರೆ ಎಂದು ಶಾಸಕ ಜಿ.ಟಿ. ದೇವೇಗೌಡರು ಬೇಸರ ವ್ಯಕ್ತಪಡಿಸಿದರು.

ಮೈಸೂರು ತಾಲೂಕಿನ ನಾಗನ ಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಇಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಕಳಸ್ತವಾಡಿ ವಲಯದ ಸ್ವಸಹಾಯ ಸಂಘಗಳ ಒಕ್ಕೂಟ ಆಯೋ ಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜೆಯ ಧಾರ್ಮಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಲ್ಪ ಸ್ವಲ್ಪ ಭೂಮಿ ಉಳಿಸಿಕೊಂಡಿರುವ ರೈತರು ಜಮೀನು ಮಾರಾಟ ಮಾಡದೆ ಆಸ್ತಿ ಸಂರಕ್ಷಣೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಿದ್ದಲಿಂಗಪುರ, ನಾಗನಹಳ್ಳಿ ಭಾಗದ ಜನರು ಜಮೀನು ಉಳಿಸಿಕೊಂಡು ಈಗಲೂ ಕೃಷಿ ಮಾಡುತ್ತಿದ್ದಾರೆ. ಆದರೆ ಪಡುವಾರ ಹಳ್ಳಿ, ಕುಂಬಾರಕೊಪ್ಪಲು, ಕೆ.ಜಿ.ಕೊಪ್ಪಲು, ಮಂಚೇಗೌಡನಕೊಪ್ಪಲು ಸೇರಿದಂತೆ ಮೈಸೂರು ಸುತ್ತಮುತ್ತಲ ಗ್ರಾಮದ ಜನರು ಕೇವಲ ಐದತ್ತು ಲಕ್ಷಕ್ಕೆ ಜಮೀನು ಮಾರಾಟ ಮಾಡಿ, ಈಗ ಒಂದೇ ಒಂದು ನಿವೇಶನಕ್ಕೆ ಹಾತೊರೆಯುವ ಪರಿಸ್ಥಿತಿ ತಂದುಕೊಂಡಿದ್ದಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು.

ಆಡಂಬರದ ಜೀವನ ಬೇಡ: ಈಗ ಕೋಟಿ ಕೋಟಿ ಕೊಟ್ಟರೂ ಭೂಮಿ ಸಿಗುತ್ತಿಲ್ಲ. ಆಸ್ತಿ ಮಹತ್ವವನ್ನು ಈಗಲಾದರೂ ಅರಿಯಬೇಕು. ಜಮೀನು ಮಾರಾಟ ಮಾಡಿ ಅದ್ಧೂರಿ ಮದುವೆ ಸೇರಿದಂತೆ ಆಡಂಬರದ ಜೀವನ ಮಾಡುವುದನ್ನು ಈಗಲಾದರೂ ಬಿಡಬೇಕು. ಇರುವ ಆಸ್ತಿ ಸಂರಕ್ಷಣೆ ಮಾಡಿಕೊಳ್ಳಬೇಕು. ಮಕ್ಕಳನ್ನು ಚೆನ್ನಾಗಿ ಓದಿಸಿ, ಉನ್ನತ ಶಿಕ್ಷಣ ನೀಡಬೇಕು ಎಂದು ಕಿವಿಮಾತು ಹೇಳಿದರು.

ಈ ಮೊದಲು ಹತ್ತನ್ನೆರಡು ಮಕ್ಕಳ ಹೊಂದುತ್ತಿದ್ದರು, ಆದರೆ, ಈಗ ಒಂದು ಅಥವಾ ಎರಡು ಮಕ್ಕಳು ಸಾಕೆನ್ನುತ್ತಿದ್ದಾರೆ. ಇತ್ತೀಚಿಗೆ ಅನಾರೋಗ್ಯ ಸಮಸ್ಯೆ ಬಹಳಷ್ಟು ಜನರನ್ನು ಕಾಡುತ್ತಿದೆ. ಬಿಪಿ, ಶುಗರ್ ಎಲ್ಲರನ್ನು ಕಾಡುತ್ತಿರುವ ಅನಾ ರೋಗ್ಯದ ಸಮಸ್ಯೆಯಾಗಿದೆ. ಈ ಹಿನ್ನೆಲೆ ಯಲ್ಲಿ ಆಹಾರ ಪದ್ಧತಿ ಹಾಗೂ ಜೀವನ ಶೈಲಿಯಲ್ಲಿ ಶಿಸ್ತು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು.

ತರಕಾರಿ ಬೆಳೆದುಕೊಳ್ಳಿ: ಮಹಿಳೆಯರು ಸೊಪ್ಪು, ತರಕಾರಿ, ಹಣ್ಣು-ಹಂಪಲು ಖರೀದಿಸಲು ನಗರಕ್ಕೆ ಹೋಗದೆ ತಮ್ಮ ಜಮೀನಿನಲ್ಲೇ ಬೆಳೆಯಬೇಕು. ಹೋಟೆಲ್‌ಗಳಲ್ಲಿ ಊಟ, ತಿಂಡಿ ಮಾಡುವುದನ್ನು ಬಿಟ್ಟು ಮನೆ ಆಹಾರ ಸೇವಿಸಬೇಕು. ಇದರಿಂದ ಆರೋಗ್ಯಕ್ಕೂ ಒಳ್ಳೆಯದು ಎಂದು ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ಹೆಣ್ಣಿಂದ ಗಂಡಸು ನೆಮ್ಮದಿ: ಗಂಡಸು ಉಳಿತಾಯ ಮಾಡಲು ಸಾಧ್ಯವಾಗ ದಿದ್ದರೂ ಮಹಿಳೆಯರು ಮಾತ್ರ ಹಣ ಕೂಡಿಡುತ್ತಿದ್ದಾರೆ. ಇದರಿಂದ ಮಕ್ಕಳ ವಿದ್ಯಾಭ್ಯಾಸ, ಹೈನುಗಾರಿಕೆ, ಉಪ ಕಸುಬು, ಕುಟುಂಬ ನಿರ್ವಹಣೆ ಸಾಧ್ಯವಾಗುತ್ತಿದೆ. ಇದರಿಂದ ಗಂಡಸು ಒಂದಿಷ್ಟು ನೆಮ್ಮದಿ ಯಾಗಿ ಇರುವಂತಾಗಿದೆ ಎಂದು ಹೇಳಿದರು.

ಮಹಿಳೆಯರು ಹಲವು ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಈ ಮೂಲಕ ತಾವು ಅಬಲೆಯರಲ್ಲ, ಸಬಲೆಯರು ಎಂದು ಸಾಬೀತು ಮಾಡಿದ್ದಾರೆ. ಸಮೃದ್ಧ ದೇಶ ಕಟ್ಟಬೇಕಾದರೆ ಪ್ರತಿಯೊಬ್ಬರು ಆರ್ಥಿಕವಾಗಿ ಸಶಕ್ತರಾಗಿರಬೇಕು ಎಂದು ತಿಳಿಸಿದರು. ಶ್ರೀ ತ್ರಿನೇತ್ರ ಮಹಾಂತ ಸ್ವಾಮೀಜಿ ಸಾನಿಧ್ಯ ವಹಿಸಿದ್ದ ಕಾರ್ಯಕ್ರಮ ದಲ್ಲಿ ಸತ್ಯ ನಾರಾಯಣ ಪೂಜಾ ಸಮಿತಿ ಅಧ್ಯಕ್ಷೆ ಸಿ.ರೂಪ ತುಳಸಿರಾಮ್, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಜಂಟಿ ನಿರ್ದೇಶಕ ವಿ.ವಿಜಯ ಕುಮಾರ್, ಡಾ.ಎಂ.ಎಸ್.ಶ್ವೇತಾ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಎಸ್.ದಿನೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೊಸೆಯಾದವಳು ಅತ್ತೆಯಾಗುವ ಸತ್ಯ ಮರೆಯದಿರಿ!

ಸೊಸೆಯಾದವಳು ಮುಂದೊಂದು ದಿನ ಅತ್ತೆಯಾಗುತ್ತಾಳೆ ಎಂಬ ಕಟು ಸತ್ಯವನ್ನು ಅರಿಯಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರು ಕಿವಿ ಮಾತು ಹೇಳಿದರು. ಅತ್ತೆ-ಸೊಸೆ ಜಗಳವಾಡದೆ ಅನ್ಯೋನತೆಯಿಂದ ಇರಬೇಕು. ಒಬ್ಬರಿಗೊಬ್ಬರು ಪರಸ್ಪರ ಪ್ರೀತಿಯಿಂದ ಕಾಣಬೇಕು. ಇದರಿಂದ ಮನೆಯಲ್ಲಿ ಕೂಡ ನೆಮ್ಮದಿಯ ವಾತಾವರಣ ನಿರ್ಮಾಣವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಅತ್ತೆ ಸೊಸೆ ಜಗಳವಾಡಿಕೊಂಡು ಮನೆಯಲ್ಲಿ ಒಡಕು ಮೂಡಿಸಬಾರದು. ಸೊಸೆಯಾದವಳು ವೃದ್ಧ ಅತ್ತೆಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಜಿ.ಟಿ.ದೇವೇಗೌಡರು ಸಲಹೆ ನೀಡಿದರು.

ಕೇರಳದ ಕನ್ನಡ ಶಾಲೆಗಳಲ್ಲಿ ಮಲೆಯಾಳಂ ಕಡ್ಡಾಯ ಖಂಡಿಸಿ ಕನ್ನಡ ಚಳವಳಿಗಾರರ ಪೊರಕೆ ಚಳವಳಿ



ಕಾಸರಗೋಡು, ಮಂಜೇಶ್ವರಗಳ 200ಕ್ಕೂ ಹೆಚ್ಚು ಕನ್ನಡ ಶಾಲೆಗಳಲ್ಲಿ ಮಲಯಾಳಂ ಹೇರಿಕೆ ಖಂಡಿಸಿ ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘದಿಂದ ಭಾನುವಾರ ಪೊರಕೆ ಚಳುವಳಿ ನಡೆಸಲಾಯಿತು.

ಮೈಸೂರು, ಜ.11(ಎಂಕೆ)– ಕಾಸರಗೋಡು ಹಾಗೂ ಮಂಜೇಶ್ವರಗಳ 200ಕ್ಕೂ ಹೆಚ್ಚು ಕನ್ನಡ ಶಾಲೆಗಳಲ್ಲಿ ಮಲಯಾಳಂ ಹೇರಿಕೆ ಖಂಡಿಸಿ ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘದಿಂದ ಭಾನುವಾರ ಪೊರಕೆ ಚಳುವಳಿ ನಡೆಸಲಾಯಿತು.

ಮೈಸೂರಿನ ಅಗ್ರಹಾರದಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಭಾವಚಿತ್ರ ವಿಕೃತಗೊಳಿಸಿ, ಪೊರಕೆ ಹಿಡಿದು ಧಿಕ್ಕಾರದ ಘೋಷಣೆ ಕೂಗಿದ ಪ್ರತಿಭಟನಾಕಾರರು, ಮಲಯಾಳಂ ಭಾಷಾ ಮಸೂದೆಯನ್ನು ಕೇರಳ ರಾಜ್ಯ ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಕಾಸರಗೋಡು ಹಾಗೂ ಮಂಜೇಶ್ವರದಲ್ಲಿ ಶೇ.70ರಷ್ಟಿರುವ ಕನ್ನಡಿಗರ, ಕನ್ನಡ ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಮಲಯಾಳಂ ಕಲಿಯಬೇಕು ಎಂದು ಬಲವಂತವಾಗಿ ಭಾಷಾ ಹೇರಿಕೆ ಮಾಡುವುದು ಖಂಡನೀಯ. ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಕೇರಳ ಸರ್ಕಾರದೊಂದಿಗೆ ಚರ್ಚಿಸಿ, ಮಲಯಾಳಂ ಹೇರಿಕೆ ತಡೆಯಬೇಕು. ಹಾಗೆಯೇ ಕಾಸರಗೋಡಿನ ಕನ್ನಡ ಶಾಲೆಗಳ ನಿರ್ವಹಣೆಯನ್ನು ರಾಜ್ಯ ಸರ್ಕಾರವೇ ವಹಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು. ಸಂಘದ ಅಧ್ಯಕ್ಷ ಬಿ.ಎ.ಶಿವಶಂಕರ್, ಕಾರ್ಯದರ್ಶಿ ದೂರ ಸುರೇಶ್, ಹಳ್ಳಿಕೆರೆ ಭಾಗ್ಯರಾಜ್, ವೇಣುಗೋಪಾಲ್, ನಾಗಮ್ಮ, ಹರದನಹಳ್ಳಿ ಬಸವರಾಜ್, ಜೈಕುಮಾರ್, ಶಾರದಮ್ಮ, ಕಿರಣ್ ಮತ್ತಿತರರಿದ್ದರು.

ಭಾರತದ ವಿರುದ್ಧ ಅಮೆರಿಕಾ ಮತ್ತೊಂದು ತೆರಿಗೆ ಗದಾ ಪ್ರಹಾರ

ಅಮೆರಿಕಾ: ರಷ್ಯಾದಿಂದ ಅಗ್ಗದ ದರದಲ್ಲಿ ತೈಲ ಖರೀದಿಸುತ್ತಿರುವ ದೇಶಗಳನ್ನು ಮಟ್ಟಹಾಕಲು ಅಮೆರಿಕ ಮತ್ತೊಮ್ಮೆ ಸುಂಕದ ಅಸ್ತ್ರವನ್ನು ಪ್ರಯೋಗಿಸಲು ಮುಂದಾಗಿದ್ದು, ಅಧ್ಯಕ್ಷ ಡೊನಾಲ್ಡ್ ಟ್ರಂಪ್ 'ರಷ್ಯಾ ನಿರ್ಬಂಧಗಳ ಮಸೂದೆ 2025'ಕ್ಕೆ ಅನುಮೋದನೆ ನೀಡಿದ್ದಾರೆ ಎಂದು ಅಮೆರಿಕದ ರಿಪಬ್ಲಿಕನ್ ಸೆನೆಟರ್ ಲಿಂಡ್ಸೆ ಗ್ರಹಾಂ ಮಾಹಿತಿ ನೀಡಿದ್ದಾರೆ.

ಈ ಮಸೂದೆ ಜಾರಿಯಾದರೆ ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತದ ಮೇಲೆ ನೇರ ಪರಿಣಾಮ ಬೀರಲಿದ್ದು, ಶೇ.500ರಷ್ಟು ಸುಂಕವನ್ನು ವಿಧಿಸಲು ಅವಕಾಶ ದೊರೆಯಲಿದೆ. ಪರಣಾಮವಾಗಿ ಅತಿದೊಡ್ಡ ರಫ್ತುದಾರ ರಾಷ್ಟ್ರವಾಗಿರುವ ಭಾರತಕ್ಕೆ ಅಮೆರಿಕದ ಬಾಗಿಲು ಬಹುತೇಕ ಮುಚ್ಚಿದಂತಾಗುತ್ತದೆ. ಪ್ರಮುಖವಾಗಿ ಜವಳಿ ಮತ್ತು ಸಿದ್ಧ ಉಡುಪುಗಳು, ರತ್ನ ಮತ್ತು ಆಭರಣ, ಪಾದರಕ್ಷೆ ಮತ್ತು ಪೀಠೋಪಕರಣ, ಐಟಿ ಸೇವೆಗಳು ಮತ್ತು ಔಷಧಗಳ (ಫಾರ್ಮಾ) ಕ್ಷೇತ್ರ ಹೆಚ್ಚು ಬಾಧಿತವಾಗಲಿವೆ.



ವಾಣಿಜ್ಯ ತಜ್ಞರ ಪ್ರಕಾರ ಶೇ.500ರಷ್ಟು ಸುಂಕವು ಕೇವಲ ತೆರಿಗೆಯಾಗಿ ಉಳಿಯದೆ, ಇದು ಭಾರತೀಯ ಸರಕುಗಳ ಮೇಲೆ ಹೇರಲಾದ ಒಂದು ರೀತಿಯ 'ವಾಣಿಜ್ಯ ದಿಗ್ಬಂಧನ'ದಂತೆ ಪರಿಣಾಮ ಬೀರುತ್ತದೆ. ಇಷ್ಟು ದೊಡ್ಡ ಪ್ರಮಾಣದ ಸುಂಕದಿಂದಾಗಿ ಭಾರತೀಯ ಉತ್ಪನ್ನಗಳ ಬೆಲೆ ಗಗನಕ್ಕೇರಿ, ಅಮೆರಿಕದ ಮಾರುಕಟ್ಟೆಯಲ್ಲಿ ಇತರ ದೇಶಗಳ ಉತ್ಪನ್ನಗಳ ಮುಂದೆ ಸ್ಪರ್ಧಾತ್ಮಕತೆ ಸಂಪೂರ್ಣವಾಗಿ ಕಳೆದುಕೊಳ್ಳುತ್ತವೆ. ಅಲ್ಲದೆ ಈವರೆಗೆ ಸುಂಕದ ವ್ಯಾಪ್ತಿಯಿಂದ ಹೊರಗುಳಿದಿದ್ದ ಫಾರ್ಮಾ, ಐಟಿ ಸೇವೆಗಳು, ಎಲೆಕ್ಟ್ರಾನಿಕ್ಸ್‌ನಂತಹ ಪ್ರಮುಖ ಸೇವಾ ವಲಯಗಳಿಗೂ ಅನ್ವಯವಾಗುವ ಈ ಹೊಸ ಕಾನೂನು ಭೀತಿ ಹುಟ್ಟಿಸಿದೆ.

ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಗ್ಯಾರಂಟಿ ಯೋಜನೆಗಳು ಅನುಷ್ಠಾನ



ಮೈಸೂರು ಗೋಲ್ಡ್ ಸಿಟಿ ಟ್ರಸ್ಟ್ ವತಿಯಿಂದ ವಿಕಲಚೇತನರಿಗೆ ಆಹಾರ ಪಡಿತರದ ಕಿಟ್ ವಿತರಿಸಲಾಯಿತು.

ಮೈಸೂರು,ಜ.11(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಮಹಿಳೆಯರು ಸ್ವಾವಲಂಬನೆಯಿಂದ ಬದುಕಬೇಕು ಎಂಬ ಉದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ತಿಳಿಸಿದರು.

ಮೈಸೂರಿನ ಜಾವಾ ರೋಟರಿ ಸ್ಕೂಲ್ ಸಭಾಂಗಣದಲ್ಲಿ ಮೈಸೂರು ಗೋಲ್ಡ್ ಸಿಟಿ ಟ್ರಸ್ಟ್ ಉದ್ಘಾಟನೆ ಮತ್ತು ವಿಕಲಚೇತನರಿಗೆ ಆಹಾರ ಪಡಿತರ ಪದಾರ್ಥಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಮಾಜಸೇವೆ, ಪರೋಪಕಾರ, ಮಾನವೀಯತೆಯ ಧ್ಯೇಯಗಳನ್ನಿಟ್ಟುಕೊಂಡು ಇಂದು ಟ್ರಸ್ಟ್ ಸ್ಥಾಪಿಸಲು ಮುಂದಾಗಿರುವುದು ನಿಜಕ್ಕೂ ಅತ್ಯಂತ ಸಂತೋಷದಾಯಕ ವಿಚಾರ ಎಂದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಮಹಿಳೆಯರಿಗೂ ಎಲ್ಲಾ ವಿಭಾಗದಲ್ಲಿಯೂ ಸಮಾನ ಅವಕಾಶಗಳನ್ನು ನೀಡಬೇಕೆಂದು ಕಾನೂನು ರೂಪಿಸಿದರು. ಬಸವಣ್ಣನವರು ಸಹ ತಮ್ಮ ಅನುಭವ ಮಂಟಪದ ಮೂಲಕ ಮಹಿಳೆಯರಿಗೂ ಕೂಡ ಸಮಾನ ವೇದಿಕೆ ನೀಡಿದರು. ಅವರ ಮಹಿಳಾ ಪರವಾದ ಚಿಂತನೆಗಳು ಮಹಿಳೆಯರು ಸಮಾಜದಲ್ಲಿ ಮುಖ್ಯ ವಾಹಿನಿಗೆ ಬರಲು ಪ್ರೇರೇಪಣೆಯಾಯಿತು ಎಂದರು.

ಮೈಸೂರು ಗೋಲ್ಡ್ ಸಿಟಿ ಟ್ರಸ್ಟ್ ಉದ್ಘಾಟನೆ

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಸಹ ಮಹಿಳೆಯರು ಸ್ವಾವಲಂಬನೆಯಿಂದ ಬದುಕಬೇಕು ಎಂಬ ಉದ್ದೇಶದಿಂದ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆ.ಇಂದು ಪ್ರತಿಯೊಬ್ಬ ಮಹಿಳೆಯೂ ಅನ್ನಭಾಗ್ಯ, ಗೃಹಲಕ್ಷ್ಮಿ, ಶಕ್ತಿ ಯೋಜನೆಯ ಮೂಲಕ ಆರ್ಥಿಕ, ಸಾಮಾಜಿಕವಾಗಿ ಬಲವರ್ಧನೆಯಾಗಲು ಸಹಕಾರಿಯಾಗಿದೆ. ಆದ್ದರಿಂದ ಮಹಿಳೆಯರು ಸಂಘಟಿತರಾಗಿ, ಸಾಮೂಹಿಕವಾಗಿ ಹೋರಾಟ, ಯೋಜನೆ ರೂಪಿಸಿದರೆ ಖಂಡಿತವಾಗಿ ಯಶಸ್ಸು ಕಾಣಲು ಸಾಧ್ಯ. ಅದರಂತೆ ಈ ಟ್ರಸ್ಟ್ ಒಳ್ಳೆಯ ಗುರಿಗಳನ್ನು ಹೊಂದಿದ್ದು ಅದೆಲ್ಲವೂ ಸಾಕಾರಗೊಳ್ಳಲಿ. ಸಮಾಜಮುಖಿ ಕೆಲಸಗಳನ್ನು ಸಮಾಜಕ್ಕಾಗಿ ಮಾಡಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ನೂರಕ್ಕೂ ಹೆಚ್ಚು ವಿಕಲಚೇತನರಿಗೆ ಆಹಾರ ಪಡಿತರ ಕಿಟ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಮೈಸೂರು ವಿವಿ ಕನ್ನಡ ಪ್ರಾಧ್ಯಾಪಕ ಪ್ರೊ.ಡಾ.ಮುಳ್ಳೂರು ನಂಜುಂಡಸ್ವಾಮಿ, ಸಮಾಜ ಸೇವಕ ಮೆಲ್ಲಹಳ್ಳಿ ರಾಜೇಶ್, ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷೆ ಎಂ.ಪಿ.ಪವಿತ್ರ, ಖಜಾಂಚಿ ಗ್ರೇಸ್ ಮರೆಜ, ಕಾರ್ಯದರ್ಶಿ ಕೆ.ಎನ್.ಭವ್ಯ, ಸಂಘಟನಾ ಕಾರ್ಯದರ್ಶಿ ಚಂದ್ರಕಲಾ, ಸಹ ಕಾರ್ಯದರ್ಶಿ ಅಜ್ಜರ್ ಅಹಮದ್, ಸಂಘಟನಾ ಕಾರ್ಯದರ್ಶಿ ಎ.ಶಾರನ್ ಜೆನಿಫರ್, ಉಪಾಧ್ಯಕ್ಷೆ ಕೆ.ಶಶಿಕಲಾ, ಮುತ್ತುರಾಜ್, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಅಬ್ದುಲ್ ಶುಕೂರ್, ಲಕ್ಷ್ಮಿ, ಜ್ಯೋತಿ, ಸರಸ್ವತಿ ಮತ್ತಿತರರು ಉಪಸ್ಥಿತರಿದ್ದರು.

ಆನ್‌ಲೈನ್‌ನಲ್ಲಿ ಮಾನವನ ತಲೆಬುರುಡೆ, ಉಡಗಳ ಜನನಾಂಗ, ಹುಲಿ ಚರ್ಮ ಮಾರಾಟ; ಮಾಂತ್ರಿಕನ ಬಂಧನ

ಬೆಂಗಳೂರು: ಮಾಟಮಂತ್ರ, ವಶೀಕರಣಕ್ಕಾಗಿ ಮಾನವನ ತಲೆಬುರುಡೆ, ಉಡದ ಜನನಾಂಗ, ಹುಲಿ ಚರ್ಮವನ್ನು ಇರಿಸಿಕೊಂಡಿದ್ದ ಮಾಂತ್ರಿಕನೊಬ್ಬನನ್ನು ವನ್ಯಜೀವಿ (ರಕ್ಷಣೆ) ಕಾಯ್ದೆ, 1972 ರ ಅಡಿಯಲ್ಲಿ ಬೆಂಗಳೂರು ವಲಯ ಘಟಕದ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ)ದ ಅಧಿಕಾರಿಗಳು ಬಂಧಿಸಿದ್ದಾರೆ.

ಜ.9 ರಂದು ಅಧಿಕಾರಿಗಳು ಕಾರ್ಯಾಚರಣೆ ನಡೆಸಿದ್ದು, ಮಾಂತ್ರಿಕನನ್ನು ಬಂಧನಕ್ಕೊಳಪಡಿಸಿದ್ದಾರೆ. ಈತನಿಂದ 5 ಮಾನವ ತಲೆಬುರಡೆ, ಮಾನವ ದೇಹದ ಇತರೆ ಮೂಳೆ, ಹುಲಿ ಚರ್ಮ, ಇತರೆ ಪ್ರಾಣಿಗಳ ಚರ್ಮ, 206 ಉಡಗದ ಜನನಾಂಗ, ಹತ್ ಜೋಡಿಸ, 1.1 ಕೆಜಿ ಹವಳಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆಂದು ತಿಳಿದುಬಂದಿದೆ. ಆರೋಪಿಯನ್ನು ಇದೀಗ ನ್ಯಾಯಾಂಗ ಬಂಧನಕ್ಕೊಳಪಡಿಸಲಾಗಿದೆ.


ಆರೋಪಿಯು ತಾನು ಮಾಂತ್ರಿಕತೆಯನ್ನು ಅಭ್ಯಾಸ ಮಾಡುವುದಾಗಿ, ಅದಕ್ಕಾಗಿ ನೆರೆಯ ರಾಜ್ಯದ ಸ್ಮಶಾನದಿಂದ ಮಾನವ ತಲೆಬುರುಡೆಗಳನ್ನು ತೆಗೆದುಕೊಂಡಿದ್ದೇನೆಂದು ಅಧಿಕಾರಿಗಳ ಬಳಿ ಹೇಳಿದ್ದಾನೆ. 'ಹತ್ ಜೋಡಿ' ಮತ್ತು ಸಾಫ್ಟ್ ಕೋರಲ್‌ಗಳು ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಶೆಡ್ಯೂಲ್‌ನ ಅಡಿಯಲ್ಲಿ ಸಂಪೂರ್ಣ ರಕ್ಷಿತ ವಸ್ತುಗಳಾಗಿವೆ.

ಖಚಿತ ಮಾಹಿತಿಯ ಆಧಾರದ ಮೇಲೆ ಡಿಆರ್‌ಐ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ಆರೋಪಿಯು ಈ ವಸ್ತುಗಳನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ವೇಳೆ ತಡೆದು ಬಂಧನಕ್ಕೊಳಪಡಿಸಿದ್ದಾರೆ.

ವಿಚಾರಣೆ ವೇಳೆ ಆರೋಪಿ ತನ್ನ ಮನೆಯಲ್ಲಿಯೂ ಇಂತಹ ಹಲವು ವಸ್ತುಗಳಿರುವುದಾಗಿ ಹಾಗೂ ಅವುಗಳಿಗೆ ಯಾವುದೇ ಪರವಾನಗಿ ಅಥವಾ ಅನುಮತಿ ಇಲ್ಲದಿರುವುದಾಗಿ ತಿಳಿಸಿದ್ದಾನೆಂದು ತಿಳಿದುಬಂದಿದೆ ಮಾಹಿತಿ ಆಧರಿಸಿ ಅಧಿಕಾರಿಗಳು ಆರೋಪಿಯ ಮನೆಯಲ್ಲೂ ಪರಿಶೀಲನೆ ನಡೆಸಿದ್ದು, ಹುಲಿ ಚರ್ಮವನ್ನೇ ಹೋಲುವ ಇತರೆ ಪ್ರಾಣಿಗಳ ಚರ್ಮ, ಅವುಗಳ ಕಾಲು, ಇತರೆ ಪ್ರಾಣಿಗಳ ಬಾಲ, ಐದು ಮಾನವ ಅಸ್ಥಿ ಪಂಜರದ ತಲೆಬುರುಡೆ ಹಾಗೂ ಮೂಳೆಗಳ ತುಂಡನ್ನು ವಶಪಡಿಸಿಕೊಂಡಿದ್ದಾರೆ. ಈ ಮೂಳೆಗಳನ್ನು ಮುಂದಿನ ಕ್ರಮಕ್ಕಾಗಿ ಸ್ಥಳೀಯ ಪೊಲೀಸರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಹತ್ ಜೋಡಿ' ಮತ್ತು ಸಮುದ್ರ ಹವಳಗಳು ವಶಪಡಿಸಿಕೊಂಡ ಹಲವಾರು ಇನ್ನಿತರೆ ವಸ್ತುಗಳು ವನ್ಯಜೀವಿಗಳದ್ದೇ ಆಗಿದೆ ಎಂದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿ ದೃಢಪಡಿಸಿದೆ ಇದೀಗ ಈತನ ವಿರುದ್ಧ ವನ್ಯಜೀವಿ (ರಕ್ಷಣೆ) ಕಾಯ್ದೆಯ ಹಲವಾರು ವಿಭಾಗಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ವಶಪಡಿಸಿಕೊಂಡ ವನ್ಯಜೀವಿ ಉತ್ಪನ್ನಗಳನ್ನು ಹೆಚ್ಚಿನ ಪರೀಕ್ಷೆಗಾಗಿ ಬನ್ನೇರುಘಟ್ಟ ಅರಣ್ಯ ಅಧಿಕಾರಿಗಳಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾಧಕರಿಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ಪ್ರದಾನ



ಮೈಸೂರು ಕನ್ನಡ ವೇದಿಕೆಯಿಂದ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ನೀಡಲಾಯಿತು.

ಮೈಸೂರು,ಜ.11(ಎಂಟಿವೈ)– ರಾಷ್ಟ್ರಕವಿ ಕುವೆಂಪು ಜನ್ಮದಿನದ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ 'ರಾಷ್ಟ್ರಕವಿ ಕುವೆಂಪು' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಸುಬ್ಬರಾಯನಕೆರೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರ ಉದ್ಯಾನವನದಲ್ಲಿ ಮೈಸೂರು ಕನ್ನಡ ವೇದಿಕೆ ಆಯೋಜಿಸಿದ್ದ ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿದ ಬಳಿಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ನಾಡು ಕಂಡ ಮಹಾನ್ ಚೇತನ ಕುವೆಂಪು. ಜಾತಿ-ಮತ ಸಂಘರ್ಷ ಬಿಟ್ಟು ವಿಶ್ವಮಾನವ ಕಲ್ಪನೆ ಹಾಗೂ ಮಾನವತ್ವದೆಡೆಗೆ ಸಮಾಜ ಸಾಗಬೇಕು ಎಂಬ ಪರಿಕಲ್ಪನೆಯಲ್ಲಿ ಸಂದೇಶ ಸಾರಿದರು. ಎಲ್ಲರೂ ಸಮಾನರಾಗಿ ಬದುಕಬೇಕು. ಒಳ್ಳೆಯ ಆಲೋಚನೆ ಮೈಗೂಡಿಸಿಕೊಳ್ಳಬೇಕು. ಪ್ರತಿಯೊಬ್ಬರು ಒಳ್ಳೆಯದು, ಕೆಟ್ಟದ್ದನ್ನು ತಮ್ಮ ಆತ್ಮದೊಳಗೆ ವಿಚಾರ ಮಾಡಬೇಕು. ಮೌಢ್ಯವನ್ನು ಕಿತ್ತೊಗೆದು ವೈಚಾರಿಕ ಪ್ರಜ್ಞೆಯನ್ನು ಜಗತ್ತಿಗೆ ಸಾರಬೇಕೆಂದು ಸಂದೇಶ ಸಾರಿದ್ದರು ಎಂದು ಸ್ಮರಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ರಾಷ್ಟ್ರಕವಿ ಕುವೆಂಪು ಅವರ ಬರವಣಿಗೆ ಮತ್ತು ಸಾಹಿತ್ಯವನ್ನು ವಿಶ್ವಮಟ್ಟದಲ್ಲಿ ವಿಶ್ವ ದರ್ಜೆಯ ಭಾಷೆಗಳಿಗೆ ತರ್ಜುಮೆ ಮಾಡಿದ್ದರೆ ಕನ್ನಡಕ್ಕೆ ಮತ್ತಷ್ಟು ನೋಬೆಲ್ ಪ್ರಶಸ್ತಿ ಲಭಿಸುತ್ತಿತ್ತು ಎಂದರು.

ಪ್ರಶಸ್ತಿ ವಿಜೇತರು: ಸಮಾಜ ಸೇವಕ ರಘುರಾಮ ವಾಜಪೇಯಿ, ಪತ್ರಕರ್ತರಾದ ಶೇಖರ್ ಗೋಪಿನಾಥಂ, ಆನಂದ್, ಜ್ಯೋತಿಷಿ ಹನುಮಂತಪ್ಪ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಸಾಲುಂಡಿ ಎಸ್ ದೊರೆಸ್ವಾಮಿ, ಸಮಾಜ ಸೇವಕ ಗಂಗಯ್ಯ, ಉದ್ಯಮಿ ಎಸ್.ಆರ್.ಶಿವಕುಮಾರ್, ಸಮಾಜ ಸೇವಕ ಕೆ.ನಾಗೇಶ್ ನಾಯಕ, ಸ್ವಾಮಿನಾಥನ್, ಸಮಾಜ ಸೇವಕ ಸುರೇಶ್ ಅವರಿಗೆ ರಾಷ್ಟ್ರಕವಿ ಕುವೆಂಪು ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ದಂತವೈದ್ಯ ಡಾ.ಲೋಕೇಶ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮೈಸೂರು ಕನ್ನಡ ವೇದಿಕೆಯ ಅಧ್ಯಕ್ಷ ಬಾಲಕೃಷ್ಣ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಮನೋಹರ್ ಪ್ರಾಸ್ತಾವಿಕವಾಗಿ ಮಾತನಾಡಿದರೆ, ನಾಲಾಬೀದಿ ರವಿ ನಿರೂಪಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ಪದಾಧಿಕಾರಿಗಳಾದ ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೇಸ್ ಬಾಬು, ಗೋಪಿ, ಕಾವೇರಮ್ಮ, ಮಾಲಿನಿ, ಭವಾನಿ, ಪುಷ್ಪಲತಾ, ಹರೀಶ್‌ಕುಮಾರ್, ಎಲ್‌ಐಸಿ ಸಿದ್ದಪ್ಪ, ಗೋವಿಂದರಾಜು, ಸ್ವಾಮಿ, ಸುನೀಲ್, ಸ್ವಾಮಿ ಗೈಡ್, ಅರವಿಂದ್, ಮಹದೇವಸ್ವಾಮಿ, ಚಿನ್ನಪ್ಪ, ಶಿವಗೌಡ, ಬೀಡಾ ಬಾಬು ಸೇರಿದಂತೆ ಮುಂತಾದವರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ

ಸೋಮವಾರ 12 ಜನವರಿ 2026

ಮದ್ದೂರು ನಗರಸಭೆಯಿಂದ

ಗೆಜ್ಜಲಗೆರೆ ಗ್ರಾಪಂ ಕೈ ಬಿಡದಿದ್ದರೆ ಸದನದಲ್ಲಿ ಹೋರಾಟ

ರಾಜ್ಯ ಸರ್ಕಾರಕ್ಕೆ ವಿಪಕ್ಷ ನಾಯಕ ಆರ್.ಅಶೋಕ್ ಎಚ್ಚರಿಕೆ



ಅನಿರ್ದಿಷ್ಟಾವಧಿ ಧರಣಿಯಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿದರು.

ಮದ್ದೂರು, ಜ.11– ಮದ್ದೂರು ನಗರಸಭೆಯಿಂದ ಗೆಜ್ಜಲಗೆರೆ ಗ್ರಾಪಂ ಅನ್ನು ಕೈ ಬಿಡದಿದ್ದರೆ ಸದನದಲ್ಲಿ ಈ ವಿಚಾರವಾಗಿ ಹೋರಾಟ ಮಾಡುವುದಾಗಿ ವಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು.

ತಾಲೂಕಿನ ಗೆಜ್ಜಲಗೆರೆ ಗ್ರಾಪಂ ಅನ್ನು ಮದ್ದೂರು ನಗರಸಭೆಗೆ ಗೆಜ್ಜಲಗೆರೆ ಗ್ರಾಪಂ ಅನ್ನು ಸೇರ್ಪಡೆಗೊಳಿಸಿರುವುದನ್ನು ಖಂಡಿಸಿ ಕಳೆದ 21 ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿಯಲ್ಲಿ ಭಾನುವಾರ ಭಾಗವಹಿಸಿ ಅವರು ಮಾತನಾಡಿದರು.

ಗ್ರಾಮ ಸ್ವರಾಜ್ಯ ಎಂಬ ಗಾಂಧೀಜಿ ಅವರ ಕನಸಿಗೆ ಇಲ್ಲಿನ ಶಾಸಕರು ಏನು ಬೆಲೆ ಕೊಟ್ಟಿದ್ದಾರೆ. ಸೇರ್ಪಡೆಗೂ ಮೊದಲೇ ಗ್ರಾಮಸ್ಥರನ್ನು ಹಾಗೂ ಗ್ರಾಮದ ಮುಖಂಡರ ಒಪ್ಪಿಗೆ, ಅಭಿಪ್ರಾಯ ಪಡೆಯದೇ ಗ್ರಾಮಕ್ಕೆ ಇಲ್ಲಿನ ಶಾಸಕರು ದ್ರೋಹ ಮಾಡಿದ್ದಾರೆ ಎಂದು ಆರೋಪಿಸಿದ ಅವರು ಇಲ್ಲಿನ ಗ್ರಾಪಂಗೆ ಇಲ್ಲಿರುವ ಕೈಗಾರಿಕಾ ಪ್ರದೇಶದಿಂದ ಬರುತ್ತಿರುವ ಆದಾಯ ಗಮನಿಸಿ ಮದ್ದೂರಿನಿಂದ 6 ಕಿಮೀ ದೂರದ ಗ್ರಾಮವನ್ನು ನಗರಸಭೆಗೆ ಸೇರಿಸುವ ಏಕಪಕ್ಷೀಯ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಗುಡುಗಿದರು.

ನಗರಸಭೆಗೆ ಗೆಜ್ಜಲಗೆರೆ ಗ್ರಾಮ ಸೇರ್ಪಡೆಯಾದರೆ ಕಂದಾಯ 10 ಪಟ್ಟು ಹೆಚ್ಚಾಗುವುದರ ಜೊತೆಗೆ ಕಸ ವಿಲೇವಾರಿ, ಕುಡಿಯುವ ನೀರು ಸೇರಿದಂತೆ ಎಲ್ಲದಕ್ಕೂ ತೆರಿಗೆ ಹೆಚ್ಚಾಗುತ್ತದೆ. ಎಲ್ಲವನ್ನೂ ನಗರ ಮಾಡಿದರೆ ಅನ್ನ ಬೆಳೆಯುವುದು ಎಲ್ಲಿಂದ ಎಂದ ಅವರು, ಗ್ರಾಪಂಗೆ ಬರುವ ಸರ್ಕಾರದ ಎಲ್ಲಾ ಯೋಜನೆಗಳು ಬರುವುದಿಲ್ಲ ಎಂದರು.

ಸಿಎಂ ಸಿದ್ದರಾಮಯ್ಯ ಅವರು ತಮ್ಮ ಅಧಿಕಾರಾವಧಿಯಲ್ಲಿ ಈ ಹಿಂದೆ ಸಿಎಂ ಆಗಿದ್ದವರನ್ನು ಸೇರಿಸಿದರೆ ಆಗುವಷ್ಟು ಸರ್ಕಾರದ ಮೇಲೆ ಸಾಲ ಮಾಡಿದ್ದಾರೆ. ಹಿಂದೆ ಗುಂಡೂರಾವ್ ಸರ್ಕಾರವನ್ನೇ ಬೀಳಿಸಿದ ಗೆಜ್ಜಲಗೆರೆಯನ್ನು ನಗರಸಭೆಗೆ ಸೇರಿಸಿರುವ ಕ್ರಮ ಸರಿ ಇಲ್ಲ ಎಂದರು.

ಇಲ್ಲಿನ ಶಾಸಕರು ಟ್ರಂಪ್ ಆಗಲಿಕ್ಕೆ ಹೊರಟಿದ್ದಾರೆ. ಈ ಬಗ್ಗೆ ಸರ್ಕಾರದಿಂದ ಅಧಿಸೂಚನೆ ಹೊರಡಿಸಿದ್ದರೂ, ಕ್ಯಾಬಿನೆಟ್ ಸಭೆಯಲ್ಲಿ ಅದನ್ನೇ ರದ್ದುಪಡಿಸಲು ನಿಮ್ಮಿಂದ ಸಾಧ್ಯವೆಂದ ಅವರು ಒಂದು ವೇಳೆ ನೀವು ಇದನ್ನು ರದ್ದುಪಡಿಸದೆ ಮೊಂಡಾಟ ಮಾಡಿದರೆ ಮುಂದೆ ನಮ್ಮ ಸರ್ಕಾರ ಬಂದ ಮೇಲೆ ಮತ್ತೆ ಗ್ರಾಪಂ ಮಾಡುತ್ತೇವೆ ಎಂದರು.

ಈ ಗ್ರಾಮ ಕಟ್ಟಡವನ್ನು ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ ಉದ್ಘಾಟಿಸಿದ್ದೆ. ಈಗ ಇದೇ ಪಂಚಾಯಿತಿ ಉಳಿವಿಗಾಗಿ ಹೋರಾಟ ಮಾಡಲು ಬಂದಿದ್ದೇನೆ ಎಂದರು.

ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ ಮಾತನಾಡಿ, ಈ ಹಿಂದೆ ಗುಂಡೂರಾವ್ ಅವರು ಸಿಎಂ ಆಗಿದ್ದ ವೇಳೆ ಗೆಜ್ಜಲಗೆರೆಯಲ್ಲಿ ರೈತರು ಹೋರಾಟ ನಡೆಸುತ್ತಿದ್ದ ವೇಳೆ ಗೋಲಿಬಾರ್ ನಡೆದು ಇಬ್ಬರು ರೈತರು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಗುಂಡೂರಾವ್ ಅವರನ್ನೇ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವಂತೆ ಮಾಡಿದ ಇತಿಹಾಸ ಗೆಜ್ಜಲಗೆರೆಗಿದೆ ಎಂದರು.

ನಂತರ ನೆರೆಯ ಗೊರವನಹಳ್ಳಿ ಗ್ರಾಪಂ ಎದುರು ನಡೆಯುತ್ತಿದ್ದ ಪ್ರತಿಭಟನಾ ಸ್ಥಳಕ್ಕೂ ತೆರಳಿ ಅಲ್ಲಿಯೂ ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಈ ವೇಳೆ ಗ್ರಾಪಂನ ಗೇಟ್‌ಗೆ ಬೀಗ ಹಾಕಿದ್ದರಿಂದ ಪ್ರತಿಭಟನಾಕಾರರು ಆಕ್ರೋಶಗೊಂಡು ಬೀಗವನ್ನು ಕಲ್ಲಿನಿಂದ ಒಡೆದ ಘಟನೆ ನಡೆಯಿತು.

ರೈತಪರ ಹೋರಾಟಗಾರ್ತಿ ಸುನಂದಾ ಜಯರಾಮು, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಬಿಜೆಪಿ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಮಾದನಾಯಕನಹಳ್ಳಿ ರಾಜಣ್ಣ, ಅಶೋಕ್ ಜಯರಾಂ ಹಲವರಿದ್ದರು.

> ಚುನಾವಣೆ ವೇಳೆ ಮತ ಕೇಳಲು ಬಂದ ವೇಳೆ ಇದ್ದ ವಿನಯತೆ ಇಲ್ಲಿನ ಶಾಸಕರಿಗೆ ಈಗ ಏಕೆ ಇಲ್ಲ. ಶಾಸಕರು ಗೆಜ್ಜಲ ಗೆರೆಯಲ್ಲಿ ನಡೆಯುತ್ತಿರುವ ಹೋರಾಟದ ಬಗ್ಗೆ ಯಾರಿಗೂ ಜಗ್ಗಲ್ಲ ಬಗ್ಗಲ್ಲ ಎಂದು ಹೇಳಿಕೆ ನೀಡುವುದು ಸರಿಯಲ್ಲ. ಗೆಜ್ಜಲಗೆರೆ ಗ್ರಾಮದವರ ಒಪ್ಪಿಗೆ ಇಲ್ಲದೇ ಏಕೆ ಬಲವಂತದಿಂದ ನಗರಸಭೆಗೆ ಸೇರಿಸುತ್ತೀರಿ.
>
> – ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್ ವಿಪಕ್ಷ ನಾಯಕ.

> ಈ ಹಿಂದೆ ನಾನು ಶಾಸಕನಾಗಿದ್ದಾಗ ಮದ್ದೂರು ಪುರಸಭೆಯನ್ನು ನಗರಸಭೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆ. ಆದರೆ ಸ್ಥಳೀಯ ಪುರಸಭಾ ಸದಸ್ಯರು ನಗರಸಭೆಗೆ ವಿರೋಧಿಸಿದ ಹಿನ್ನೆಲೆಯಲ್ಲಿ ಇದರಿಂದ ಗ್ರಾಮವಾಸಿಗಳಿಗೆ ಹಲವು ರೀತಿ ತೊಂದರೆಯಾಗುತ್ತದೆ ಎಂದು ನನಗೂ ಅರಿವಾಗಿ ನಿರ್ಧಾರದಿಂದ ಹಿಂದೆ ಸರಿದೆ.
>
> –ಡಿ.ಸಿ.ತಮ್ಮಣ್ಣ, ಮಾಜಿ ಶಾಸಕ.

ಕಾಲುವೆ, ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಕೆ.ಆರ್.ಪೇಟೆ, ಜ.11– ತಾಲೂಕಿನ ಬಿ.ಬಿ.ಕಾವಲು ಗ್ರಾಮದ ರೈತರಿಗೆ ಅನುಕೂಲವಾಗುವಂತೆ ಸಣ್ಣ ನೀರಾವರಿ ಇಲಾಖೆ ಅನುದಾನದಡಿ 1.50 ಕೋಟಿ ರೂ ವೆಚ್ಚದಲ್ಲಿ ಹೇಮಾವತಿ ನದಿಯಿಂದ ನೀರೆತ್ತುವ ಬಿ.ಬಿ.ಕಾವಲು ಏತ ನೀರಾವರಿ ಯೋಜನೆ ವ್ಯಾಪ್ತಿಯ ಕಾಲುವೆ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು, ಇದು ರೈತರ ಜಮೀನಿಗೆ ಏತ ನೀರಾವರಿ ಮೂಲಕ ನೀರು ಹರಿಸುವ ಕಾಮಗಾರಿಯಾಗಿರುವ ಕಾರಣ ಗುತ್ತಿಗೆದಾರರು ಮತ್ತು ಇಲಾಖೆ ಅಧಿಕಾರಿಗಳು ಗುಣಮಟ್ಟ ಕಾಪಾಡಿಕೊಳ್ಳಬೇಕು. ಈ ಮೂಲಕ ಸಾಕಷ್ಟು ಕಾಲ ಕಾಮಗಾರಿ ರೈತರ ಉಪಯೋಗಕ್ಕೆ ಬರುವಂತಾಗಬೇಕು. ಹಿಂದೆ ಬಿ.ಬಿ.ಕಾವಲು ಏತ ನೀರಾವರಿ ಯೋಜನೆ ಹಳೇ ಯೋಜನೆಯಾಗಿದ್ದು, ಇದಕ್ಕೆ 4 ರಿಂದ 5 ಕೋಟಿ ಅನುದಾನ ಬೇಕಾಗಿದೆ. ಆದರೆ ಈಗ ಲಭ್ಯವಿರುವ ಒಂದೂವರೆ ಕೋಟಿ ಅನುದಾನದಲ್ಲಿ ಕಾಮಗಾರಿ ಪ್ರಾರಂಭಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಸಣ್ಣ ನೀರಾವರಿ ಸಚಿವರೊಂದಿಗೆ ಚರ್ಚಿಸಿ ಇನ್ನುಳಿದ ಅನುದಾನ ತಂದು ಕಾಮಗಾರಿ ಪೂರ್ಣಗೊಳಿಸಿ ಯೋಜನೆ ವ್ಯಾಪ್ತಿಯ ಕೊನೆ ಭಾಗದ ರೈತನ ಜಮೀನಿನವರೆಗೆ ನೀರು ತಲುಪಿಸಿ ರೈತ ಬಾಂಧವರಿಗೆ ಅನುಕೂಲವಾಗುವಂತೆ ನೋಡಿಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ಅಭಿವೃದ್ಧಿ ಕೆಲಸಗಳಿಗೆ ಅನುದಾನ ನಿರೀಕ್ಷಿಸಲು ಸಾಧ್ಯವಿಲ್ಲ. ಸರ್ಕಾರ ನೀಡುವ ಅತ್ಯಲ್ಪ ಅನುದಾನದ ಜೊತೆಗೆ ನಾನು ಕಾಡಿಬೇಡಿ ವಿವಿಧ ಇಲಾಖೆಗಳಿಂದ ಅಲ್ಪಸ್ವಲ್ಪ ಅನುದಾನ ತಂದು ಅಭಿವೃದ್ಧಿಗೆ ಪ್ರಯತ್ನಿಸುತ್ತಿದ್ದೇನೆ. ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರ ಬರುವುದು ಖಚಿತ. ಇದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ. ಮತ್ತೊಮ್ಮೆ ನನಗೆ ಅವಕಾಶ ಸಿಕ್ಕರೆ ನನ್ನ ಕ್ಷೇತ್ರದ ಅಭಿವೃದ್ಧಿಗೆ ಏನು ಯೋಜನೆಗಳನ್ನು ರೂಪಿಸಿಕೊಂಡಿದ್ದೇನೋ ಅದನ್ನು ಪೂರ್ಣಗೊಳಿಸಿ ನಿಮ್ಮ ಋಣ ತೀರಿಸುತ್ತೇನೆ ಎಂದರು.

ಈ ವೇಳೆ ಟಿಎಪಿಸಿಎಂಎಸ್ ಉಪಾಧ್ಯಕ್ಷ ಲತಾಮಣಿ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹದೇವೇಗೌಡ, ಮುಖಂಡರಾದ ಕಾಂತರಾಜು, ಡೊಂಕಯ್ಯ, ಡಿ.ನಂಜಯ್ಯ, ನಂಜುಂಡ, ರಾಮಚಂದ್ರು, ಶೀಳನೆರೆ ಹೋಬಳಿ ಜೆಡಿಎಸ್ ಅಧ್ಯಕ್ಷ ಸ್ವಾಮಿಗೌಡ, ಗ್ರಾಪಂ ಸದಸ್ಯರಾದ ಮೋಹನ್, ಶಿವಲಿಂಗ, ಜೆಡಿಎಸ್ ಮುಖಂಡರಾದ ಕಾಯಿಮಂಚೇಗೌಡ, ಸಂದೇಶ್, ದಿಲೀಪ್, ದಯಾನಂದ ಕಮಿಟಿ ಸದಸ್ಯ ಕಾಂತರಾಜು, ಸಣ್ಣ ನೀರಾವರಿ ಇಲಾಖೆ ಎಇಇ ನಿರ್ಮಲೇಶ್, ಶಾಸಕರ ಆಪ್ತ ಸಹಾಯಕ ಧ್ರುವ, ಕುಮಾರಸ್ವಾಮಿ ಸೇರಿದಂತೆ ಹಲರಿದ್ದರು.

ಚೆಲುವನಿಗೆ ಪುಷ್ಪ ಕೈಂಕರ್ಯ ಸೇವೆ



ಮೇಲುಕೋಟೆ ಶ್ರೀಚೆಲುವನಾರಾಯಣಸ್ವಾಮಿಗೆ ಭಾನುವಾರ ಕೊಠಾರೋತ್ಸವದ ಏಳನೇ ಉತ್ಸವದ ಅಂಗವಾಗಿ ತಿರುವೀದಿಯಲ್ಲಿ ಪುಷ್ಪ ಕೈಂಕರ್ಯ ಸೇವೆ ನೆರವೇರಿತು.

ಶಿಕ್ಷಕರಿಗೆ ಸಮಯ ಪಾಲನೆ, ವಿಷಯ ಸಂಗ್ರಹಣೆ ಮುಖ್ಯ



ನಿವೃತ್ತ ಮುಖ್ಯಶಿಕ್ಷಕ ರಮೇಶ್ ಎಂ.ಬೀರಶೆಟ್ಟಹಳ್ಳಿ ಅವರನ್ನು ಹಿತೈಷಿಗಳು ಅಭಿನಂದಿಸಿದರು.

ಪಾಂಡವಪುರ, ಜ.11– ಶಿಕ್ಷರಿಗೆ ಸಮಯ ಪಾಲನೆ, ಅಕ್ಷರ ಭೋದನೆ, ವಿಷಯ ಸಂಗ್ರಹಣೆ ಮುಖ್ಯ. ಇಂತಹ ಗುಣ ಹೊಂದಿರುವ ಶಿಕ್ಷಕರು ಸಮಾಜ ಹಾಗೂ ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಉತ್ತಮ ಶಿಕ್ಷರಾಗುತ್ತಾರೆ ಎಂದು ಪ್ರೊ.ಬಿ.ನಾರಾಯಣಗೌಡ ತಿಳಿಸಿದರು.

ಪಟ್ಟಣದ ಕಸಾಪ ಭವನದಲ್ಲಿ ರಮೇಶ್ ಹಿತೈಷಿ ಬಳಗದಿಂದ ನಡೆದ ವಯೋ ನಿವೃತ್ತಿ ಹೊಂದಿದ ಮುಖ್ಯಶಿಕ್ಷಕ ರಮೇಶ್ ಎಂ. ಬೀರಶೆಟ್ಟಹಳ್ಳಿ ಅವರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಠಿಣವಾದ ಕಲ್ಲನ್ನು ಕಡಿದು ಸುಂದರ ಶಿಲೆಯನ್ನಾಗಿ ಮಾಡಬಹುದು. ಆದರೆ ಚಂಚಲಚಿತ್ತನಾದ ವಿದ್ಯಾರ್ಥಿಗಳನ್ನು ತಿದ್ದಿ ಸಮಾಜದ ಸತ್ಪ್ರಜೆಗಳನ್ನಾಗಿ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಅಂತಹ ಕೆಲಸ ಮಾಡುವ ಶಿಕ್ಷಕರು ಪ್ರತಿಭಾವಂತ, ಪ್ರಾಮಾಣಿಕನಾಗಿ ವಿದ್ಯಾರ್ಥಿಗಳ ಏಳಿಗೆಗೆ ದುಡಿಯಬೇಕಾಗುತ್ತದೆ ಎಂದರು.

ಮುಖ್ಯಶಿಕ್ಷಕ ಬೀರಶೆಟ್ಟಹಳ್ಳಿ ರಮೇಶ್ ಅವರು ಅತ್ಯುತ್ತಮ ಸಾತ್ವಿಕ ಗುಣಗಳನ್ನು ರೂಢಿಸಿಕೊಂಡಿದ್ದರಿಂದ ಒಳ್ಳೆಯ ಅಧ್ಯಾಪಕನಾಗಿ ಕರ್ತವ್ಯ ನಿರ್ವಹಿಸಲು ಸಾಧ್ಯವಾಗಿದೆ. ಶಿಕ್ಷಣ ವೃತ್ತಿ ಜೊತೆಗೆ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಅವರಿಗೆ ಸಾಧ್ಯವಾಗಿದೆ. ಪಟ್ಟಣದಲ್ಲಿ ನಿರ್ಮಾಣಗೊಂಡಿರುವ ಕನ್ನಡ ಸಾಹಿತ್ಯ ಪರಿಷತ್ ಭವನ ನಿರ್ಮಿಸುವಲ್ಲಿ ಅವರ ಪಾತ್ರ ದೊಡ್ಡದು. ಹಾಗೆ ಒಳ್ಳೆಯ ವಾಗ್ಮಿಯಾಗಿದ್ದಾರೆ. ಜೊತೆಗೆ ವಿನಯತೆ, ದಕ್ಷತೆ ಮೈಗೂಡಿಸಿಕೊಂಡು ಪ್ರೌಢಶಾಲೆ ಮುಖ್ಯಶಿಕ್ಷಕನಾಗಿ ಒಳ್ಳೆಯ ಹೆಸರು ಪಡೆದಿದ್ದಾರೆ. ಅವರ ನಿವೃತ್ತಿ ಜೀವನ ಯಶಸ್ವಿಯಾಗಿರಲೆಂದು ಹಾರೈಸಿದರು.

ಅಭಿನಂದನೆ ಸ್ವೀಕರಿಸಿ ರಮೇಶ್ ಎಂ.ಬೀರಶೆಟ್ಟಹಳ್ಳಿ ಮಾತನಾಡಿ, ಶಿಕ್ಷಕರಾಗಿ ದುಡಿದು ಒಳ್ಳೆಯ ಹೆಸರು ಗಳಿಸಿದೆ. ಸಮಾಜ ಮತ್ತು ಸ್ನೇಹಿತರು ಗೌರವಿಸುತ್ತಾರೆ ಎನ್ನುವುದಕ್ಕೆ ನಾನೇ ಉದಾಹರಣೆ. ಸ್ನೇಹಿತರು, ಬಂಧುಗಳು, ವೃತ್ತಿ ಬಾಂಧವರು ಇಷ್ಟೊಂದು ಪ್ರೀತಿ ಪೂರ್ವಕವಾಗಿ ನನ್ನನ್ನು ಅಭಿನಂದಿಸಿರುವುದಕ್ಕೆ ಎಲ್ಲರಿಗೂ ಕೃತಜ್ಞನಾಗಿರುತ್ತೇನೆ. ನಿಮ್ಮೆಲ್ಲರ ಪ್ರೀತಿ ವಿಶ್ವಾಸವನ್ನು ನಾನೆಂದು ಮರೆಯುವುದಿಲ್ಲ. ವೃತ್ತಿಯಲ್ಲಿ ಕೆಲಸ ಮಾಡಲು ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತೇನೆ ಎಂದರು.

ಇದೇ ವೇಳೆ ಮುಖ್ಯಶಿಕ್ಷಕರಾಗಿ ನಿವೃತ್ತರಾದ ರಮೇಶ್ ಎಂ.ಬೀರಶೆಟ್ಟಹಳ್ಳಿ ಅವರನ್ನು ಹಿತೈಷಿಗಳು, ಸ್ನೇಹಿತರು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಟಿ.ಶಿವಣ್ಣಗೌಡ, ಶಾರದ ವಿಲಾಸ ಕಾಲೇಜಿನ ವಿಶ್ರಾಂತ ಪ್ರಾಂಶುಪಾಲ ಉಮೇಶ್, ಕಸಾಪ ಅಧ್ಯಕ್ಷ ಮೇನಾಗರ ಪ್ರಕಾಶ್, ರಮೇಶ್ ಹಿತೈಶಿ ಬಳಗದ ಸದಸ್ಯರಾದ ಶಿಕ್ಷಕ ನಂಜುಂಡಸ್ವಾಮಿ, ಸೋಲಾರ್ ಮಂಜುನಾಥ್, ಕುಮಾರ್ ಬೀರಶೆಟ್ಟಹಳ್ಳಿ, ಮಲ್ಲಿಕಾರ್ಜುನ, ದೀಪಕ್ ಹಿರೇಮರಳಿ ಸೇರಿದಂತೆ ಇತರರಿದ್ದರು.

ಕ್ರಿಕೆಟ್ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ



ಶ್ರೀರಂಗಪಟ್ಟಣದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಎಸ್.ಜಿ.ಮಂಜುನಾಥ್ ಇತ್ತೀಚೆಗೆ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಅವರ ಸವಿನೆನಪಿಗಾಗಿ ಆಯೋಜಿಸಿದ್ದ ಕ್ರಿಕೆಟ್ ಪಂದ್ಯಾವಳಿಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಈ ವೇಳೆ ಭೂ ದಾಖಲೆಗಳ ಸಹಾಯಕ ನಿರ್ದೇಶಕ ಮಹಮ್ಮದ್ ಹುಸೇನ್, ಅಧೀಕ್ಷಕ ಮರಿಸ್ವಾಮಿ, ಮೇಲ್ವಿಚಾರಕರಾದ ಸುರೇಶ್, ಯೋಗರಾಜ್, ಅರವಿಂದ್ ಇನ್ನಿತರರಿದ್ದರು.

ಒಂದನೇ ಪುಟದಿಂದ

ಸಿಎಂ ಕುರ್ಚಿಗೆ ಪೈಪೋಟಿ ಇಲ್ಲ

ಒಂದು ನಿರ್ದಿಷ್ಟ ಕಾರಣಕ್ಕಾಗಿ ಪಾದಯಾತ್ರೆಯನ್ನು ಪ್ರಾರಂಭಿಸಿದ್ದೇವೆ. ಆಗಿನ ಲೋಕಾಯುಕ್ತ ಸಂತೋಷ್ ಹೆಗ್ಡೆ ಅವರು ಬಳ್ಳಾರಿಯನ್ನು ರಿಪಬ್ಲಿಕ್‌ವಾಗಿ ಪರಿವರ್ತಿಸಲಾಗಿದೆ ಮತ್ತು ಅಕ್ರಮ ಗಣಿ ಗಾರಿಕೆ ನಡೆಸಲಾಗುತ್ತಿದೆ ಎಂದು ವರದಿ ನೀಡಿದ್ದರು. ನಾನು (ವಿರೋಧ ಪಕ್ಷದ ನಾಯಕನಾಗಿ) ವಿಧಾನಸಭೆಯಲ್ಲಿ ಚರ್ಚಿಸಿ ದಾಗ, ರೆಡ್ಡಿ ಸಹೋದರರರು (ಆಗ ಸಚಿವ ಜಿ ಜನಾರ್ದನ ರೆಡ್ಡಿ ಮತ್ತು ಸಹೋ ದರರು) ಮತ್ತು ಯಡಿಯೂರಪ್ಪ (ಆಗ ಸಿಎಂ) ತೀವ್ರವಾಗಿ ಆಕ್ಷೇಪಿಸಿದರು. ಆದ್ದರಿಂದ ನಾನು (ಬಳ್ಳಾರಿಗೆ) ಪಾದಯಾತ್ರೆ ನಡೆಸಿದ್ದೆ ಎಂದು ಅವರು ಹೇಳಿದರು.

ಅಕ್ರಮ ಗಣಿಗಾರಿಕೆ ವಿರುದ್ಧ 2010 ರಲ್ಲಿ ಬೆಂಗಳೂರಿನಿಂದ ಬಳ್ಳಾರಿಯವರೆಗೆ ಕಾಂಗ್ರೆಸ್ ನಡೆಸಿದ 320 ಕಿ.ಮೀ ಪಾದ ಯಾತ್ರೆ ಅದಾಗಿತ್ತು ಪಕ್ಷದ ಅನೇಕರ ಪ್ರಕಾರ, 2013ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಸ್ಪಷ್ಟ ಬಹುಮತದೊಂದಿಗೆ ಗೆಲುವಿಗೆ ಅದು ಅಡಿಪಾಯ ಹಾಕಿತು.

ಬ್ಯಾನರ್ ತೆಗೆಯುವುದು ಒಂದು ಪ್ರಚೋದನೆಯಾಗಿತ್ತು. ಬ್ಯಾನರ್ ತೆಗೆಯದಿದ್ದರೆ, ಪ್ರಚೋದನೆ ಎಲ್ಲಿತ್ತು? ಮಹರ್ಷಿ ವಾಲ್ಮೀಕಿ ಪ್ರತಿಮೆ ಅನಾವರಣಕ್ಕೆ ಸಂಬಂಧಿಸಿದ ಬ್ಯಾನರ್ ಇದಾಗಿದ್ದು, ಅದನ್ನು ತೆಗೆದುಹಾಕುವ ಅಗತ್ಯವೇ ನಿತ್ತು?. ಬಿಜೆಪಿ ಈ ವಿಷಯವನ್ನು ರಾಜಕೀಯಗೊಳಿಸಲು ಅವಕಾಶಕ್ಕಾಗಿ ಕಾಯುತ್ತಿದೆ. ವಿಶೇಷವಾಗಿ ಜನಾರ್ದನ ರೆಡ್ಡಿ, ಅವರ ಸಹೋದರರು ಮತ್ತು ಶ್ರೀರಾಮುಲು ಅವರು (ರೆಡ್ಡಿ ಅವರ ಆಪ್ತ ಮತ್ತು ಮಾಜಿ ಸಚಿವರು) ಬಳ್ಳಾರಿಯಲ್ಲಿ ಹಿಡಿತ ಕಳೆದುಕೊಂಡಿದ್ದಾರೆ, ರೆಡ್ಡಿ ಅವರ ಪತ್ನಿ ಬಳ್ಳಾರಿಯಲ್ಲಿ ಸೋತಿದ್ದಾರೆ. ಆದ್ದರಿಂದ ಅವರು ಅಸೂಯೆಯಿಂದ ಇದನ್ನು ಮಾಡುತ್ತಿದ್ದಾರೆ ಎಂದು ಹೇಳಿದರು.

ವರಿಷ್ಠರ ಮೇಲೆ ಡಿಕೆಶಿಗೆ ಅತೀವ ವಿಶ್ವಾಸ

ನೀವು ನಿಮ್ಮ ಕರ್ತವ್ಯ ಮಾಡಿ. ಯಾರು ಯಾವಾಗ ಬೇಕಾದ್ದೂ ಏನಾದ್ದೂ ಆಗಬಹುದು ಎಂದರು.

ಪ್ರಾರ್ಥನೆ ಫಲಿಸುತ್ತದೆ: ರಾಜಕೀಯ ಮಾಡಿ ನನ್ನನ್ನು ಜೈಲಿಗೆ ಹಾಕಿದಾಗ, ನನಗಾಗಿ ಪ್ರಾರ್ಥನೆ ಮಾಡಿದಿರಿ, ಹರಕೆ ಕಟ್ಟಿಕೊಂಡಿದ್ದೀರಿ. ಈಗಲೂ ಅದನ್ನೇ ಮಾಡುತ್ತಿದ್ದೀರಿ ಎಂಬ ಅರಿವು ನನಗಿದೆ. ಪಕ್ಷಾತೀತವಾಗಿ, ಜಾತ್ಯಾತೀತವಾಗಿ ಜನ ನನಗೆ ಒಳ್ಳೆಯದನ್ನೇ ಬಯಸುತ್ತಿದ್ದಾರೆ. ಪ್ರಯತ್ನ ವಿಫಲವಾದರೂ ಪ್ರಾರ್ಥನೆ ವಿಫಲ ಆಗುವುದಿಲ್ಲ. ನೀವು ನಿಮ್ಮ ಪಾಡಿಗೆ ಶ್ರಮಪಡಿ. ಶ್ರಮಕ್ಕೆ ಪ್ರತಿಫಲ ಸಿಕ್ಕೇ ಸಿಗುತ್ತೆ ಟೀಕೆಗಳು ಸಾಯುತ್ತವೆ, ನೀವು ಮಾಡುವ ಕೆಲಸಗಳು ಮಾತ್ರ ಶಾಶ್ವತವಾಗಿ ಉಳಿಯುತ್ತವೆ ಎಂದು ಹೇಳಿದರು.

ನಮ್ಮವರೇ ಚಾಕು ಹಾಕುತ್ತಿದ್ದಾರೆ: ನನ್ನ ಬಗ್ಗೆ ಬೇರೆಯವರಿಗಿಂತ ನಮ್ಮ ಸಮುದಾಯದ ಕೆಲವರು, ಅಸೂಯೆಯಿಂದ ಟೀಕೆ ಮಾಡುತ್ತಿದ್ದಾರೆ. ಹಿಂದೆ–ಮುಂದಿನಿಂದ ಚಾಕು ಹಾಕುತ್ತಿದ್ದಾರೆ. ರಾಜಕೀಯದಲ್ಲಿ ಇವೆಲ್ಲವೂ ಸಹಜ. ಹಾಗಾಗಿ ಇದಕ್ಕೆ ಹೆಚ್ಚು ತಲೆ ಕೆಡಿಸಿಕೊಳ್ಳಬಾರದು. ನಾವು ಪ್ರಾಮಾಣಿಕವಾಗಿ ಇರಬೇಕಷ್ಟೇ. ಕುಮಾರಸ್ವಾಮಿ ಸಿಎಂ ಆಗಿದ್ದಾಗ ನಾನು ಎಷ್ಟು ಪ್ರಾಮಾಣಿಕವಾಗಿದ್ದೆ ಎಂಬುದು ನನ್ನ ಆತ್ಮಸಾಕ್ಷಿಗೆ ಗೊತ್ತಿದೆ. ಆದರೆ ನಾನು ಬೆನ್ನಿಗೆ ಚೂರಿ ಹಾಕಿದೆ ಎಂದು ಕುಮಾರಸ್ವಾಮಿ ನನ್ನ ವಿರುದ್ಧ ಆರೋಪ ಮಾಡಿದರು. ನನಗೆ ಯಾರ ಪ್ರಮಾಣ ಪತ್ರವೂ ಬೇಡ. ನನ್ನ ಆತ್ಮಸಾಕ್ಷಿಯನ್ನು ನಾನು ಮೆಚ್ಚಿಸಿದರೆ ಸಾಕು. ಎಲ್ಲರೂ ನಿಮ್ಮ ಸ್ವಾಭಿಮಾನ, ಆತ್ಮಸಾಕ್ಷಿಗೆ ತಕ್ಕಂತೆ ಕೆಲಸ ಮಾಡಿ ಎಂದು ಸಲಹೆ ನೀಡಿದರು.

ನಂಬಿಕೆಯೇ ದೊಡ್ಡ ಗುಣ: ಕಾಯುವ ದೇವರು ವರ, ಶಾಪ ನೀಡುವುದಿಲ್ಲ. ಎಲ್ಲರಿಗೂ ಕೇವಲ ಅವಕಾಶ ನೀಡುತ್ತಾನೆ. ಆ ಅವಕಾಶ ಸಿಕ್ಕಾಗ ಶ್ರಮವಹಿಸಿ ಯಶಸ್ಸು ಸಾಧಿಸಲು ಪ್ರಯತ್ನಿಸಬೇಕು. ಮನುಷ್ಯನಿಗೆ ನಂಬಿಕೆಗಿಂತ ದೊಡ್ಡ ಗುಣ ಮತ್ತೊಂದಿಲ್ಲ. ನೀವು ನಿಮ್ಮ ವ್ಯವಹಾರದಲ್ಲಿ ನಂಬಿಕೆ ಉಳಿಸಿಕೊಳ್ಳುವುದು ಮುಖ್ಯ. ಯಾವುದೇ ಉದ್ಯಮ ನಡೆಸುತ್ತಿದ್ದರೂ ನಂಬಿಕೆ ಉಳಿಸಿಕೊಳ್ಳಿ. ಆಗ ಮಾತ್ರ ಗ್ರಾಹಕರು ನಿಮ್ಮ ಬಳಿ ಬರುತ್ತಾರೆ. ನೀವು ನಂಬಿಕೆ ಮೂಲಕ ನಿಮ್ಮ ಬ್ರಾಂಡ್ ಹೆಚ್ಚಿಸಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಹೊಸ ಹೆಜ್ಜೆ: ನಾವು ಮಂಗಳೂರಿನಲ್ಲಿ ನಿನ್ನೆ ಹೊಸ ಪ್ರಯೋಗಕ್ಕೆ ಹೊಸ ಹೆಜ್ಜೆ ಇಟ್ಟಿದ್ದೇವೆ. ನಮ್ಮ ಕರಾವಳಿ ಭಾಗದಲ್ಲಿ ಗಲಾಟೆ, ಘರ್ಷಣೆಯಿಂದ ಸಂಜೆಯಾದರೆ ಅಂಗಡಿ ಬಾಗಿಲು ಮುಚ್ಚಬೇಕಾದ ಪರಿಸ್ಥಿತಿ ಇದೆ. ಇದರಿಂದ ವ್ಯಾಪಾರ ವಹಿವಾಟು ಇಲ್ಲದೆ, ವರ್ತಕರಿಗೆ ತೊಂದರೆಯಾಗಿದೆ. ಹಾಗಾಗಿ ನಿನ್ನೆ ಮಂಗಳೂರಿನಲ್ಲಿ ಕರಾವಳಿ ಹಾಗೂ ಮಲೆನಾಡು ಭಾಗದ ಎಲ್ಲಾ ಉದ್ಯಮಿ ಗಳ ಸಮಾವೇಶ ಮಾಡಿದ್ದೇನೆ. ರಾಜ್ಯದಲ್ಲಿ ರುವ 300 ಕಿ.ಮೀ. ಸಮುದ್ರತೀರ ಪರಿಸರ, ದೇವಾಲಯ, ಸೌಂದರ್ಯವನ್ನು ಜಗತ್ತಿಗೇ ಪರಿಚಯಿಸಲು ಮುಂದಾಗಿದ್ದೇವೆ. ಪಂಚತಾರ ಹೋಟೆಲ್ ಸೇರಿದಂತೆ ಒಟ್ಟಾರೆ ಪ್ರವಾಸೋದ್ಯಮಕ್ಕೆ ಹೊಸ ರೂಪ ನೀಡಲು ಚರ್ಚೆ ಮಾಡಿದ್ದೇವೆ ಎಂದರು.

ನಿರ್ಮಾಣಕ್ಕೆ ರಾಮಚಂದ್ರಪ್ಪ ಮನವಿ

ಕ್ರಮ ಕೈಗೊಳ್ಳಬೇಕು. ಜಿಲ್ಲೆಗೊಂದರಂತೆ ಪ್ರಾಯೋ ಗಿಕವಾಗಿ ಸ್ಥಾಪನೆ ಮಾಡಬೇಕು. ಈ ಮೂಲಕ ಜನರು ಸದಭಿರುಚಿಯ ಚಿತ್ರಗಳನ್ನು ವೀಕ್ಷಣೆ ಮಾಡಲು ಸಾಧ್ಯವಿದೆ. ಇದು ನಮ್ಮಂತಹ ನಿರ್ದೇಶಕರು ಚಿತ್ರ ನಿರ್ಮಾಣ ಸಾಧ್ಯವಿದೆ ಎಂದರು. ಸಿಎಂ ಸಿದ್ದರಾಮಯ್ಯ ಅನೇಕ ಜನಪರವಾದ ಕೆಲಸಗಳನ್ನು ಮಾಡಿದ್ದಾರೆ. ಇತ್ತೀಚೆಗಷ್ಟೆ ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿ ದಾಖಲೆ ಮಾಡಿದ್ದಾರೆ. ಮಿನಿ ಚಿತ್ರ ಮಂದಿರ ಗಳನ್ನು ನಿರ್ಮಾಣ ಮಾಡುವ ಮೂಲಕ ಕನ್ನಡದ ಚಲನಚಿತ್ರೋದ್ಯಮಕ್ಕೆ ಸಹಾಯ ವಾಗುವಂತಹ ಇನ್ನೊಂದು ದಾಖಲೆಯನ್ನು ಮಾಡಬೇಕು ಎಂದು ಮನವಿ ಮಾಡಿದರು.

ಹಿಂದುಳಿದ ವರ್ಗ 2ಎಗೆ ಸೇರಿಸಲು ನೆರವು

ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದರೆ ಕೂಡಲೇ ಪ್ರಧಾನಮಂತ್ರಿಗಳು ಹಾಗೂ ಸಂಬಂಧಪಟ್ಟ ಇಲಾಖೆ ಸಚಿವರೊಂದಿಗೆ ಚರ್ಚಿಸಿ ಓಬಿಸಿ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಶಾಸಕ ಡಿ.ರವಿಶಂಕರ್ ಮಾತನಾಡಿ ನಾಮಧಾರಿಗೌಡ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರಿಸಲು ನೀವು ಮನವಿ ಸಲ್ಲಿಸಿದ್ದು ಈ ಬಗ್ಗೆ ಸಂಬಂಧಪಟ್ಟ ಸಚಿವರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ಸಂಪುಟದಲ್ಲಿ ಪ್ರಸ್ತಾಪವಾಗುವುದರ ಜೊತೆಗೆ ಅಧಿವೇಶನದಲ್ಲಿ ಮಂಡಿಸಿ, ಅಂಗೀಕಾರ ಪಡೆದು ಕೇಂದ್ರಕ್ಕೆ ಶಿಫಾರಸು ಮಾಡಿಸಲು ಶ್ರಮಿಸುವುದಾಗಿ ಭರವಸೆ ನೀಡಿದರು. ಹಾಸನ–ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ಕಳೆದ ಅವಧಿಯಲ್ಲಿ ಕೇಂದ್ರ ಭೂ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಭೂಮಿ ಪೂಜೆ ನೆರವೇರಿಸಿದ್ದರು. ಈ ರಸ್ತೆ ಈಗ ಗುಂಡಿ ಬಿದ್ದು ಸಂಚಾರಕ್ಕೆ ತೀವ್ರ ಅನಾನುಕೂಲವಾಗಿ ರುವುದರಿಂದ ತಾವುಗಳು ಈ ಬಗ್ಗೆ ಗಮನಹರಿಸಿ ಶೀಘ್ರವೇ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಲು ನೆರವಾಗುವಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಯವರಲ್ಲಿ ಮನವಿ ಮಾಡಿದರು.

ನಾವು ಹಿಂದಿನಿಂದಲೂ ನಾಮಧಾರಿಗೌಡ ಸಮುದಾಯಕ್ಕೆ ರಾಜಕೀಯ ಸ್ಥಾನಮಾನಗಳನ್ನು ನೀಡುತ್ತಾ ಬಂದಿದ್ದು ಮುಂದಿನ ದಿನಗಳಲ್ಲೂ ಅದನ್ನು ಮುಂದುವರಿಸುತ್ತೇನೆ. ಸಮುದಾಯ ಭವನದ ಶೌಚಾಲಯ ನಿರ್ಮಾಣಕ್ಕೆ 10 ಲಕ್ಷ ಅನುದಾನವನ್ನು ಶೀಘ್ರವೇ ಬಿಡುಗಡೆ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ ಹಾಲಿ ಶಾಸಕರು ತಮ್ಮ ಸರ್ಕಾರದಲ್ಲಿ ನಾಮಧಾರಿಗೌಡ ಸಮುದಾಯಕ್ಕೆ ಹಿಂದುಳಿದ ವರ್ಗ 2ಎಗೆ ಸೇರಿಸಲು ಶಿಫಾರಸ್ಸು ಮಾಡಿಸಿದರೆ ನಮ್ಮ ನಾಯಕರಾದ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರ ಜೊತೆ ನಾನೇ ದೆಹಲಿಗೆ ನಿಯೋಗ ಕರೆದುಕೊಂಡು ಹೋಗಿ ಹಿಂದುಳಿದ ವರ್ಗದ ಸ್ಥಾನಮಾನ ಕಲ್ಪಿಸಲು ಶ್ರಮಿಸುವುದಾಗಿ ಘೋಷಿಸಿದರು.

ನಾಮಧಾರಿಗೌಡ ಸಮುದಾಯದ ಸಹಕಾರದಿಂದ 15 ವರ್ಷ ಶಾಸಕನಾಗಿ, ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಮುಂದಿನ ದಿನಗಳಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದಾಗ ನಿಮ್ಮ ಸಮುದಾಯಕ್ಕೆ ಸಾಂವಿಧಾನಿಕ ಹುದ್ದೆ ಕೊಡಲಾಗುವುದು. ಸಮುದಾಯದವರು ನಿವೇಶನ ಕೊಟ್ಟರೆ 1 ಕೋಟಿ ರೂಪಾಯಿ ಅನುದಾನವನ್ನು ಶೈಕ್ಷಣಿಕ ಸಂಸ್ಥೆಗೆ ಕೊಡಿಸುತ್ತೇನೆ. ಸಿದ್ದಾಪುರ ಗ್ರಾಮವನ್ನು ಪಂಚಾಯಿತಿ ಕೇಂದ್ರವನ್ನಾಗಿ ಮಾಡಿದ್ದೇನೆ. ಹಾಗಾಗಿ ನಿಮ್ಮಗಳ ಪ್ರೀತಿ ವಿಶ್ವಾಸ ನನ್ನ ಮೇಲೆ, ಕುಮಾರಣ್ಣ ಅವರ ಮೇಲೆ ಸದಾ ಇರಲಿ ಎಂದರು. ಕಾರ್ಯಕ್ರಮದಲ್ಲಿ ಸಮುದಾಯದ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು, ನಿವೃತ್ತ ಯೋಧರು ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡಿದ ದಾನಿಗಳನ್ನು ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್, ನವನಗರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಮಾತನಾಡಿದರು. ಎಂಎಲ್ಸಿ ಸಿ.ಎನ್.ಮಂಜೇಗೌಡ, ಮಾಜಿ ಶಾಸಕ ಅಶ್ವಿನ್ ಕುಮಾರ್, ತಾಲೂಕು ಅಖಿಲ ನಾಮಧಾರಿಗೌಡ ಸಂಘದ ಅಧ್ಯಕ್ಷ ಕೆ.ಆರ್.ಅಶೋಕ್ ಕುಮಾರ್, ಉಪಾಧ್ಯಕ್ಷ ಕೆಗ್ಗೆರೆ ಗಿರೀಶ್, ಕಾರ್ಯದರ್ಶಿ ಪುರುಷೋತ್ತಮ, ಖಜಾಂಚಿ ಕೃಷ್ಣೇಗೌಡ, ಕೇಂದ್ರ ಸಂಘದ ಕೆ.ಟಿ.ಗೋವಿಂದ ರಾಜು, ಜಿಪಂ ಮಾಜಿ ಸದಸ್ಯ ಅಮಿತ್ ವಿ ದೇವರಹಟ್ಟಿ, ತಾಪಂ ಮಾಜಿ ಅಧ್ಯಕ್ಷ ಜಯರಾಮೇಗೌಡ, ಹಿರಿಯ ಉಪನ್ಯಾಸಕ ಡಿ.ಶ್ರೀನಿವಾಸ್, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ನಿಕಟಪೂರ್ವ ಕಾರ್ಯದರ್ಶಿ ಎಂ.ಆರ್. ಪುಟ್ಟರಾಜು, ನಿರ್ದೇಶಕರಾದ ಎಸ್.ರುಕ್ಮಾಂಗದ, ಎನ್.ಡಿ.ಗೋವಿಂದ ರಾಜು, ಕೆ.ಎಸ್.ಸುಮಂತ್, ಕೆ.ಬಿ.ಪ್ರಕಾಶ್, ಕೆ.ಎನ್.ನಂಜೇಗೌಡ, ಡಿ.ನಟರಾಜು, ಜಯಪ್ರಕಾಶ್, ಎಂ.ಪಿ.ನಂಜುಂಡ, ಎಸ್.ಕೆ.ವೆಂಕಟೇಶ್, ನಾಮಧಾರಿ ಸಮಾಜದ ಮುಖಂಡರಾದ ಎರೆಮನುಗನಹಳ್ಳಿ ಸುನೀಲ್, ಡೈರಿಆನಂದ್, ಮರೀಗೌಡ, ನಾರಾಯಣಪುರ ಬಾಬು, ತ್ಯಾಗರಾಜ್, ಹರಂಬಳ್ಳಿ ಕೊಪ್ಪಲು ರವಿ ಸೇರಿದಂತೆ ಇತರರಿದ್ದರು.

ಬಹುರೂಪಿ ಚಿತ್ರೋತ್ಸವಕ್ಕೆ ಚಾಲನೆ

ಸಿನಿಮಾಗಳಿಗೂ ಇರುವ ಸಂಬಂಧವೇನು?, ಅದು ಅಭಿವ್ಯಕ್ತಿಸುವ ಸಂಬಂಧವೇನು ಎನ್ನುವುದನ್ನು ಪರೀಕ್ಷಿಸಬೇಕಾಗಿದೆ ಎಂದು ತಿಳಿಸಿದರು.

ಚಿತ್ರ ನಿರ್ದೇಶಕ ಸಮನ್ವಯಕಾರ: 1940ರವರೆಗೂ ಸಿನಿಮಾವನ್ನು ಕಲೆ ಎಂದು ಪರಿಗಣಿಸಿರಲಿಲ್ಲ. ಕಲೆ ಎಂದು ಘೋಷಿಸಿದ ನಂತರ ನಿರ್ದೇಶಕರು ಸಮಾದಾನಪಟ್ಟುಕೊಳ್ಳುವಂತಾ ಯಿತು. ರಂಗಭೂಮಿ ಮತ್ತು ಸಿನಿಮಾ ಇವೆರಡು ಪ್ರಜಾಸತ್ತಾತ್ಮಕವಾ ದಂತಹ ಕಲೆಗಳು. ಸಿನಿಮಾ ಸೃಷ್ಟಿ ಪ್ರಕ್ರಿಯೆಯಲ್ಲಿ ಪ್ರಜಾಪ್ರಭುತ್ವದ ಪ್ರಕ್ರಿಯೆ ಕಾಣಬಹುದಾಗಿದೆ. ರಂಗಭೂಮಿ ಮತ್ತು ಚಲನಚಿತ್ರ ಎರಡೂ ಏಕ ವ್ಯಕ್ತಿ ಕಲೆಗಳಲ್ಲ. ಒಬ್ಬರೇ ಸ್ಥಿರ ಚಿತ್ರ ಬಿಡಿಸುವ, ಕಥೆ, ಕಾದಂಬರಿ, ಕವಿತೆ ಬರೆಯಬಹುದು, ಆದರೆ ರಂಗ ಭೂಮಿ– ಸಿನಿಮಾದಲ್ಲಿ ಇದು ಸಾಧ್ಯವಾಗುವುದಿಲ್ಲ. ಒಂದು ಕೇಂದ್ರ ಪದ್ಧತಿ ಇದ್ದಾಗಲೂ ಸಹ ಬೇರೆ ಬೇರೆ ಕಲಾ ಪ್ರಕಾರಗಳನ್ನು ಏಕಕಾಲಕ್ಕೆ ದುಡಿಸಿಕೊಳ್ಳಬೇಕಾಗಿರುತ್ತದೆ. ಈ ಸೃಷ್ಟಿ ಪ್ರಕ್ರಿಯೆಯೇ ಪ್ರಜಾಸತ್ತಾತ್ಮಕವಾದುದ್ದಾಗಿದೆ. ರಂಗಭೂಮಿ–ಸಿನಿಮಾದಲ್ಲಿ ಒಂದು ಕೇಂದ್ರ ಸ್ಥಾನೀಯ ಸಂಕೇತವಾಗಿ ನಿರ್ದೇಶಕ ಇರುತ್ತಾನೆ. ಆದರೆ ಅಲ್ಲಿ ಏಕ ವ್ಯಕ್ತಿಯ ಸೃಜನಶೀಲ ಸರ್ವಾಧಿಕಾರ ಇರುವುದಿಲ್ಲ. ನಿರ್ದೇಶಕನೂ ಕ್ಯಾಪ್ಟನ್ ಆಗಿದ್ದರೂ ಒಬ್ಬನೇ ವಿಜೃಂಭಿಸುವುದಿಲ್ಲ. ಬೇರೆ ಬೇರೆ ವ್ಯಕ್ತಿಗಳನ್ನು ಒಂದು ಕೇಂದ್ರ ಪ್ರಜ್ಞೆಗೆ ಸಂಯೋಜಿಸಿಕೊಳ್ಳುವ ಒಬ್ಬ ಸಮನ್ವಯಕಾರ ಆತ. ನಿರ್ದೇಶಕನೇ ಸಿನಿಮಾ ಕಲೆಯ ಒಟ್ಟು ವಿನ್ಯಾಸವನ್ನು ನಿರ್ಧರಿಸುತ್ತಾನೆ. ಶೈಲಿ, ಅಭಿನಯ ಹೇಗಿರಬೇಕು ಅಂತ ನಿರ್ಧರಿಸುತ್ತಾನೆ. ಆದರೆ ಅಷ್ಟೂ ಕಲಾ ಪ್ರಕಾರದ ಜನರನ್ನು ತೊಡಗಿಸಿಕೊಳ್ಳುವ ಸೃಷ್ಟಿ ಕ್ರಿಯೆಯ ಪ್ರಕ್ರಿಯೆನೇ ಸಿನಿಮಾಗೆ ಒಂದು ಪ್ರಜಾಸತ್ತಾತ್ಮಕ ನೆಲೆಯನ್ನು ಒದಗಿಸುತ್ತದೆ ಎಂದು ವಿವರಿಸಿದರು.

ಬಂಡವಾಳ ಹೂಡಿಕೆ ಮಾಡಿದ್ದಲ್ಲಿ ಉದ್ಯಮವಾಗುತ್ತದೆ: ಯಾವ ಕ್ಷೇತ್ರದಲ್ಲಿ ಹೆಚ್ಚು ಬಂಡವಾಳ ಹೂಡಿಕೆ ಮಾಡುತ್ತೇವೋ ಅದು ಉದ್ಯಮವಾಗಿ ಮಾರ್ಪಾಡಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸಿನಿಮಾ ಕ್ಷೇತ್ರ ಕಲೋದ್ಯಮವಾಗಿದೆ. ಅದರಂತೆ ಪುಸ್ತಕೋದ್ಯಮ, ಪತ್ರಿಕೋದ್ಯಮವನ್ನು ಉದ್ಯಮವಾಗಿರುವುದನ್ನು ಕಾಣಬಹುದು. ಉದ್ಯಮ ಸಂಪಾದನೆಯನ್ನು ಬಯಸಿದರೆ, ಮಾಧ್ಯಮ ಸಂವೇದನೆಯನ್ನು ನಿರೀಕ್ಷಿಸುತ್ತವೆ. ಈ ಹಿನ್ನೆಲೆಯಲ್ಲಿ ಸಂವೇದನೆ ಮತ್ತು ಸಂಪಾದನೆ ಈ ಎರಡನ್ನು ಸಮಾನವಾಗಿ ಕೊಂಡೊಯ್ಯುವುದು ಸವಾಲಿನ ಕೆಲಸ. ಉದ್ಯಮ ರಹಿತ ಕಲೆಯನ್ನು ಊಹಿಸಿಕೊಳ್ಳಲು ಸಾಧ್ಯ ಇಲ್ಲ. ಕಲೆ ರಹಿತವಾದ ಉದ್ಯಮವನ್ನು ಊಹಿಸಿಕೊಳ್ಳಲು ಸಾಧ್ಯ ಇಲ್ಲ. ಕಲಾತ್ಮಕ ಅಥವಾ ಪರ್ಯಾಯ ಸಿನಿಮಾ ನಿರ್ಮಾಣಕ್ಕೂ ಕೆಲವು ಲಕ್ಷ ರೂ.ಗಳನ್ನಾದರೂ ಬಂಡವಾಳ ಹಾಕಬೇಕಾಗಿರುತ್ತದೆ. ಆದರೆ ಅಲ್ಲಿ ಕಲೆಯನ್ನು ಉಳಿಸಿಕೊಳ್ಳುವುದು ಹೇಗೆ ಎನ್ನುವುದರ ಅರಿವು ಇರಬೇಕು. ಹೀಗಾಗಿ ಕಲೋದ್ಯಮದ ಸ್ವರೂಪವನ್ನು ನಿರ್ವಹಿಸುವುದು ಸಿನಿಮಾದಲ್ಲಿ ಬಹಳ ದೊಡ್ಡ ಸಮಸ್ಯೆಯಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ.ನಾಗರಾಜಮೂರ್ತಿ, ರಂಗಸಮಾಜ ಸದಸ್ಯ ಎಂ.ಎಸ್.ಜಹಾಂಗೀರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಕೆ.ಎಂ. ಗಾಯತ್ರಿ, ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಚಲನಚಿತ್ರೋತ್ಸವ ಸಂಯೋಜಕ ಕೆ.ಮನು, ಸಂಚಾಲಕರಾದ ಬಿ.ಎನ್.ಶಶಿಕಲಾ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂ ದೇವಾಲಯದ ಮುಂದೆ ಮಲವಿಸರ್ಜನೆ ಮಾಡಿದ ವ್ಯಕ್ತಿಯನ್ನು ಹಿಗ್ಗಾಮುಗ್ಗಾ ಥಳಿಸಿದ ಸ್ಥಳೀಯರು

ಹೈದರಾಬಾದ್: ದೇವಾಲಯದ ಮುಂದೆ ಮಲವಿಸರ್ಜನೆ ಮಾಡಿ ಅಪವಿತ್ರಗೊಳಿಸಿದ ವ್ಯಕ್ತಿಯೊಬ್ಬನಿಗೆ ಸ್ಥಳೀಯರು ಹಿಗ್ಗಾಮುಗ್ಗಾ ಥಳಿಸಿದ್ದಾರೆ.

ಹೈದರಾಬಾದ್‌ನ ಮಲ್ಕಜ್‌ಗಿರಿಯಲ್ಲಿರುವ ದೇವಸ್ಥಾನದ ಬಳಿ ವ್ಯಕ್ತಿ ಮಲವಿಸರ್ಜನೆ ಮಾಡಿದ್ದು, ಈ ವೇಳೆ ವ್ಯಕ್ತಿಯನ್ನು ಹಿಡಿದ ಸ್ಥಳೀಯರು ಥಳಿಸಿದ್ದಾರೆ. ಬಳಿಕ ಆತನ ಕೈಯಿಂದಲೇ ಸ್ಥಳವನ್ನು ಸ್ವಚ್ಛಗೊಳಿಸಿ, ಕ್ಷಮೆ ಕೇಳುವಂತೆ ಮಾಡಿದ್ದಾರೆ. ಈ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಆಕ್ರೋಶಗಳು ವ್ಯಕ್ತವಾಗುತ್ತಿವೆ. ಜನವರಿ 10ರಂದು ಘಟನೆ ನಡೆದಿದೆ ಎನ್ನಲಾಗುತ್ತಿದ್ದು, ಈ ಬಗ್ಗೆ ಅಧಿಕಾರಿಗಳು ಯಾವುದೇ ಹೇಳಿಕೆಗಳನ್ನೂ ನೀಡಿಲ್ಲ. ಈ ನಡುವೆ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆಯುಂಟು ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ಸೋನಿಯಾ ಗಾಂಧಿ ಆಸ್ಪತ್ರೆಯಿಂದ ಬಿಡುಗಡೆ



ನವದೆಹಲಿ: ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಚೇತರಿಸಿಕೊಂಡಿರುವ ಹಿನ್ನೆಲೆಯಲ್ಲಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಎದೆಯ ಸೋಂಕು ಮತ್ತು ಆಸ್ತಮಾ ದಿಂದಾಗಿ ಅವರನ್ನು ಜನವರಿ 5ರ ಸಂಜೆ ದೆಹಲಿಯ ಸರ್ ಗಂಗಾ ರಾಮ್ ಆಸ್ಪತ್ರೆಗೆ ದಾಖಲಾಗಿದ್ದರು. ಹಿರಿಯ ತಜ್ಞ ಡಾ.ಅರುಪ್ ಬಸು ಅವರ ಮೇಲ್ವಿಚಾರಣೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಯಿತು. ವಾರದ ಚಿಕಿತ್ಸೆಯಿಂದ ಸೋನಿಯಾ ಅವರು ಚೇತರಿಸಿಕೊಂಡಿ ರುವುದರಿಂದ ಅವರನ್ನು ಭಾನುವಾರ ಸಂಜೆ 5 ಗಂಟೆ ಸುಮಾರಿಗೆ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಸೋನಿಯಾ ಅವರ ಆರೋಗ್ಯ ಗಮನಾರ್ಹವಾಗಿ ಸುಧಾರಿಸಿದ್ದು, ಮನೆಯಲ್ಲೇ ಚಿಕಿತ್ಸೆ ಮುಂದುವರಿಸಲು ಸೂಚಿಸಿರುವುದಾಗಿ ಆಸ್ಪತ್ರೆ ಮುಖ್ಯಸ್ಥ ಡಾ.ಅಜಯ್ ಸ್ವರೂಪ್ ತಿಳಿಸಿದ್ದಾರೆ.

ಪಡಿತರ ಚೀಟಿಗೆ ಅರ್ಜಿ ಆಹ್ವಾನ

ಬಿಪಿಎಲ್ ಕಾರ್ಡ್ ಪಡೆಯುವವರಿಗೆ ಇಲಾಖೆಯ ಪೋರ್ಟಲ್ ಮುಕ್ತವಾಗಿರಿಸಿದಾಗ ಬೇರೆಯವರೂ ಅರ್ಜಿ ಹಾಕಿದ್ದು, ಅಂತಹ ಮೂರು ಲಕ್ಷ ಅರ್ಜಿಗಳ ಪರಿಶೀಲನೆ ನಡೆಯುತ್ತಿದೆ. ಫೆಬ್ರವರಿ ತಿಂಗಳಿಂದ ಹೊಸ ಪಡಿತರ ಚೀಟಿಗಳನ್ನು ನೀಡಲು ಅರ್ಜಿ ಆಹ್ವಾನಿಸಲಾಗುತ್ತದೆ ಎಂದರು. ಕೇಂದ್ರ ಸರ್ಕಾರ ಪ್ರತಿ ವ್ಯಕ್ತಿಗೆ 5 ಕೆಜಿ ಅಕ್ಕಿಯ ಜೊತೆಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ಬಿಪಿಎಲ್ ಕಾರ್ಡ್ ದಾರರಿಗೆ 5 ಕೆಜಿ ಅಕ್ಕಿ ನೀಡಲಾಗುತ್ತಿತ್ತು. ಆದರೆ, ಇದು ಸೂಕ್ತವಾಗಿ ಬಳಕೆ ಯಾಗುತ್ತಿಲ್ಲ ಎಂಬ ಮಾಹಿತಿ ಇರುವು ದರಿಂದ ಅಕ್ಕಿಯ ಬದಲು ದಕ್ಷಿಣ ಕರ್ನಾಟಕದಲ್ಲಿ ರಾಗಿ ಹಾಗೂ ಉತ್ತರ ಕರ್ನಾ ಟಕದಲ್ಲಿ ಜೋಳ, ತೊಗರಿ ಬೇಳೆ ನೀಡಲು ಮುಂದಾಗಿದ್ದೇವೆ. ಆದಷ್ಟು ಶೀಘ್ರವೇ ಟೆಂಡರ್ ಕರೆದು ಜೋಳ, ತೊಗರಿ, ರಾಗಿಯನ್ನು ವಿತರಿಸಲಾಗುವುದು. ಟೆಂಡರ್ ಹಾಕಿದ ವರಿಗೆ ಕಲಬುರಗಿಯಲ್ಲಿ ಬೆಳೆದ ತೊಗರಿಯನ್ನೇ ಖರೀದಿಸಿ ಎಂದು ಹೇಳಲಾಗುವುದಿಲ್ಲ. ಗುಣಮಟ್ಟ ವೊಂದೇ ಮಾನದಂಡವಾಗಿರುತ್ತದೆ. ಆದಾಗ್ಯೂ, ಕಲಬುರಗಿ ಭಾಗದಲ್ಲಿ ಬೆಳೆದ ತೊಗರಿ ಖರೀದಿಸುವಂತೆ ಮೌಖಿಕ ವಾಗಿ ತಿಳಿಸುತ್ತೇವೆ ಎಂದು ಹೇಳಿದರು.

ತಿಮ್ಮಪ್ಪನಿಗೆ ಪ್ರಾರ್ಥನೆ ಸಲ್ಲಿಸಿದ ಇಸ್ರೋ ಅಧ್ಯಕ್ಷ

ಸ್ಯಾಟಲೈಟ್ ಲಾಂಚ್ ವೆಹಿಕಲ್ (ಪಿಎಸ್‌ಎಲ್‌ವಿ)ನ 64ನೇ ಉಡಾವಣೆ ಮತ್ತು ಎರಡು ಸ್ಟ್ರಾಪ್–ಆನ್ ಬೂಸ್ಟರ್‌ಗಳನ್ನು ಹೊಂದಿರುವ ಪಿಎಸ್‌ಎಲ್‌ವಿ–ಡಿಎಲ್ ವೇರಿಯಂಟ್‌ನ 5ನೇ ಬಳಕೆಯನ್ನು ಗುರುತಿಸುತ್ತದೆ. ಈ ಕಾರ್ಯಾಚರಣೆಯ ಪ್ರಾಥಮಿಕ ಪೇಲೋಡ್ EOS-N1 (ಅನ್ವೇಷ), ಕೃಷಿ, ನಗರ ನಕ್ಷೆ ಮತ್ತು ಪರಿಸರ ಮೇಲ್ವಿಚಾರಣೆಯಲ್ಲಿ ಭಾರತದ ರಿಮೋಟ್ ಸೆನ್ಸಿಂಗ್ ಸಾಮರ್ಥ್ಯಗಳನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾದ ಭೂ ವೀಕ್ಷಣಾ ಉಪಗ್ರಹವಾಗಿದೆ. ಇದರ ಜೊತೆಗೆ, ಭಾರತ ಮತ್ತು ವಿದೇಶಗಳಿಂದ 18 ಪೇಲೋಡ್‌ಗಳು ಪ್ರಯಾಣವನ್ನು ಹಂಚಿಕೊಳ್ಳಲಿದ್ದು, ಇದು ಗಮನಾರ್ಹವಾದ ಬಹು–ಉಪಗ್ರಹ ನಿಯೋಜನೆಯಾಗಿದೆ.

2025ರ ಕೊನೆಯಲ್ಲಿ ನಡೆದ PSLV-C61 ಕಾರ್ಯಾಚರಣೆಯ ವಿಫಲತೆಯ ನಂತರ PSLV ಸೇವೆಗೆ ಮರಳುವುದನ್ನು ಗುರುತಿಸುವುದರಿಂದ ಈ ಮುಂಬರುವ ಹಾರಾಟವು ಪ್ರಾಮುಖ್ಯತೆಯನ್ನು ಹೊಂದಿದೆ. ಇಸ್ರೋಗೆ, C62 ಮಿಷನ್ ಒಟ್ಟಾರೆಯಾಗಿ ಅದರ 101ನೇ ಕಕ್ಷೀಯ ಪ್ರಯತ್ನವನ್ನು ಪ್ರತಿನಿಧಿಸುತ್ತದೆ ಮತ್ತು 2026ರ ಮೊದಲ ಕಕ್ಷೀಯ ಉಡಾವಣೆಯಾಗಿದೆ. ಪಿಎಸ್‌ಎಲ್‌ವಿ–ಸಿ62 ಯಶಸ್ವಿಯಾದರೆ, ಸಣ್ಣ ಮತ್ತು ಮಧ್ಯಮ ಉಪಗ್ರಹ ನಿಯೋಜನೆಯಲ್ಲಿ ಇಸ್ರೋದ ವಿಶ್ವಾಸಾರ್ಹತೆಯನ್ನು ಪುನರುಚ್ಚರಿಸುತ್ತದೆ ಮತ್ತು ಭಾರತದ ಖಾಸಗಿ ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ಸಹಯೋಗಗಳ ಬೆಳೆಯುತ್ತಿರುವ ಪರಿಸರ ವ್ಯವಸ್ಥೆಯನ್ನು ಬಲಪಡಿಸುತ್ತದೆ.

ಫಿಟ್ ಮೈಸೂರು ನಡಿಗೆಯಲ್ಲಿ ಹೆಜ್ಜೆ ಹಾಕಿದ ಸಾವಿರಾರು ಮಂದಿ

ಬಿಳಿ ಟಿ-ಶರ್ಟ್, ಟೋಪಿ ಧರಿಸಿ ತುಂತುರು ಮಳೆಯನ್ನೂ ಲೆಕ್ಕಿಸದೆ ಶಿಸ್ತಿನ ಸಿಪಾಯಿಗಳಂತೆ ಕಂಗೊಳಿಸಿದ ನಡಿಗೆದಾರರು

- ಸ್ವಚ್ಛತಾ ಪ್ರತಿಜ್ಞಾವಿಧಿ ಬೋಧನೆ
- ಮೆರವಣಿಗೆಯಲ್ಲಿ ಆಂಬ್ಯುಲೆನ್ಸ್, ವೈದ್ಯಕೀಯ ವ್ಯವಸ್ಥೆ
- ಸಚಿವರು, ಜನಪ್ರತಿನಿಧಿಗಳು, ಅಧಿಕಾರಿಗಳು ಭಾಗಿ

ಮೈಸೂರು,ಜ.11(ಜಿಎ)– ತುಂತುರು ಮಳೆಯನ್ನು ಲೆಕ್ಕಿಸದೆ ಮೈಸೂರಿನ ಸ್ವಚ್ಛತೆಗಾಗಿ ಫಿಟ್ ಮೈಸೂರು ಸಾಮೂಹಿಕ ಆರೋಗ್ಯ ಮತ್ತು ಜಾಗೃತಿ ನಡಿಗೆಯಲ್ಲಿ ಮೈಸೂರಿನ ಸಾವಿರಾರು ಮಂದಿ ಹೆಜ್ಜೆ ಹಾಕಿ ಸ್ವಚ್ಛತೆಯ ಮಹತ್ವ ಸಾರಿದರು.

ಮೈಸೂರು ವಿಶ್ವವಿದ್ಯಾನಿಲಯ, ನಗರ ಪಾಲಿಕೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ಜಿಮ್ ಅಸೋಸಿಯೇಷನ್, ಜೆಎಸ್‌ಎಸ್ ಸಿಎಸ್‌ಆರ್ ಸೇರಿದಂತೆ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ 5 ಕಿಲೋ ಮೀಟರ್ ದೂರದ ಫಿಟ್ ಮೈಸೂರು ಸಾಮೂಹಿಕ ಆರೋಗ್ಯ ಮತ್ತು ಜಾಗೃತಿ ನಡಿಗೆಯಲ್ಲಿ ಮೈಸೂರಿನ ಹಿರಿಯರು ಮತ್ತು ಕಿರಿಯರು ಸೇರಿದಂತೆ ಎಲ್ಲಾ ವಯೋಮಾನದವರು ಪಾಲ್ಗೊಂಡಿದ್ದರು.

ಮುಂಜಾನೆ 5 ಗಂಟೆಯಿಂದಲೇ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗ ಮಂದಿರಕ್ಕೆ ಆಗಮಿಸಿದ್ದ ಜನರು ನೋಂದಣಿ ಮಾಡಿಸಿ, ಬಿಳಿ ಟಿ-ಶರ್ಟ್ ಮತ್ತು ಟೋಪಿ ಧರಿಸಿಕೊಂಡು ಶಿಸ್ತಿನ ಸಿಪಾಯಿಗಳಂತೆ ಸ್ವಚ್ಛತೆ ನಡಿಗೆಗೆ ಸನ್ನದ್ಧರಾದರು. ನಂತರ ಎಲ್ಲರೂ ಜುಂಬಾ ಡ್ಯಾನ್ಸ್‌ಗೆ ಕುಣಿದು ದೇಹ ಸಡಿಲಗೊಳಿಸಿಕೊಂಡರು.

ತದನಂತರ ನಾಡಗೀತೆ, ವಂದೇ ಮಾತರಂ ಗೀತೆಗೆ ಧ್ವನಿಗೂಡಿಸಿ ಸಂವಿಧಾನ ಪೀಠಿಕೆ ಓದಿ ನಾವೆಲ್ಲರೂ ಒಂದೇ ಎಂಬ ಸಂದೇಶ ಸಾರಿದರು. ಈ ವೇಳೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಸ್ವಚ್ಛತಾ ಪ್ರತಿಜ್ಞಾವಿಧಿ ಬೋಧಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಕ್ಲೀನ್ ಮೈಸೂರು, ಫಿಟ್ ಮೈಸೂರು ಎಂಬ ವಾಕ್ಯದೊಂದಿಗೆ ಆರಂಭಿಸಿರುವ ನಡಿಗೆ ಕಾರ್ಯಕ್ರಮ ಉತ್ತಮವಾದದ್ದು, ಮೈಸೂರು ಉತ್ತಮ ಆರೋಗ್ಯ ಮತ್ತು ಕ್ಲೀನ್ ಸಿಟಿ ಅದನ್ನು ಉಳಿಸಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ. ಅದಕ್ಕಾಗಿ ಎಲ್ಲರೂ ಮೊದಲು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಜೆಎಸ್‌ಎಸ್ ಫೌಂಡೇಷನ್ ಸಂಸ್ಥಾಪಕ ಶ್ರೀಹರಿ ಮಾತನಾಡಿ, ಯಾವುದೇ ಮೂಲಮಿತಿ ಧರ್ಮ, ಜಾತಿ ಮಿತಿ ಇಲ್ಲದೇ ನಡೆಯುವುದು ವಾಕಿಂಗ್ ಮಾತ್ರ. ಈ ಹಿನ್ನೆಲೆ ಅದನ್ನು ಆಯ್ಕೆ ಮಾಡಲಾಗಿದೆ. ಇದಕ್ಕೆ ಇಷ್ಟು ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ತಿಳಿಸಿದರು.

ಬೆಳಗ್ಗೆ 6.30ಕ್ಕೆ ಮಾನಸಗಂಗೋತ್ರಿಯ ಬಯಲು ರಂಗ ಮಂದಿರದ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಪರ್ವತಾರೋಹಿ ಡಾ.ಉಷಾ ಹೆಗಡೆ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಗೃತಿ ನಡಿಗೆಗೆ ಚಾಲನೆ ನೀಡಿದರು.

ಬಯಲು ರಂಗಮಂದಿರದಿಂದ ಆರಂಭವಾದ ಫಿಟ್ ಮೈಸೂರು ಜಾಗೃತಿ ನಡಿಗೆಯು ಕುಕ್ಕರಹಳ್ಳಿ ಕೆರೆ ರಸ್ತೆ (ಬೋಗಾದಿ ಮುಖ್ಯ ರಸ್ತೆ) ಮೂಲಕ ಸಾಗಿ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ಎದುರಿಂದ ಎಡಕ್ಕೆ ತಿರುಗಿ, ಮಹಾರಾಜ ಬುಲೆವಾರ್ಡ್ ರಸ್ತೆ ಮೂಲಕ ಹುಣಸೂರು ರಸ್ತೆ ಮಾರ್ಗವಾಗಿ ಸಾಗಿ ಪಡುವಾರಹಳ್ಳಿ ಸಿಗ್ನಲ್‌ನಿಂದ ಮಾನಸಗಂಗೋತ್ರಿ ರಸ್ತೆ ಮೂಲಕ ಸೆನೆಟ್ ಭವನಕ್ಕೆ ತಲುಪಿ ನಡಿಗೆ ಪೂರ್ಣಗೊಂಡಿತು.

ಪ್ರತಿ ಕಿಲೋ ಮೀಟರ್‌ಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿತ್ತು. ಮಾರ್ಗ ದುದ್ದಕ್ಕೂ ವೈದ್ಯಕೀಯ ಹಾಗೂ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿತ್ತು. ಬೆಳಗಿನ ಉಪಹಾರ ಹಾಗೂ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಕಾರ್ಯಕ್ರಮದಲ್ಲಿ ಚಾಮರಾಜನಗರ ಸಂಸದ ಸುನೀಲ್ ಬೋಸ್, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯರಾದ ಕೆ.ಶಿವಕುಮಾರ್, ಸಿ.ಎನ್. ಮಂಜೇಗೌಡ, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಕುಲಸಚಿವೆ ಎಂ.ಕೆ.ಸವಿತ, ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಲಕ್ಷ್ಮೀ ಕಾಂತ ರೆಡ್ಡಿ, ಜಿಪಂ ಸಿಇಒ ಯುಕೇಶ್, ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.



ಫಿಟ್ ಮೈಸೂರು ವಾಕಥಾನ್‌ಗೆ ಮೈಸೂರು ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಭಾನುವಾರ ಚಾಲನೆ ನೀಡಿದರು.

> ಇತ್ತೀಚಿನ ದಿನಗಳಲ್ಲಿ 16ರಿಂದ 39 ವರ್ಷದೊಳಗಿನ ಮಕ್ಕಳ ಜೀವನ ಶೈಲಿಯಿಂದ ಹಾರ್ಟ್ ಅಟ್ಯಾಕ್ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಳಗ್ಗೆ ವಾಕ್ ಮಾಡಿ. ಇದರಿಂದ ಉತ್ತಮ ಗಾಳಿ ಸೇವನೆಯಿಂದ ಆರೋಗ್ಯ ವೃದ್ಧಿಸಿಕೊಳ್ಳಬಹುದು. ಮೈಸೂರಿನ ಸ್ವಚ್ಛತಾ ಜವಾಬ್ದಾರಿ ಮೈಸೂರು ಜನತೆ ಮೇಲಿದೆ. –ಡಾ.ಹೆಚ್.ಸಿ.ಮಹದೇವಪ್ಪ



ಮನರೇಗಾ ವಿಚಾರವಾಗಿ ಹೆಚ್‌ಡಿಕೆ ಜೊತೆ ಬಹಿರಂಗ ಚರ್ಚೆಗೆ ಸಿದ್ಧ



ಬೆಂಗಳೂರು: ಮನರೇಗಾ ವಿಚಾರದಲ್ಲಿ ಬಹಿರಂಗ ಚರ್ಚೆಗೆ ಕೇಂದ್ರ ಸಚಿವ ಕುಮಾರಸ್ವಾಮಿ ಆಹ್ವಾನಿಸಿದ್ದಾರೆ. ಪಂಥಾಹ್ವಾನ ಸ್ವೀಕರಿಸಲು ನಾನು ಸಿದ್ಧ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಕುಮಾರಸ್ವಾಮಿ ಪಂಥಾಹ್ವಾನ ಸ್ವೀಕರಿಸಿದ್ದೇನೆ. ನಾನು ಯಾವಾಗ ಬೇಕಾದರೂ ರೆಡಿ ಇದ್ದೀನಿ. ಈ ಮೂರು ದಿನಗಳಲ್ಲಿ ಯಾವಾಗಾದರೂ ರೆಡಿ. ಇವತ್ತು ಸಂಜೆಗೇ ರೆಡಿ. ಸಾರ್ವಜನಿಕ ಚರ್ಚೆಗಾದ್ರೂ ಬರಲಿ, ಇಲ್ಲವೇ ಯಾವುದಾದರೂ ಟಿವಿ ಮಾಧ್ಯಮಕ್ಕಾದರೂ ಬರಲಿ. ವಿಧಾನಸಭೆಯಲ್ಲಾದರೂ ಚರ್ಚೆಗೆ ಬರಲಿ. ಅವರು ಯಾವಾಗ ಹೇಳ್ತಾರೆ ಹೇಳಿ, ನಾನು ಡಿಬೇಟ್‌ಗೆ ರೆಡಿ. ಅವರ ಪಂಥಾಹ್ವಾನ ಸ್ವೀಕಾರ ಮಾಡಿದ್ದೇನೆ ಎಂದು ತಿಳಿಸಿದರು.

ಬಿಡಿ ಅವರ ಮಾತನ್ನೆಲ್ಲಾ ನಾನು ಸಿರಿಯಸ್ ಆಗಿ ತೆಗೆದುಕೊಳ್ಳಲ್ಲ ನೋಡಿದ್ದೀರಾ ಅಲ್ವಾ? ಬರೀ ಡೈಲಾಗ್ ಹೊಡೆಯೋ ಸ್ಪೆಷಲಿಸ್ಟ್ ಅವರು. ಅದು ಅಯ್ಯೋ ಬಿಡಿ ದಿನಾ ಬೆಳಗ್ಗೆ ಯಾವಾಗ ಟೈಂ ಫಿಕ್ಸ್ ಮಾಡ್ತೀರಾ, ನಾನು ನೋಡಿಲ್ಲ ಯಾವಾಗ ಬೇಕಾದರೂ ರೆಡಿ. ನನಗೆ 3 ದಿನ ಟೈಂ ಕೊಡಿ ಅಷ್ಟೇ. ಇವತ್ತು ಸಂಜೆಯೇ ಬೇಕಿದ್ರೆ ಕರೀರಿ, ನಾನು ರೆಡಿ. ನನಗೆ ಯಾವ ತಯಾರಿ ಬೇಡ, ಅವಶ್ಯಕತೆ ಇಲ್ಲ ಎಂದು ಸವಾಲೆಸೆದರು.

ನರೇಗಾ ಏನು ಅಂತ ನನ್ನ ಬೆರಳತುದಿಯಲ್ಲಿ ಇದೆ. ದೇಶದಲ್ಲಿ ನರೇಗಾ ಯೋಜನೆಯಲ್ಲಿ ನಮ್ಮ ತಾಲೂಕಿಗೆ ನಂಬರ್ ಒನ್ ತಾಲೂಕು ಕನಕಪುರ ಅಂತ ಪ್ರಶಸ್ತಿ ಸಿಕ್ಕಿದೆ. ಇದು ಪ್ರಹ್ಲಾದ್ ಜೋಷಿ, ಕುಮಾರಸ್ವಾಮಿ, ವಿಜಯೇಂದ್ರಗೆ ಗೊತ್ತಿದ್ದರೋ ಇಲ್ವೋ ಗೊತ್ತಿಲ್ಲ. ದುಡ್ಡು ಹೊಡೆದಿದ್ದೇವೆ ಅಂತ ಕೇಂದ್ರ ಸರ್ಕಾರ ಬಂದು ತನಿಖೆ ಮಾಡಿದ್ರು. ಇದ್ದಿದ್ದರ ಬಗ್ಗೆ ನಾನು ಡಿಬೇಟ್ ಮಾಡೋಕೆ ರೆಡಿ ಇದ್ದೇನೆ ಎಂದರು. ರಾಜ್ಯ ರಾಜಕಾರಣಕ್ಕೆ ಕುಮಾರಸ್ವಾಮಿ ಆಗಮನ ಎಂಬ ಚರ್ಚೆ ಆಗಲಿ. ಅಲ್ಲೋ ರಾಜ್ಯ ಅಲ್ಲ ಹಳ್ಳಿಯಿಂದ ರಾಜಕಾರಣ ಶುರು ಮಾಡಲಿ ಎಂದು ವ್ಯಂಗ್ಯವಾಡಿದರು.

20 ನಿಮಿಷ ಲಿಫ್ಟ್‌ನಲ್ಲಿ ಸಿಲುಕಿದ ಸಚಿವ ಮುನಿಯಪ್ಪ



ಬೀದರ್: ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ, ವಿಧಾನ ಪರಿಷತ್ ಸದಸ್ಯ ಚಂದ್ರಪ್ಪ, ಮಾಜಿ ಸಚಿವ ಎಚ್. ಆಂಜನೇಯ ಅವರು 20 ನಿಮಿಷಗಳ ಕಾಲ ಲಿಫ್ಟ್‌ನಲ್ಲಿ ಸಿಲುಕಿ ಒದ್ದಾಡಿದ ಪ್ರಸಂಗವೂ ನಗರದ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಡೆದಿದೆ. ವೀರಶೈವ ಮಹಾಸಭಾದ ಮಾಜಿ ನಾಯಕರೂ ಆದ ಮಾಜಿ ಸಚಿವ ಭೀಮಣ್ಣ ಖಂಡ್ರೆ ಅವರ ಅನಾರೋಗ್ಯದ ಕಾರಣ ಅವರನ್ನು ನಗರದ ಗುದಗೆ ಮಲ್ಟಿ ಸ್ಪೆಷಾಲಿಟಿ ಅಂಡ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ. ಅವರ ಯೋಗಕ್ಷೇಮ ವಿಚಾರಿಸಲು ಆಸ್ಪತ್ರೆಗೆ ಬಂದಿದ್ದ ಮುನಿಯಪ್ಪ, ಆಂಜನೇಯ, ಚಂದ್ರಪ್ಪ ಹಾಗೂ ಇತರರು ಲಿಫ್ಟ್‌ನಲ್ಲಿ ಹೋಗುವಾಗ ಮಧ್ಯದಲ್ಲಿಯೇ ಅದು ಕೈಕೊಟ್ಟಿದೆ. ಸುಮಾರು 20 ನಿಮಿಷಗಳ ನಂತರ ಲಿಫ್ಟ್ ಆಪರೇಟರ್‌ಗಳು ಬಂದು ಸರಿಪಡಿಸಿದರು. ಅನಂತರ ಅವರು ಸುರಕ್ಷಿತವಾಗಿ ಹೊರಬಂದು ಭೀಮಣ್ಣ ಖಂಡ್ರೆ ಅವರನ್ನು ವಿಶೇಷ ವಾರ್ಡ್‌ನಲ್ಲಿ ಭೇಟಿಯಾಗಿ, ಯೋಗಕ್ಷೇಮ ವಿಚಾರಿಸಿದರು. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿಗೆ ಜನ ಲಿಫ್ಟ್‌ನಲ್ಲಿ ಸೇರಿದ್ದರಿಂದ ಲಿಫ್ಟ್ ಕಾರ್ಯ ವಿಫಲವಾಗಿದೆ ಎಂದು ಹೇಳಲಾಗಿದೆ.

ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿಯಾಗಿರಬೇಕು

ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಆಗ್ರಹ



ಕೆ.ಸಿ.ಪುಟ್ಟಸಿದ್ದಶೆಟ್ಟಿ

ಮೈಸೂರು, ಜ.11(ಎಂಟಿವೈ)– ರಾಜ್ಯದಲ್ಲಿ ಉತ್ತಮವಾಗಿ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಮುಂದುವರೆಸಬೇಕು ಎಂಬುದು ರಾಜ್ಯ ಕಾಯಕ ಸಮುದಾಯಗಳ ಆಶಯವಾಗಿದೆ ಎಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಹಿಂದುಳಿದ ವರ್ಗಗಳ ಸಮುದಾಯವನ್ನು ಪ್ರತಿನಿಧಿಸುವ ಸಾಮರ್ಥ್ಯ ಕೇವಲ ಸಿದ್ದರಾಮಯ್ಯ ಅವರಿಗೆ ಮಾತ್ರ ಇದೆ. ಹೀಗಾಗಿ ಈ ವೇಳೆ ಅಧಿಕಾರ ಹಂಚಿಕೆ ಮಾತು ಸರಿಯಲ್ಲ. ಹಿಂದುಳಿದ ಸಮುದಾಯದಲ್ಲಿ ಸಿದ್ದರಾಮಯ್ಯ ಅವರನ್ನು ಬಿಟ್ಟರೆ ಬೇರೆ ಸಮರ್ಥ ನಾಯಕರು ಇಲ್ಲ. ಹೀಗಾಗಿ ಇವರೊಬ್ಬರು ಮಾತ್ರವೇ ಈ ಸಮುದಾಯಗಳನ್ನು ಪ್ರತಿನಿಧಿಸುವವರಾಗಿದ್ದು, ಸಾಮಾಜಿಕ ನ್ಯಾಯದಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮೂಢನಂಬಿಕೆ ವಿರುದ್ಧ ಹೋರಾಟ ಮಾಡುತ್ತಿದ್ದಾರೆ. ಚಾಮರಾಜನಗರಕ್ಕೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ ಎಂಬ ಮೂಢನಂಬಿಕೆಗೆ ಸಡ್ಡು ಹೊಡೆದು 30ಕ್ಕೂ ಹೆಚ್ಚು ಬಾರಿ ಚಾಮರಾಜನಗರಕ್ಕೆ ಹೋಗಿ ಬಂದಿದ್ದಾರೆ. ದೇವರಾಜ ಅರಸರ ಕಾಲಘಟ್ಟ ಬೇರೆ, ಸಿದ್ದರಾಮಯ್ಯ ಅವರ ಕಾಲಘಟ್ಟ, ಪರಿಸ್ಥಿತಿಯೇ ಬೇರೆ. ಹೀಗಾಗಿ ಈಗಿನ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರ ನಾಯಕತ್ವ ರಾಜ್ಯ ರಾಜಕಾರಣ, ಸಮುದಾಯಗಳ ದೃಷ್ಟಿಯಿಂದ ಅಗತ್ಯ.

ಮುಂಬರುವ ಬಜೆಟ್ ವೇಳೆ ಸಿದ್ದರಾಮಯ್ಯ ಅವರು ಕಾಯಕ ಸಮುದಾಯಗಳ ಅಭಿವೃದ್ಧಿಗಾಗಿ ನಿಗಮ–ಮಂಡಳಿಗಳನ್ನು ರದ್ದುಗೊಳಿಸಿ ಕಾಯಕ ಸಮಾಜಗಳ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಧಿಕಾರ ರಚಿಸಬೇಕು. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಇದಕ್ಕೆ ಸಾವಿರ ಕೋಟಿ ಅನುದಾನ ತೆಗೆದಿಡಬೇಕು, ಪ್ರತಿ ತಾಲೂಕಿನಲ್ಲಿ ಕೌಶಲ್ಯ ಅಭಿವೃದ್ಧಿ ಕೇಂದ್ರ ತೆರೆಯಬೇಕು. ಈಗಿರುವ ಶೇ.15 ಮೀಸಲಾತಿಯನ್ನು ಶೇ.27ಕ್ಕೆ ಹೆಚ್ಚಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಕಾಯಕ ಸಮುದಾಯಗಳ ಮುಖಂಡರಾದ ಕೆಂಪಶೆಟ್ಟಿ, ಮಹದೇವ ಗಾಣಿಗ, ರಮೇಶ್, ಶಿವರಾಜ್ ಇನ್ನಿತರರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಡಾ. ಕೆ. ಸೌಭಾಗ್ಯವತಿ ಅವರ ಮಾರ್ಗದರ್ಶನದಲ್ಲಿ ಎಂ.ಜೆ. ಸಂತೋಷ್ ಕುಮಾರ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಸರಗೂರು ತಾಲೂಕು : ಸಾಂಸ್ಕೃತಿಕ ಅಧ್ಯಯನ ಕುರಿತ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕೇರಳದ ಕನ್ನಡ ಶಾಲೆಗಳಲ್ಲಿ ಮಲೆಯಾಳಂ ಕಡ್ಡಾಯ ಖಂಡಿಸಿ ಪ್ರತಿಭಟನೆ

ಮೈಸೂರು, ಜ.11(ಎಂಕೆ)– ಕರ್ನಾಟಕ–ಕೇರಳ ಗಡಿಭಾಗದ ಕನ್ನಡ ಶಾಲೆಗಳಲ್ಲಿ ಮಲೆಯಾಳಂ ಕಡ್ಡಾಯ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೇರಳ ರಾಜ್ಯ ಸರ್ಕಾರದ ವಿರುದ್ಧ ದಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೇರಳ ವಿಧಾನಸಭೆ ಚುನಾವಣೆ ಹಿನ್ನಲೆಯಲ್ಲಿ ಕೇರಳ ಸಿಎಂ ಪಿಣರಾಯಿ ವಿಜಯನ್ ಭಾಷಾ ಮಸೂದೆ ಮೂಲಕ ಕೇರಳಿಗರನ್ನು ಕನ್ನಡಿಗರ ಮೇಲೆ ಎತ್ತಿಕಟ್ಟುವ ಹುನ್ನಾರ ನಡೆಸುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಕರ್ನಾಟಕ–ಕೇರಳ ಗಡಿಯ ಕಾಸರಗೋಡು ಮತ್ತು ಮಂಜೇಶ್ವರ ಭಾಗದಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಾಗಿದ್ದು, ಅಲ್ಲಿನ ಕನ್ನಡ ಶಾಲೆಗಳಲ್ಲಿ ಮಲಯಾಳಂ ಭಾಷೆಯನ್ನು ಪ್ರಥಮ ಭಾಷೆಯನ್ನಾಗಿಸುವ ನಿಟ್ಟಿನಲ್ಲಿ ಭಾಷಾ ಮಸೂದೆಯನ್ನು ಜಾರಿಗೆ ತರಲು ಮುಂದಾಗಿರುವುದು ಅತ್ಯಂತ ಖಂಡನೀಯ. ಮಲಯಾಳಂ ಭಾಷಾ ಮಸೂದೆ ಅಸಂವಿಧಾನಿಕವಾಗಿದ್ದು, ಮಸೂದೆಯಿಂದ ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಿರುವ ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗಲಿದೆ. ಅಲ್ಲದೆ ಇಷ್ಟವಿಲ್ಲದಿದ್ದರೂ ಮಲಯಾಳಂ ಭಾಷೆಯನ್ನು ಕಲಿಯುವಂತೆ ಒತ್ತಾಯ ಮಾಡಲಾಗುತ್ತಿದೆ ಎಂದು ದೂರಿದರು.

ಮಲಯಾಳಂ ಭಾಷಾ ಮಸೂದೆಯಿಂದ ಗಡಿ ಪ್ರದೇಶದ ಕನ್ನಡ ಶಾಲೆಯಲ್ಲಿನ ಮಕ್ಕಳು ತಮ್ಮ ಮಾತೃ ಭಾಷೆಯಾದ ಕನ್ನಡ ಕಲಿಯುವ ಅವಕಾಶದಿಂದ ವಂಚಿತರಾಗಲಿದ್ದಾರೆ. ಕಾಸರಗೋಡು ಆಡಳಿತಾತ್ಮಕವಾಗಿ ಕೇರಳ ರಾಜ್ಯಕ್ಕೆ ಸೇರಿದ್ದರೂ, ಭಾವನಾತ್ಮಕವಾಗಿ ಕರ್ನಾಟಕಕ್ಕೆ ಸೇರಿದ್ದಾಗಿದೆ. ಆದ್ದರಿಂದ ಈ ಕೂಡಲೇ ಕೇರಳ ರಾಜ್ಯ ಸರ್ಕಾರ ಭಾಷಾ ಮಸೂದೆಯನ್ನು ಕೈ ಬಿಡಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮುಖಂಡರಾದ ಗೋಲ್ಡನ್ ಸುರೇಶ್, ಪ್ರಭುಶಂಕರ್, ಪ್ರಜೀಶ್, ಡಾ.ಶಾಂತರಾಜೇ ಅರಸ್, ಕೃಷ್ಣಪ್ಪ, ಡಾ.ಮೊಗಣ್ಣಾಚಾರ್, ಸಿಂಧುವಳ್ಳಿ ಶಿವಕುಮಾರ್, ಬೋಗಾದಿ ಸಿದ್ದೇಗೌಡ, ಶಿವಲಿಂಗಯ್ಯ, ನೇಹಾ, ಹನುಮಂತೇಗೌಡ, ಮಂಜುಳ, ಭಾಗ್ಯಮ್ಮ, ಹೆಚ್.ಗಿರೀಶ್, ಮಧುವನ ಚಂದ್ರು, ಹೊನ್ನೇಗೌಡ, ಜ್ಯೋತಿ, ನಂದಕುಮಾರ್, ದರ್ಶನ್ ಗೌಡ, ಪ್ರದೀಪ್, ಸುಜಾತ, ತಾಯೂರು ಗಣೇಶ್, ಅಶೋಕ್, ಪ್ರಭಾಕರ್, ಶಿವರಾಂ, ರಘು ಆಚಾರ್, ಪರಿಸರ ಚಂದ್ರು, ನಾರಾಯಣಗೌಡ, ರಘು ಅರಸ್, ಕುಮಾರ್, ಗಣೇಶ್ ಪ್ರಸಾದ್, ಚಂದ್ರಶೇಖರ್, ಬಸವರಾಜು, ತ್ಯಾಗರಾಜ್, ರವೀಶ್ ಮತ್ತಿತರರಿದ್ದರು.



ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ಸೇನಾ ಪಡೆ ವತಿಯಿಂದ ಭಾನುವಾರ ಪ್ರತಿಭಟನೆ ನಡೆಸಲಾಯಿತು.

'ಆಪರೇಷನ್ ಸಿಂಧೂರ್' ವಿಷಯದಲ್ಲಿ ಕಾಂಗ್ರೆಸ್ ನಿಲುವಿಗೆ ಬಿಜೆಪಿ ವಾಗ್ದಾಳಿ

ಕಾಂಗ್ರೆಸ್ ಸದಾ ಪಾಕಿಸ್ತಾನ ಪರ ಸಂಯಮ ನಿಲುವು ಪ್ರದರ್ಶಿಸುತ್ತಿದೆ



ನವದೆಹಲಿ: ಭಾರತೀಯ ಸೈನಿಕರ 'ಆಪರೇಷನ್ ಸಿಂಧೂರ್' ವಿಚಾರವಾಗಿ ಕಾಂಗ್ರೆಸ್ ಪಕ್ಷದ ನಿಲುವಿನ ಬಗ್ಗೆ ಬಿಜೆಪಿ, ಹೊಸ ದಾಳಿ ನಡೆಸಿದೆ.

ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ಸಚಿವ ಮಣಿಶಂಕರ್ ಅಯ್ಯರ್, ಕಾರ್ಯಾಚರಣೆಯ ನಂತರ ಉದ್ವಿಗ್ನತೆಯನ್ನು ಕೊನೆಗೊಳಿಸಲು ಪಾಕಿಸ್ತಾನದೊಂದಿಗೆ ಭಾರತ ಶಾಂತಿ ಮಾತುಕತೆ ನಡೆಸಬೇಕು ಎಂಬ ಹೇಳಿಕೆಯನ್ನು ಬಿಜೆಪಿ ಖಂಡಿಸಿ, ತೀವ್ರ ಪ್ರತಿಕ್ರಿಯೆ ನೀಡಿದೆ. ಕಾಂಗ್ರೆಸ್ ನಿರಂತರವಾಗಿ ಪಾಕಿಸ್ತಾನದ ಬಗ್ಗೆ ಮೃದು ಧೋರಣೆ ತಳೆಯುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. ಬಿಜೆಪಿ ವಕ್ತಾರ ಶೆಹಜಾದ್ ಪೂನಾ ವಾಲಾ, ಕಾಂಗ್ರೆಸ್ ಪಾಕಿಸ್ತಾನದ ಬಗ್ಗೆ ಭಾರತದ ನಿಲುವನ್ನು ನಿರಂತರವಾಗಿ ದುರ್ಬಲಗೊಳಿಸುತ್ತದೆ. ಕಾಂಗ್ರೆಸ್ ಯಾವಾಗಲೂ ಪಾಕಿಸ್ತಾನಕ್ಕೆ ಕ್ಲೀನ್ ಚಿಟ್ ನೀಡುತ್ತದೆ. ಭಯೋತ್ಪಾದನೆಯ ವಿರುದ್ಧ ದೃಢ ಕ್ರಮವನ್ನು ಬೆಂಬಲಿಸುವುದಿಲ್ಲ ಎಂದು ಕಿಡಿಕಾರಿದ್ದಾರೆ. ಐಎನ್‌ಸಿ(INC) ಎಂದರೆ ಇಸ್ಲಾಮಾಬಾದ್ ರಾಷ್ಟ್ರೀಯ ಕಾಂಗ್ರೆಸ್ ಎಂದಾಗಿದ್ದು, ಈ ಪಕ್ಷದ ಬದ್ಧತೆ ಯಾವಾಗಲೂ ಪಾಕಿಸ್ತಾನದ ಪರವಾಗಿಯೇ ಇರುತ್ತದೆ. ಮಣಿಶಂಕರ್ ಅಯ್ಯರ್ 'ಆಪರೇಷನ್ ಸಿಂಧೂರ್' ಕೊನೆಗೊಳಿಸಲು ಮತ್ತು ಪಾಕಿಸ್ತಾನದೊಂದಿಗೆ ನಿರಂತರ ಮಾತು ಕತೆಗೆ ಒತ್ತಾಯಿಸುತ್ತಿದ್ದಾರೆ. ಸೇನಾ ಕಾರ್ಯಾಚರಣೆಗಳನ್ನು ಪ್ರಶ್ನಿಸುವ ಮೂಲಕ ಭಯೋತ್ಪಾದನೆಗೆ ಸಂಬಂಧಿಸಿದ ಕ್ರಮಗಳ ನಂತರ ಪಾಕಿಸ್ತಾನದ ಕಡೆಗೆ ಸಂಯಮವನ್ನು ಒತ್ತಾಯಿಸುವ ಮೂಲಕ ಕಾಂಗ್ರೆಸ್, ಭಾರತೀಯ ಸಶಸ್ತ್ರ ಪಡೆಗಳನ್ನು ಅವಮಾನಿಸಿದೆ. ಭಯೋತ್ಪಾದನೆ ಮತ್ತು ಗಡಿಯಾಚೆಗಿನ ಬೆದರಿಕೆಗಳ ಬಗ್ಗೆ ಭಾರತದ ನಿಲುವನ್ನು ಕಾಂಗ್ರೆಸ್ ದುರ್ಬಲಗೊಳಿಸುವ ಪ್ರಯತ್ನ ಮುಂದುವರೆಸಿದೆ ಎಂದಿದ್ದಾರೆ.

ಮಾಜಿ ಸಚಿವ 'ಶತಾಯುಷಿ' ಭೀಮಣ್ಣ ಖಂಡ್ರೆ ಅಸ್ವಸ್ಥ



ಬೀದರ್: ವಯೋಸಹಜ ಅನಾರೋಗ್ಯದಿಂದ ಬಳಲುತ್ತಿರುವ ಮಾಜಿ ಸಚಿವ, ಶತಾಯುಷಿ ಭೀಮಣ್ಣ ಖಂಡ್ರೆ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ನಡುವೆ ಆಸ್ಪತ್ರೆಗೆ ಭೇಟಿ ನೀಡಿ ತಂದೆಯ ಆರೋಗ್ಯ ವಿಚಾರಿಸಿದ ಬಳಿಕ ಮಾತನಾಡಿದ ಸಚಿವ ಈಶ್ವರ್ ಖಂಡ್ರೆ, ನಮ್ಮ ತಂದೆಯವರು ವಾರದಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ವೈದ್ಯರ ತಂಡ 24 ತಾಸು ನಿಗಾ ವಹಿಸಿದೆ. ಇವತ್ತು ಅವರ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಇದೆ ಎಂದರು.

ಅವರಿಗೆ ಉಸಿರಾಟದಲ್ಲಿ ತೊಂದರೆಯಾಗುತ್ತಿತ್ತು. ಆದ್ದರಿಂದ ಆಸ್ಪತ್ರೆಗೆ ದಾಖಲಿಸಿದ್ದು ಅವರ ರಕ್ತದೊತ್ತಡದಲ್ಲಿ ಏರುಪೇರಾಗುತ್ತಿದೆ. ವೈದ್ಯರು ಚಿಕಿತ್ಸೆ ನೀಡುತ್ತಿದ್ದು, ಇಂದು ಬೆಳಗ್ಗೆಯಿಂದ ಅವರ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡು ಬಂದಿದೆ. ನಮ್ಮ ತಂದೆಯವರಿಗೆ 102 ವರ್ಷ ವಯಸ್ಸಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ. ಅವರು ಗುಣಮುಖರಾಗುತ್ತಾರೆ ಎನ್ನುವ ವಿಶ್ವಾಸ ಇದೆ. ಅವರ ಅಭಿಮಾನಿಗಳು ಅವರ ಆರೋಗ್ಯದ ಬಗ್ಗೆ ದೇವರಲ್ಲಿ ಪ್ರಾರ್ಥನೆ ಮಾಡಲಿ ಎಂದು ವಿನಂತಿಸಿದರು.

ದೇಶ - ವಿದೇಶ

ಮತ್ತೊಂದು ಅತ್ಯಾಚಾರ; ಕೇರಳದ ಶಾಸಕ ರಾಹುಲ್ ಮಮ್‌ತೂತಥಿಲ್ ಬಂಧನ



ಪತ್ತನಂತಿಟ್ಟ(ಕೇರಳ): ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಉಚ್ಚಾಟಿತ ಕಾಂಗ್ರೆಸ್ ಶಾಸಕ ರಾಹುಲ್ ಮಮ್‌ಕೂತಥಿಲ್ ಅವರನ್ನು ಕೇರಳ ಪೊಲೀಸ್ ಅಪರಾಧ ವಿಭಾಗ ಬಂಧಿಸಿದೆ.

ಪತ್ತನಂತಿಟ್ಟ ಶಾಸಕರನ್ನು ಶನಿವಾರ ತಡರಾತ್ರಿ ಪಾಲಕ್ಕಾಡ್‌ನ ಹೋಟೆಲ್‌ನಿಂದ ವಶಕ್ಕೆ ಪಡೆದು ವಿಚಾರಣೆಗಾಗಿ ಪತ್ತನಂತಿಟ್ಟದ ಎಆರ್ ಕ್ಯಾಂಪ್‌ಗೆ ಕರೆತಂದು, ವಿಚಾರಣೆ ನಂತರ ಅವರನ್ನು ತಿರುವಲ್ಲಾ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಡಿಸೆಂಬರ್ 12ರಂದು ಮಮ್‌ಕೂತಥಿಲ್ ವಿರುದ್ಧ ದಾಖಲಾಗಿದ್ದ ಮೊದಲ ಅತ್ಯಾಚಾರ ಪ್ರಕರಣದ ತನಿಖೆಯನ್ನು ರಾಜ್ಯ ಪೊಲೀಸ್ ಕ್ರೈಂ ಬ್ರಾಂಚ್‌ಗೆ ವರ್ಗಾಯಿಸಿತ್ತು. ಈ ಪ್ರಕರಣವನ್ನು ಈ ಹಿಂದೆ ತಿರುವನಂತಪುರಂ ನಗರ ಪೊಲೀಸ್ ಆಯುಕ್ತರು ನಿರ್ವಹಿಸುತ್ತಿದ್ದರು. ಈಗ ಎರಡೂ ಅತ್ಯಾಚಾರ ಪ್ರಕರಣಗಳನ್ನು ಸಹಾಯಕ ಇನ್ಸ್‌ಪೆಕ್ಟರ್ ಜನರಲ್ ಪೂಂಗುಝಲಿ ನಿರ್ವಹಿಸುತ್ತಿದ್ದಾರೆ. ರಾಹುಲ್ ವಿರುದ್ಧ ಲೈಂಗಿಕ ದೌರ್ಜನ್ಯ, ಮದುವೆಯಾಗುವ ಭರವಸೆ ನೀಡಿ ಅತ್ಯಾಚಾರ ಮತ್ತು ಗರ್ಭಪಾತ ಮಾಡಿಸಿಕೊಳ್ಳುವಂತೆ ಬಲವಂತ ಮಾಡಿದ ಆರೋಪ ಕೇಳಿಬಂದಿದ್ದು, ಮಹಿಳೆಯ ದೂರಿನ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಸಿರಿಯಾದ ಇಸ್ಲಾಮಿಕ್ ಸ್ಟೇಟ್ ಅಡಗು ತಾಣಗಳ ಮೇಲೆ ಅಮೆರಿಕಾ ದಾಳಿ



ವಾಷಿಂಗ್ಟನ್: ಕಳೆದ ತಿಂಗಳು ಸಿರಿಯಾದಲ್ಲಿ ಅಮೆರಿಕದ ಸೈನಿಕರನ್ನು ಗುರಿಯಾಗಿಸಿಕೊಂಡು ನಡೆಸಿದ ಭೀಕರ ದಾಳಿಗೆ ಪ್ರತಿಯಾಗಿ ಅಮೆರಿಕಾ, ಸಿರಿಯಾದಾದ್ಯಂತ ಇರುವ ಇಸ್ಲಾಮಿಕ್ ಸ್ಟೇಟ್ ಅಡಗುತಾಣಗಳ ಮೇಲೆ ಪ್ರತಿದಾಳಿ ನಡೆಸಿದೆ. ಅಮೆರಿಕ ಮತ್ತು ಮಿತ್ರ ಪಡೆಗಳು ಶನಿವಾರ ಬೃಹತ್ ಪ್ರಮಾಣದ ವೈಮಾನಿಕ ದಾಳಿಗಳನ್ನು ನಡೆಸಿವೆ ಎಂದು ಅಮೆರಿಕದ ಕೇಂದ್ರ ಕಮಾಂಡ್ (CENTCOM) ಘೋಷಿಸಿದೆ. ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಿರ್ದೇಶನದಂತೆ ಕಳೆದ ಡಿಸೆಂಬರ್ 19ರಂದು 'ಆಪರೇಷನ್ ಹಾಕಿ ಸ್ಟ್ರೈಕ್' ವಿಶೇಷ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿತ್ತು. ಇದರ ಭಾಗವಾಗಿ ಶನಿವಾರ ಮಧ್ಯಾಹ್ನ ಅಮೆರಿಕನ್ ಪಡೆಗಳು ಮಿತ್ರ ರಾಷ್ಟ್ರಗಳೊಂದಿಗೆ ಸೇರಿ ನಡೆಸಿರುವ ಕಾರ್ಯಾಚರಣೆಯಲ್ಲಿ ಸಿರಿಯಾದ ವಿವಿಧ ಭಾಗಗಳಲ್ಲಿರುವ 70ಕ್ಕೂ ಹೆಚ್ಚು ಐಸಿಸ್ ನೆಲೆಗಳು ಧ್ವಂಸಗೊಂಡಿವೆ. ಕಳೆದ ಡಿ.13ರಂದು ಸಿರಿಯಾದ ಪಾಲ್ಮೈರಾದಲ್ಲಿ ಐಸಿಸ್ ಉಗ್ರರು, ಅಮೆರಿಕ ಮತ್ತು ಸಿರಿಯನ್ ಪಡೆಗಳ ಮೇಲೆ ದಾಳಿ ನಡೆಸಿದ್ದರು. ಈ ದಾಳಿಯಲ್ಲಿ ಅಯೋವಾ ನ್ಯಾಷನಲ್ ಗಾರ್ಡ್‌ನ ಸೈನಿಕರಾದ ಸಾರ್ಜೆಂಟ್ ಎಡ್ಗರ್ ಬ್ರಿಯಾನ್ ಟೊರೆಸ್–ಟೋವರ್, ಸಾರ್ಜೆಂಟ್ ವಿಲಿಯಂ ನ್ಯಾಥಾನಿಯಲ್ ಹೊವಾರ್ಡ್, ನಾಗರಿಕ ಭಾಷಾಂತರಕಾರ ಅಯಾದ್ ಮನ್ಸೂರ್ ಸಾವನ್ನಪ್ಪಿದ್ದರು. ಈ ದಾಳಿಗೆ ಪ್ರತಿಕಾರವಾಗಿ ಈಗ ಬೃಹತ್ ವೈಮಾನಿಕ ದಾಳಿ ನಡೆಸಲಾಗಿದೆ.

ವೃದ್ಧ ವೈದ್ಯ ದಂಪತಿ 'ಡಿಜಿಟಲ್ ಅರೆಸ್ಟ್' ನೆಪದಲ್ಲಿ 14 ಕೋಟಿ ಸುಲಿಗೆ



ನವದೆಹಲಿ: 'ಡಿಜಿಟಲ್ ಅರೆಸ್ಟ್' ನೆಪದಲ್ಲಿ ವೃದ್ಧ ವೈದ್ಯ ದಂಪತಿಯನ್ನು ಬೆದರಿಸಿ, ಬರೋಬ್ಬರಿ 14 ಕೋಟಿ ದೋಚಿರುವ ಘಟನೆ ದೆಹಲಿಯಲ್ಲಿ ನಡೆದಿದೆ.

ದೆಹಲಿಯಲ್ಲಿ ವಾಸಿಸುತ್ತಿರುವ ದಂಪತಿಗೆ ಡಿಜಿಟಲ್ ಅರೆಸ್ಟ್ ನೆಪದಲ್ಲಿ ಕರೆ ಮಾಡಿದ್ದ ಸೈಬರ್ ವಂಚಕರು, ಪೊಲೀಸ್ ಅಧಿಕಾರಿಗಳು ಎಂದು ಹೇಳಿಕೊಂಡು ಬೆದರಿಸಿದ್ದರು. ನೀವು ಅಕ್ರಮ ಪ್ರಕರಣಗಳಲ್ಲಿ ಭಾಗಿಯಾಗಿದ್ದೀರಿ ಎಂದು ಹೇಳಿ, ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ವಿಡಿಯೋ ಕಾಲ್ ಮೂಲಕವೂ ದಂಪತಿಗೆ ಕಿರುಕುಳ ನೀಡಿದ್ದಾರೆ. ದಂಪತಿಯಿಂದ ವಿವಿಧ ಬ್ಯಾಂಕ್ ಖಾತೆಗಳ ಮೂಲಕ ಹಲವು ಬಾರಿ 14 ಕೋಟಿ ವರ್ಗಾಯಿಸಿಕೊಂಡಿದ್ದಾರೆ. ವೈದ್ಯ ದಂಪತಿ ಅಮೆರಿಕಾದಿಂದ ಭಾರತಕ್ಕೆ ಹಿಂದಿರುಗಿದ್ದರು. 2016ರಿಂದ ಕೈಲಾಶ್‌ನಲ್ಲಿ ವಾಸಿಸುತ್ತಿದ್ದರು. ಅವರ ಮಕ್ಕಳು ವಿದೇಶದಲ್ಲಿ ನೆಲೆಸಿದ್ದಾರೆ. ಡಿಸೆಂಬರ್ 24ರಿಂದ ಜನವರಿ 9ರವರೆಗೆ ನಿರಂತರವಾಗಿ ವಿಡಿಯೋ ಕಾಲ್ ಮತ್ತು ದೂರವಾಣಿ ಮೂಲಕ ವೃದ್ಧ ದಂಪತಿಗೆ ಬೆದರಿಕೆ ಹಾಕಿ, ಡಿಜಿಟಲ್ ಅರೆಸ್ಟ್‌ನಲ್ಲಿರಿಸಿದ್ದರು. ಆರೋಪಿಗಳು ವೃದ್ಧ ದಂಪತಿಯ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡು ಹೀಗೆ ವಂಚಿಸಿದ್ದಾರೆ. ಜನವರಿ 9ರಂದು ದಂಪತಿ ತಮಗಾದ ವಂಚನೆಯನ್ನು ಅರಿತು ಪೊಲೀಸರನ್ನು ಸಂಪರ್ಕಿಸಿ, ದೂರು ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇರಾನ್‌ನಲ್ಲಿ ಸರ್ಕಾರಿ ಕಟ್ಟಡಗಳಿಗೆ ಬೆಂಕಿ; ಪ್ರತಿಭಟನಾಕಾರರಿಗೆ ಮರಣದಂಡನೆ ಎಚ್ಚರಿಕೆ



ದುಬೈ: ಇರಾನ್ ಸರ್ಕಾರದ ವಿರುದ್ಧ 2 ವಾರಗಳಿಂದ ನಡೆಯುತ್ತಿರುವ ಪ್ರತಿಭಟನೆ ಕಾವು ಹೆಚ್ಚಾಗಿದ್ದು, ಶನಿವಾರ ಕರಾಜ್ ನಗರದಲ್ಲಿ ಸರ್ಕಾರಿ ಕಟ್ಟಡಗಳಿಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಲಾಗಿದೆ.

ಈ ಮಧ್ಯೆ ಇಂಟರ್‌ನೆಟ್ ಮತ್ತು ದೂರವಾಣಿ ಸಂಪರ್ಕಗಳನ್ನು ಕಡಿತಗೊಳಿಸಿರುವುದರಿಂದ ಇರಾನ್ ಹೊರ ಜಗತ್ತಿನ ಸಂಪರ್ಕ ಕಳೆದುಕೊಂಡಿದೆ. ಆದ್ದರಿಂದ ಅಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಮಾಹಿತಿ ಕಲೆಹಾಕುವುದು ಕಷ್ಟಕರವಾಗಿದೆ. ಅಮೆರಿಕದ ಎಚ್ಚರಿಕೆಗಳ ಹೊರತಾಗಿಯೂ ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ, ಇರಾನ್ ಎಂದಿಗೂ ಹಿಂದೆ ಸರಿಯುವುದಿಲ್ಲ ಎಂದು ಹೇಳಿದ್ದಾರೆ. ಪ್ರತಿಭಟನೆಗಳಲ್ಲಿ ಭಾಗವಹಿಸುವವರನ್ನು 'ದೇವರ ಶತ್ರು' ಎಂದು ಪರಿಗಣಿಸಲಾಗುತ್ತದೆ. ಅವರು ಮರಣದಂಡನೆ ಆರೋಪ ಎದುರಿಸಬೇಕಾಗುತ್ತದೆ. ಗಲಭೆಕೋರರಿಗೆ ಸಹಾಯ ಮಾಡುವವರಿಗೂ ಇದು ಅನ್ವಯವಾಗುತ್ತದೆ ಎಂದು ಇರಾನ್‌ನ ಅಟಾರ್ನಿ ಜನರಲ್ ಮೊಹಮ್ಮದ್ ಮೊವಾಹೇದಿ ಆಜಾದ್ ಬೆದರಿಕೆ ಹಾಕಿದ್ದಾರೆ ಎಂದು ಇರಾನ್ ರಾಜ್ಯ ವಾಹಿನಿ ಪ್ರಸಾರ ಮಾಡಿದೆ. ಪ್ರಾಸಿಕ್ಯೂಟರ್‌ಗಳು ಎಚ್ಚರಿಕೆಯಿಂದ ಮತ್ತು ವಿಳಂಬವಿಲ್ಲದೆ, ದೋಷಾರೋಪಣೆ ನೀಡುವ ಮೂಲಕ ದೇಶದ ಮೇಲೆ ವಿದೇಶಿ ಪ್ರಾಬಲ್ಯ ಬಯಸುವವರ ವಿರುದ್ಧ ವಿಚಾರಣೆ ಮೂಲಕ ನಿರ್ಣಯ ಕೈಗೊಳ್ಳಬೇಕು. ಯಾವುದೇ ಸಹಾನುಭೂತಿ ತೋರದೆ ವಿಚಾರಣೆ ಪ್ರಕ್ರಿಯೆ ನಡೆಸಬೇಕು ಎಂದು ಸೂಚಿಸಲಾಗಿದೆ.

'ಎಕ್ಸ್'ನ ಗ್ರೋಕ್ ಅಶ್ಲೀಲ ಕಂಟೆಂಟ್‌ಗೆ ಸಂಬಂಧಿಸಿದ 600 ಖಾತೆ ರದ್ದು



ನವದೆಹಲಿ: ಎಲಾನ್ ಮಸ್ಕ್ ಮಾಲೀಕತ್ವದ 'ಎಕ್ಸ್'ನ ಗ್ರೋಕ್(Grok)ನ ಅಶ್ಲೀಲ ಕಂಟೆಂಟ್ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಒತ್ತಾಯಕ್ಕೆ ಮಣಿದು, ಕೊನೆಗೂ ವಿವಾದಿತ ಕಂಟೆಂಟ್‌ಗಳನ್ನು ಅಪ್ಲೋಡ್ ಮಾಡುತ್ತಿದ್ದ 600 ಖಾತೆಗಳನ್ನು ಡಿಲೀಟ್ ಮಾಡಲಾಗಿದೆ. ಗ್ರೋಕ್ ಎಐ ಅಶ್ಲೀಲ ವಿಷಯದ ಕುರಿತು ಎಲಾನ್ ಮಸ್ಕ್ ನೇತೃತ್ವದ ಸಾಮಾಜಿಕ ಮಾಧ್ಯಮ ವೇದಿಕೆಗೆ ಐಟಿ ಸಚಿವಾಲಯ ಎಚ್ಚರಿಕೆ ನೀಡಿದ ನಂತರ ಮೈಕ್ರೋ ಬ್ಲಾಗಿಂಗ್ ಸೈಟ್ ಎಕ್ಸ್ ತನ್ನ ತಪ್ಪನ್ನು ಒಪ್ಪಿಕೊಂಡಿದ್ದು, ಭಾರತೀಯ ಕಾನೂನುಗಳನ್ನು ಪಾಲಿಸುವುದಾಗಿ ಭರವಸೆ ನೀಡಿ, ಸುಮಾರು 3,500 ವಿಷಯಗಳ ತುಣುಕುಗಳನ್ನು ನಿರ್ಬಂಧಿಸಿ ಅಶ್ಲೀಲ ಕಂಟೆಂಟ್‌ಗಳನ್ನು ಅಪ್ಲೋಡ್ ಮಾಡುತ್ತಿದ್ದ 600ಕ್ಕೂ ಹೆಚ್ಚು ಖಾತೆಗಳನ್ನು ಡಿಲೀಟ್ ಮಾಡಿದೆ. ಅಲ್ಲದೆ ಭವಿಷ್ಯದಲ್ಲಿ ವೇದಿಕೆಯು ಅಶ್ಲೀಲ ಚಿತ್ರಣವನ್ನು ಅನುಮತಿಸುವುದಿಲ್ಲ ಎಂದು ತಿಳಿಸಿವೆ. ಇದಕ್ಕೂ ಮೊದಲು ಸರ್ಕಾರವು ಎಕ್ಸ್‌ನಿಂದ ಗ್ರೋಕ್ ಎಐಗೆ ಲಿಂಕ್ ಮಾಡಲಾದ ಅಶ್ಲೀಲ ವಿಷಯದ ಮೇಲೆ ತೆಗೆದುಕೊಂಡ ನಿರ್ದಿಷ್ಟ ಕ್ರಮ ಮತ್ತು ಭವಿಷ್ಯದಲ್ಲಿ ಪುನರಾವರ್ತನೆಯನ್ನು ತಡೆಗಟ್ಟುವ ಕ್ರಮಗಳು ಸೇರಿದಂತೆ ವಿವರಗಳನ್ನು ಕೇಳಿತ್ತು. ಜ.2ರಂದು ಗ್ರೋಕ್ ಮತ್ತು ಇತರ ಪರಿಕರಗಳಂತಹ ಎಐ ಆಧಾರಿತ ಸೇವೆಗಳ ದುರುಪಯೋಗದ ಮೂಲಕ ಅಸಭ್ಯ ಮತ್ತು ಲೈಂಗಿಕವಾಗಿ ಸ್ಪಷ್ಟವಾದ ವಿಷಯವನ್ನು ಉತ್ಪಾದಿಸಲಾಗುತ್ತಿರುವುದರ ಬಗ್ಗೆ ಐಟಿ ಸಚಿವಾಲಯವು ಎಕ್ಸ್‌ಗೆ ಕಠಿಣ ಎಚ್ಚರಿಕೆ ನೀಡಿತ್ತು.

ಪ್ರಜಾಪ್ರಭುತ್ವ ಬಲವರ್ಧನೆಗೆ ಸಹಕಾರಿ ಸಂಸ್ಥೆ ಕೊಡುಗೆ ಅಪಾರ: ಯದುವೀರ್

ಮಡಿಕೇರಿ, ಜ.11–ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಯಾಗಿ ಉಳಿಯಲು ಮತ್ತು ಆರ್ಥಿಕ ಕ್ಷೇತ್ರ ಬಲಗೊಳ್ಳಲು ಸಹಕಾರಿ ಸಂಸ್ಥೆಗಳ ಕೊಡುಗೆ ದೊಡ್ಡ ಪ್ರಮಾಣದಲ್ಲಿ ಸಹಕಾರಿಯಾಗಿದೆ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ತಿಳಿಸಿದ್ದಾರೆ.

ನಗರದ ಗೌಡ ಸಮಾಜದಲ್ಲಿ ನಡೆದ ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ 'ಶತಸಂಭ್ರಮ' ಶತಮಾನೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರಿ ಸಂಸ್ಥೆಯೊಂದು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ದೊಡ್ಡ ಮೈಲಿಗಲ್ಲಾಗಿದೆ. ಸಂಘದ ಸ್ಥಾಪಕ ಅಧ್ಯಕ್ಷ ಪಟ್ಟಡ ಎಂ. ಉತ್ತಪ್ಪ ಹಾಗೂ ಸ್ಥಾಪಕ ಕಾರ್ಯದರ್ಶಿ ತೇಲಂಪಡ ಎಂ.ಕಾರ್ಯಪ್ಪ ಅವರುಗಳ ಸೇವೆಯನ್ನು ಸ್ಮರಿಸಿ, ನಾವು ಅವರಿಗೆ ಗೌರವ ಅರ್ಪಿಸಲೇ ಬೇಕಾಗಿದೆ ಎಂದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಡಿಜಿಟಲೀಕರಣ ಕಾರ್ಯ ಈಗಾಗಲೇ 17 ಸಾವಿರದಷ್ಟಾಗಿದ್ದು, 2029ರ ವೇಳೆಗೆ 2ಲಕ್ಷ ಸಂಘಗಳು ಡಿಜಿಟಲೀಕರಣಗೊಳ್ಳಲಿವೆ. ಬೇರೆ ಬೇರೆ ಕ್ಷೇತ್ರದವರಿಗೂ ಸಹಕಾರಿ ಸಂಸ್ಥೆಗಳಲ್ಲಿ ಅವಕಾಶ ನೀಡಲಾಗುತ್ತಿದೆ. ಸಹಕಾರಿ ಚಳುವಳಿಯ ಮೂಲಕ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸಬೇಕು ತಿಳಿಸಿದರು.



ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತದ 'ಶತಸಂಭ್ರಮ' ಶತಮಾನೋತ್ಸವವನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ನೂರು ಹಿರಿಯ ಸಹಕಾರಿಗಳನ್ನು ಸನ್ಮಾನಿಸಿದ ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಹಿರಿಯರಾದ ಪಟ್ಟಡ ಎಂ.ಉತ್ತಪ್ಪ ಹಾಗೂ ತೇಲಂಪಡ ಎಂ.ಕಾರ್ಯಪ್ಪ 1925ರಲ್ಲಿ ತಮ್ಮ ಚಿಂತನೆಯನ್ನು ಅನುಷ್ಠಾನಗೊಳಿಸಿ ಶ್ರಮಿಸಿದ ಪರಿಣಾಮ ಸಂಘ ಇಷ್ಟು ಎತ್ತರಕ್ಕೆ ಬೆಳೆದಿದೆ ಎಂದು ಶ್ಲಾಘಿಸಿದರು.

ಸಂಘದ ಕ್ಯಾಲೆಂಡರ್ ಬಿಡುಗಡೆ ಮಾಡಿದ ವಿಧಾನಪರಿಷತ್ ಸದಸ್ಯ ಎಂ.ಪಿ.ಸುಜಾ ಕುಶಾಲಪ್ಪ, ಶತಸಂಭ್ರಮ ಭವನ ನಿರ್ಮಾಣಕ್ಕೆ ಜುಲೈ ಅಥವಾ ಆಗಸ್ಟ್ ತಿಂಗಳಿನಲ್ಲಿ ಎಂಎಲ್‌ಸಿ ಅನುದಾನದಿಂದ 5 ಲಕ್ಷ ನೀಡುವುದಾಗಿ ಹೇಳಿದರು.

ಸ್ಮರಣ ಸಂಚಿಕೆಯನ್ನು ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ. ನಂಜನಗೌಡ ಬಿಡುಗಡೆ ಮಾಡಿದರು. ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ಹೆಚ್.ಎಸ್. ಚೇತನ್, ಹಿರಿಯರಾದ ಪಟ್ಟಡ ಎ.ಪೂವಣ್ಣ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಸಿ. ನಟೇಶ, ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಲಿ, ಮಂಗಳೂರಿನ ಕೆಐಒಸಿಎಲ್ ಲಿಮಿಟೆಡ್‌ನ ಡಿಜಿಎಂ ತೇಲಪಂಡ ಎಂ. ಕಾರ್ಯಪ್ಪ ಮಾತನಾಡಿದರು.

ಶಾಸಕ ಎ.ಎಸ್.ಪೊನ್ನಣ್ಣ, 'ಶತಸಂಭ್ರಮ ಭವನ' ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಶುಭ ಹಾರೈಸಿದರು. ಕೊಡಗು ಡಿಸಿಸಿ ಬ್ಯಾಂಕ್‌ನ ನಿರ್ದೇಶಕ ಟಿ.ಆರ್. ಶರವಣಕುಮಾರ್, ರಾಜ್ಯ ನೌಕರರ ಸಂಘದ ಹಾಸನ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಹಿರಿಯ ಸಹಕಾರಿ ಹಾಗೂ ವಕೀಲ ಬಸವರಾಜ್ ಸಂಗಪ್ಪನವರ್, ಉದ್ಯಮಿ ನಾಪಂಡ ಮುತ್ತಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣಪ್ಪ ಎಂ., ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್. ಪ್ರಸನ್ನ ಕುಮಾರ್, ಪ್ರೌಢ ಶಾಲಾ ಸಹಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಹೆಚ್.ಜಿ. ಕುಮಾರ್, ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ನಿವೃತ್ತ ಸಿಇಓ ಪಿ.ಎಸ್. ಮುತ್ತಮ್ಮ, ಜಿಲ್ಲಾ ಸಹಕಾರಿ ಸಂಘಗಳ ಉಪನಿಬಂಧಕ ಹೆಚ್.ಡಿ. ರವಿಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ ಉಪನಿರ್ದೇಶಕ ಬಸವರಾಜು, ಕೂಡಿಗೆ ಡಯಟ್‌ನ ಉಪ ನಿರ್ದೇಶಕ ರಾಮಚಂದ್ರ ರಾಜೇ ಅರಸ್, ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಸೋಮವಾರಪೇಟೆಯ ಆರ್.ಪಿ. ಮಹೇಶ್, ಮಡಿಕೇರಿಯ ಎಂ. ಕೃಷ್ಣಪ್ಪ, ವಿರಾಜಪೇಟೆಯ ಟಿ.ಜಿ. ಆನಂದ, ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಉಪಾಧ್ಯಕ್ಷ ಹೆಚ್.ಆರ್. ಮುತ್ತಪ್ಪ, ನಿರ್ದೇಶಕರು, ಸದಸ್ಯರು, ಅಧಿಕಾರಿಗಳು ಹಾಗೂ ಸಹಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಭೂ ಕಂದಾಯ ತಿದ್ದುಪಡಿ ವಿಧೇಯಕ ಕುರಿತ ಬಹಿರಂಗ ಚರ್ಚೆಗೆ ಸಿದ್ದ: ಪೊನ್ನಣ್ಣ



ಭೂ ಕಂದಾಯ ತಿದ್ದುಪಡಿ ವಿಧೇಯಕ ಸಂಬಂಧ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮಡಿಕೇರಿ, ಜ.11–ರಾಜ್ಯ ಸರ್ಕಾರ ಇತ್ತೀಚೆಗೆ ತಂದ ಕರ್ನಾಟಕ ಭೂ ಕಂದಾಯ ತಿದ್ದುಪಡಿ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸಿರುವ ಮಾಜಿ ಶಾಸಕರೊಂದಿಗೆ ಮುಖಾಮುಖಿ ಬಹಿರಂಗ ಚರ್ಚೆಗೆ ಸಿದ್ದವಿರುವುದಾಗಿ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಸವಾಲೊಡ್ಡಿದ್ದಾರೆ.

ರಾಜ್ಯ ಸರ್ಕಾರ ಇತ್ತೀಚೆಗೆ ತಂದ ಭೂ ಕಂದಾಯ ತಿದ್ದುಪಡಿ ವಿಧೇಯಕಕ್ಕೆ ಎಲ್ಲೆಡೆ ಸ್ವಾಗತ ದೊರೆಯುತ್ತಿದೆ. ಬಿಜೆಪಿಯ ಆರ್.ಅಶೋಕ್, ಅರವಿಂದ ಬೆಲ್ಲದ್, ಅರಗ ಜ್ಞಾನೇಂದ್ರರಂತಹ ನಾಯಕರೇ ವಿಧಾನಸಭೆಯಲ್ಲಿ ವಿಧೇಯಕವನ್ನು ಸ್ವಾಗತಿಸಿ ಮಾತನಾಡಿದ್ದಾರೆ. ಹೀಗಿದ್ದೂ ಅವರ ಪಕ್ಷದವರೇ ಆದ ಜಿಲ್ಲೆಯ ಇಬ್ಬರು ಮಾಜಿ ಶಾಸಕರು ಮಾತ್ರ ವಿಧೇಯಕಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಬಿಜೆಪಿ ಅಧಿಕಾರಾವಧಿಯಲ್ಲಿ ಮನೆಮನೆ ಕಂದಾಯ ಕಾರ್ಯಕ್ರಮದ ಮೂಲಕ ಕೊಡಗಿನಲ್ಲಿ ಕೃಷಿಕನ ಸಮಸ್ಯೆಗೆ ಪರಿಹಾರ ದೊರಕಿದ್ದರೆ ಬಹಿರಂಗಪಡಿಸಲಿ. ಅದು ಬಿಟ್ಟು ಸರ್ಕಾರದ ಯಶಸ್ಸನ್ನು ಸುಳ್ಳು ಹೇಳಿಕೆ ಮೂಲಕ ದಾರಿ ತಪ್ಪಿಸುವ ಪ್ರಯತ್ನ ಮಾಡಬಾರದು ಎಂದು ಮಾಜಿ ಶಾಸಕರಿಗೆ ಕಿವಿಮಾತು ಹೇಳಿದರು.

ಶಾಸಕ ಡಾ.ಮಂತರ್ ಗೌಡ ಮಾತನಾಡಿ, ಶಾಸಕರಾಗಿ ಕೊಡಗಿನಾದ್ಯಂತ ಎರಡೂವರೆ ವರ್ಷದಿಂದ ನಾವು ಮಾಡಿರುವ ಕೆಲಸವನ್ನು' ಸಹಿಸಿಕೊಳ್ಳಲಾಗದೆ ಮಾಜಿ ಶಾಸಕರಿಬ್ಬರು ಈ ರೀತಿ ಸುಳ್ಳು ಹೇಳಿದ್ದಾರೆ. ಹಿರಿಯರಾಗಿರುವ ಅವರು ನಮಗೆ ಮಾರ್ಗದರ್ಶನ ಮಾಡಲಿ ಅವರ ಸಲಹೆಯನ್ನು ಸ್ವೀಕರಿಸಲು ಸಿದ್ದ ಎಂದರು.

ಹೈಕೋರ್ಟ್‌ನ ಹಿರಿಯ ವಕೀಲ ಎಚ್.ಎಸ್. ಚಂದ್ರಮೌಳಿ ಮಾತನಾಡಿ, ರೋಗಗ್ರಸ್ಥ ಕಾನೂನಿಗೆ ರಾಜ್ಯದ ಕಾಂಗ್ರೆಸ್ ಸರ್ಕಾರ ವಿಧೇಯಕದ ಮೂಲಕ ಆರೋಗ್ಯವಂತ ಲೇಪನ ನೀಡಿದೆ. ಶಾಸಕರು ಮತ್ತು ಕಂದಾಯ ಸಚಿವರ ಇಚ್ಛಾಶಕ್ತಿಯಿಂದಾಗಿ ಕೊಡಗಿನ ಭೂಹಿಡುವಳಿದಾರರ ಅನೇಕ ವರ್ಷಗಳ ಸಮಸ್ಯೆಗೆ ಕೊನೆಗೂ ಪರಿಹಾರ ದೊರಕಿದಂತಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ತೀತೀರ ಧರ್ಮಜ ಉತ್ತಪ್ಪ, ಮಾಜಿ ಶಾಸಕರಾದ ಸಿ.ಎಸ್. ಅರುಣ್ ಮಾಚಯ್ಯ, ಶಾಂತೆಯಂಡ ವೀಣಾ ಅಚ್ಚಯ್ಯ, ಪ್ರಮುಖರಾದ ಎ.ಹಂಸ, ತೆನ್ನೀರಾ ಮೈನಾ, ಸೂರಜ್ ಹೊಸೂರು ಉಪಸ್ಥಿತರಿದ್ದರು.

ಹರದೂರು ಗ್ರಾಪಂ ಕಚೇರಿಗೆ ಗಡಿಯಾರ ಕೊಡುಗೆ

ಸುಂಟಿಕೊಪ್ಪ, ಜ.11–ಗರಗಂದೂರು ರಾಯಲ್ ಫಾರ್ಮರ್ಸ್ ಕ್ಲಬ್ ವತಿಯಿಂದ ಹರದೂರು ಗ್ರಾ.ಪಂ. ಕಚೇರಿಗೆ ಗಡಿಯಾರವನ್ನು ಕೊಡುಗೆಯಾಗಿ ನೀಡಲಾಯಿತು. ರಾಯಲ್ ಫಾರ್ಮರ್ಸ್ ಕ್ಲಬ್ ಉದ್ಘಾಟನೆಯ ಅಂಗವಾಗಿ ಸಂಘದ ಅಧ್ಯಕ್ಷ ವಿ.ಸಂತೋಷ್, ಪದಾಧಿಕಾರಿಗಳು ಪಂಚಾಯಿತಿ ಕಚೇರಿಗೆ ಭೇಟಿ ನೀಡಿ ಗೋಡೆ ಗಡಿಯಾರವನ್ನು ಅಧ್ಯಕ್ಷೆ ಬೋಜಮ್ಮ ಹಾಗೂ ಪಂಚಾಯಿತಿ ಅಧಿಕಾರಿ ಪೂರ್ಣಿಮಾ ಅವರಿಗೆ ಕೊಡುಗೆಯಾಗಿ ನೀಡಿದರು.

ಅಹಲ್ಯ ನಿಧನ

ನಾಪೋಕ್ಲು, ಜ.11– ಇಲ್ಲಿಗೆ ಸಮೀಪದ ಚೆಯ್ಯಂಡಾಣೆ ನರಿಯಂದಡ ಗ್ರಾಮದ ನಿವಾಸಿ ದಿವಂಗತ ಶ್ಯಾನ್ ಬೊಗರ ಸುಬ್ರಮಣಿ (ರಾಜು) ರವರ ಧರ್ಮಪತ್ನಿ ನಿವೃತ್ತ ಶಿಕ್ಷಕಿ ಅಹಲ್ಯ (77) ಭಾನುವಾರ ನಿಧನರಾದರು.



ಮೃತರು ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮೈಸೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸರ್ವರೂ ಶಿಕ್ಷಿತರಾಗಿ ಸುಶಿಕ್ಷಿತ ಸಮಾಜ ನಿರ್ಮಾಣವಾಗಲಿ

ವಿರಾಜಪೇಟೆ, ಜ.11–ಜೀವನದಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಸರ್ವರೂ ಶಿಕ್ಷಿತರಾಗಬೇಕು ಸುಶಿಕ್ಷಿತ ಸಮಾಜ ನಿರ್ಮಾಣವಾಗಬೇಕು. ವಿದ್ಯಾರ್ಥಿ ಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರ ಬದ್ಧವಾಗಿದೆ ಎಂದು ಶಾಸಕ ಎ.ಎಸ್. ಪೊನ್ನಣ್ಣ ಅಭಿಮತ ವ್ಯಕ್ತಪಡಿಸಿದ್ದಾರೆ.

ತಾಲೂಕು ಕೆದಮುಳ್ಳೂರು ತೋರ ಗ್ರಾಮದಲ್ಲಿ 16 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಶಿಕ್ಷಣ ಜೀವನ ಸುಧಾರಣೆಯ ಘಟ್ಟವಾಗಿದೆ. ಶಿಕ್ಷಣದಿಂದ ಮಾತ್ರ ಸುಶಿಕ್ಷಿತ ಸಮಾಜ ನಿರ್ಮಾಣ ಸಾಧ್ಯ. ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸ ನೀಡುವ ಚಿಂತನೆಯಲ್ಲಿ ಸರ್ಕಾರ ಏಕಲವ್ಯ ವಸತಿ ಶಾಲೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪ್ರಾರಂಭಿಸಿತು. ಹುದಿಕೇರಿ ಮತ್ತು ವಿರಾಜಪೇಟೆ ಸೇರಿ ಎರಡು ವಸತಿ ಶಾಲೆಗೆ ಬೇಡಿಕೆ ಇಟ್ಟಿದ್ದೆವು. ಸುಸಜ್ಜಿತ ಕಟ್ಟಡ ನಿರ್ಮಾಣ ಆಗುವವರೆಗೆ ಸರ್ವೋದಯ ಶಾಲಾ ಕಟ್ಟಡದಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ಇದನ್ನು ಮನಗಂಡು ಸಮಾಜ ಕಲ್ಯಾಣ ಸಚಿವ ಹೆಚ್.ಸಿ. ಮಹದೇವಪ್ಪರಿಗೆ ಮಾಡಿದ ಮನವಿ ಮೇರೆಗೆ ಶಾಲಾ ಕಟ್ಟಡಕ್ಕೆ ಅನುದಾನ ಬಿಡುಗಡೆ ಮಾಡಿದ್ದಾರೆ ಎಂದರು. 2019ರಲ್ಲಿ ಸಂಭವಿಸಿದ ಜಲ ಪ್ರಳಯದಿಂದ ತೋರ ಗ್ರಾಮ ಬೆಳಕಿಗೆ ಬಂದಿತು. ಕುಗ್ರಾಮ ಹೆಸರು ಹೊಂದಿದ್ದ ಗ್ರಾಮ ಇಂದು ಶಾಸಕರ ಮನೋಭಿಲಾಶೆಯಿಂದ ಅಭಿವೃದ್ಧಿಪಥದಲ್ಲಿರುವ ಗ್ರಾಮ ಎಂದೆನಿಸಿಕೊಂಡಿದೆ. ವಸತಿ ಶಾಲೆ ಕಟ್ಟಡಕ್ಕೆ ಅನುದಾನ ಒದಗಿಸಿದ ಶಾಸಕರಿಗೆ ಕೆ.ಡಿ.ಪಿ ಸದಸ್ಯ ಮಾಳೇಟಿರ ಪ್ರಶಾಂತ್ ಉತ್ತಪ್ಪ ಧನ್ಯವಾದ ಅರ್ಪಿಸಿದರು.



ತೋರ ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶಂಕುಸ್ಥಾಪನೆ ನೆರವೇರಿಸಿ ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿದರು.

ಗ್ಯಾರಂಟಿ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ತೀತಿರ ಧರ್ಮಜಾ ಉತ್ತಪ್ಪ, ಕೆದಮುಳ್ಳೂರು ಗ್ರಾ. ಪಂ. ಉಪಾಧ್ಯಕ್ಷ ಎಂ.ಎಂ ಪರಮೇಶ್ವರ, ಸದಸ್ಯರಾದ ಕೆ.ರಾಮಯ್ಯ, ಮೀನಾಕ್ಷಿ, ಪಿ. ಜಯಂತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಎಇಇ ಲಿಂಗರಾಜ್, ಉಪಸ್ಥಿತರಿದ್ದರು. ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಶಿಕ್ಷಕರು, ಗುತ್ತಿಗೆದಾರರು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಗ್ರಾಮಸ್ಥರು ಮೊದಲಾದವರು ಭಾಗವಹಿಸಿದ್ದರು.

ಅಕ್ರಮ ಮರಳು ಸಾಗಾಟ ಮಾಡುತ್ತಿದ್ದ ಟಿಪ್ಪರ್ ವಾಹನಕ್ಕೆ 32 ಸಾವಿರ ರೂ. ದಂಡ

ನಾಪೋಕ್ಲು, ಜ.11– ಪರವಾನಗಿ ಇಲ್ಲದೆ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದ ಟಿಪ್ಪರ್ ವಾಹನವನ್ನು ಪೊಲೀಸರು ಮಾಲು ಸಮೇತ ವಶಕ್ಕೆ ಪಡೆದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರಿಸಿ ದಂಡ ವಿಧಿಸಿದ್ದಾರೆ.



ಪೊಲೀಸರು ಅಕ್ರಮ ಮರಳು ಸಾಗಾಟವಾಗದಂತೆ ಚರಂಡಿ ತೆಗೆಸಿದರು.

ಸಮೀಪದ ಬೇತು ಗ್ರಾಮದ ಕಾರೆಕಾಡು ಬಳಿಯ ಕಾವೇರಿ ನದಿ ದಡದಿಂದ ಟಿಪ್ಪರ್ ವಾಹನದಲ್ಲಿ ಪರವಾನಗಿ ಇಲ್ಲದೆ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಸಬ್ ಇನ್ಸ್‌ಪೆಕ್ಟರ್ ರಾಘವೇಂದ್ರ ಹಾಗೂ ಸಿಬ್ಬಂದಿಗಳು ಮಾಲು ಸಹಿತ ಟಿಪ್ಪರ್ ವಾಹನವನ್ನು ವಶಕ್ಕೆ ಪಡೆದಿದ್ದಾರೆ. ಬಳಿಕ ಪ್ರಕರಣವನ್ನು ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಹಸ್ತಾಂತರಿಸಿದಾಗ ವಾಹನದ ಮಾಲೀಕ ಡಿ.ಕೆ. ನಂದೀಶ್‌ರವರಿಗೆ 32, 320 ರೂ.ಗಳ ದಂಡವನ್ನು ವಿಧಿಸಿ ಕಾನೂನಿನ ಕ್ರಮ ಕೈಗೊಂಡಿದ್ದಾರೆ. ಬಳಿಕ ಕಾವೇರಿ ನದಿ ದಡಕ್ಕೆ ಮರಳು ಸಾಗಾಟಕ್ಕೆ ತೆರಳುವ ರಸ್ತೆಗೆ ಅಡ್ಡಲಾಗಿ ಜೆಸಿಬಿ ಯಂತ್ರವನ್ನು ಬಳಸಿ ಚರಂಡಿ ತೆಗೆಸಿದ ಪೊಲೀಸರು ಮರಳುಗಾರಿಕೆಗೆ ವಾಹನಗಳು ತೆರಳದಂತೆ ಕ್ರಮ ಕೈಗೊಂಡಿದ್ದಾರೆ.

ಮಹಿಳೆಯರ ಸ್ವಾವಲಂಬನೆಗೆ ಧರ್ಮಸ್ಥಳ ಯೋಜನೆ ಸಹಕಾರಿ

ಚಾಮರಾಜನಗರ, ಜ.11– ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಒಂದು ಸರ್ಕಾರ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ತಿಳಿಸಿದರು.

ತಾಲೂಕಿನ ಚಂದಕವಾಡಿಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್, ಸಾಮೂಹಿಕ ಶ್ರೀಲಕ್ಷ್ಮೀ ಪೂಜಾ ಸಮಿತಿ ಚಂದಕವಾಡಿ, ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟಗಳು ಚಂದಕವಾಡಿ ವಲಯ ಇವರ ಸಹಯೋಗದಲ್ಲಿ ಪದ್ಮವಿಭೂಷಣ ಡಾ.ವೀರೇಂದ್ರ ಹೆಗ್ಗಡೆ ಹಾಗೂ ಡಾ.ಹೇಮಾವತಿ ವಿ.ಹೆಗ್ಗಡೆ ಅವರ ಮಾರ್ಗದರ್ಶನದಲ್ಲಿ ನಡೆದ ಸಾಮೂಹಿಕ ಶ್ರೀಲಕ್ಷ್ಮೀ ಪೂಜೆ ಮತ್ತು ಧಾರ್ಮಿಕ ಸಭಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕಳೆದ 14 ವರ್ಷಗಳಿಂದ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಉತ್ತಮವಾಗಿ ಕಾರ್ಯ ನಿರ್ವಹಿಸುವ ಮೂಲಕ ಮಹಿಳೆಯರ ಸ್ವಾವಲಂಬಿ ಬದುಕಿಗೆ ನೆರವಾಗಿದೆ ಎಂದರು.

ದಿ. ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಮನವಿಗೆ ಡಾ.ಡಿ.ವೀರೇಂದ್ರ ಹೆಗಡೆ ಅವರು ಸ್ಪಂದಿಸಿ ಜಿಲ್ಲೆಯಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಆರಂಭಿಸಿದ್ದು, ಅಂದಿನಿಂದ ಪ್ರತಿವರ್ಷ ಮಹಿಳಾ ಸ್ವಸಹಾಯ ಸಂಘಗಳು ಹೆಚ್ಚಾಗುತ್ತಿವೆ. ಒಂದು ಸರ್ಕಾರ ಮಾಡುವ ಕೆಲಸವನ್ನು, ಡಾ.ಡಿ.ವೀರೇಂದ್ರ ಹೆಗ್ಗಡೆ ಅವರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಮಾಡುತ್ತಿದ್ದು, ಸಮಾಜದ ಕಟ್ಟಕಡೆ ವ್ಯಕ್ತಿಗೂ ಯೋಜನೆಗಳನ್ನು ತಲುಪಿಸುತ್ತಿದ್ದಾರೆ. ಮಹಿಳೆಯರ ಸಬಲೀಕರಣ, ಕೆರೆಗಳ ಅಭಿವೃದ್ಧಿ, ಪರಿಸರ, ಕೃಷಿ, ಆರೋಗ್ಯ, ವಿದ್ಯಾರ್ಥಿಗಳ ಶೈಕ್ಷಣಿಕ ನೆರವು, ಆರೋಗ್ಯ ವಿಮೆ, ವಾತ್ಸಲ್ಯ ಮನೆ, ಹೈನುಗಾರಿಕೆಗೆ ಉತ್ತೇಜನ, ಆರ್ಥಿಕ ಸಬಲೀಕರಣ ಮಾಡುತ್ತಿದ್ದಾರೆ ಎಂದರು.



ಕಾರ್ಯಕ್ರಮವನ್ನು ರೋಟರಿ ಅಧ್ಯಕ್ಷ ಕಾಗಲವಾಡಿ ಚಂದ್ರು ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಲಕ್ಷ್ಮೀ ಪೂಜಾ ಸಮಿತಿ ಅಧ್ಯಕ್ಷ ಗೋವಿಂದಶೆಟ್ಟಿ, ಜಿಲ್ಲಾ ಜನಜಾಗೃತಿ ಸದಸ್ಯ ಡಿ.ಪಿ. ಪ್ರಕಾಶ್,ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಎಂಐಎಸ್ ಯೋಜನಾಧಿಕಾರಿ ಆರತಿ, ಯಳಂದೂರು ತಾಲೂಕು ಕ್ಷೇತ್ರ ಯೋಜನಾಧಿಕಾರಿ ಆನಂದ್‌ಗೌಡ, ಬಸವರಾಜು ನಾಯಕ, ರಾಜಸ್ವ ನಿರೀಕ್ಷಕ ಜಯಪ್ಪ ಮಾತನಾಡಿದರು. ಶ್ರೀಕಾಂತ್ ಧಾರ್ಮಿಕ ಉಪನ್ಯಾಸ ನೀಡಿದರು.

ಸಾಮೂಹಿಕ ಶ್ರೀಲಕ್ಷ್ಮೀ ಪೂಜಾ ಸಮಿತಿ ಗೌರವಾಧ್ಯಕ್ಷ ಶಿವನಂಕಾರಪ್ಪ, ಉಪಾಧ್ಯಕ್ಷ ಮಹದೇವ, ಪುಟ್ಟಸ್ವಾಮಿ, ಸಾಕಯ್ಯ, ನಾಗರಾಜು, ಕಾರ್ಯದರ್ಶಿ ಮಂಜುನಾಥ್, ಮಲ್ಲೇಶ್, ಕೋಶಾಧಿಕಾರಿ ಮಹದೇವಸ್ವಾಮಿ, ಆಡಿಟರ್ ಭರತ್, ಮೇಲ್ವಿಚಾರಕ ಎಂ.ಎಂ.ಶಶಿಕುಮಾರ್, ತಾಲೂಕಿನ ಎಲ್ಲಾ ಮೇಲ್ವಿಚಾರಕ ಶ್ರೇಣಿಯ ಕಾರ್ಯಕರ್ತರು, ಸೇವಾ ಪ್ರತಿನಿಧಿಗಳು, ಸಿಎಸ್‌ಸಿ ಸೇವಾದಾರರು, ಚಂದಕವಾಡಿ ಹೋಬಳಿ ಸ್ವ–ಸಹಾಯ ಸಂಘಗಳ ಒಕ್ಕೂಟದ ಪದಾಧಿಕಾರಿಗಳು, ಸದಸ್ಯರು, ಚಂದಕವಾಡಿ ಗ್ರಾಮದ ಎಲ್ಲಾ ಕೋಮಿನ ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ಶಿಕ್ಷಕರು ಮನಸ್ಸು ಒಪ್ಪುವ ರೀತಿ ಕೆಲಸ ಮಾಡಿ

ಬೀಳ್ಕೊಡುಗೆ ಸಮಾರಂಭದಲ್ಲಿ ಡಿಡಿಪಿಐ ಚಂದ್ರ ಪಾಟೀಲ್

ಕೊಳ್ಳೇಗಾಲ, ಜ.11–ಶಿಕ್ಷಕರು ಪ್ರತಿಫಲಾಪೇಕ್ಷೆ ಇಲ್ಲದೇ ಕೆಲಸ ಮಾಡಿದರೆ ಪ್ರಶಸ್ತಿ, ಪುರಸ್ಕಾರಗಳು ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಅದರಿಂದ ಪ್ರಶಸ್ತಿಗಾಗಿ ಕೆಲಸ ಮಾಡಬೇಡಿ. ಮನಸ್ಸು ಒಪ್ಪುವ ರೀತಿ ಕೆಲಸ ಮಾಡಿ ಎಂದು ಚಾಮರಾಜನಗರ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಚಂದ್ರಪಾಟೀಲ್ ತಿಳಿಸಿದರು.



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ ಅವರು ವರ್ಗಾವಣೆಗೊಂಡ ಹಿನ್ನೆಲೆಯಲ್ಲಿ ಪಟ್ಟಣದ ವೆಂಕಟೇಶ್ವರ ಮಹಲ್‌ನಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ನಾನು ಕೊಳ್ಳೇಗಾಲ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ರಾಷ್ಟ್ರ ಪ್ರಶಸ್ತಿ ಗಳಿಸಲು ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಾಗಿದ್ದ ರಂಗಸ್ವಾಮಿ ಹಾಗೂ ಹಿತೈಷಿಗಳ ಮಾರ್ಗದರ್ಶನ ಸಹಕಾರಿಯಾಗಿತ್ತು. ಅಲ್ಲದೇ 198ನೇ ಸ್ಥಾನದಲ್ಲಿದ್ದ ಕೊಳ್ಳೇಗಾಲ ಬ್ಲಾಕ್ ಅನ್ನು ರಾಜ್ಯಕ್ಕೆ 4ನೇ ಸ್ಥಾನಕ್ಕೆ ತರುವಲ್ಲಿ ರಂಗಸ್ವಾಮಿ ಅವರು ಅಕ್ಷರ ದಾಸೋಹದ ಜೊತೆ ಕೈಜೋಡಿಸಿದ್ದು ಹಾಗೂ ಶಿಕ್ಷಕರ ಸಹಕಾರ ಕಾರಣ ಎಂದು ಸ್ಮರಿಸಿದರು.

ರಂಗಸ್ವಾಮಿ ಅವರು 5 ಡಿಗ್ರಿ ಪಡೆದ ಪ್ರತಿಭಾವಂತರು. ಕ್ರಿಯಾಶೀಲ ಕೆಲಸಗಾರ, 6 ವರ್ಷಗಳ ಕಾಲ ಕೊಳ್ಳೇಗಾಲ, ಹನೂರು ತಾಲೂಕಿನಲ್ಲಿ ಅಕ್ಷರ ದಾಸೋಹಕ್ಕೆ ಕಳಂಕ ಬಾರದ ರೀತಿ ಕೆಲಸ ಮಾಡಿದ್ದಾರೆ. ಜೊತೆಗೆ ಶಿಕ್ಷಣ ಇಲಾಖೆಯ ಕಲಿಕಾ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಜೀವನದಲ್ಲಿ ಹಣ, ಅಧಿಕಾರ, ಶ್ರೀಮಂತಿಕೆ ಶಾಶ್ವತವಲ್ಲ. ಕಳೆದ ಪ್ರೀತಿಯ ದಿನಗಳಷ್ಟೇ ಶಾಶ್ವತ ಎಂಬುದಕ್ಕೆ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ ಉದಾಹರಣೆ. ಅವರೊಬ್ಬ ಸ್ನೇಹಜೀವಿ, ಶತ್ರುಗಳಿಗೂ ಒಳ್ಳೆಯದ್ದು ಬಯಸುವ ವ್ಯಕ್ತಿತ್ವ, ಅವರೊಟ್ಟಿಗೆ ಕೆಲಸ ಮಾಡಿದ ಪುಣ್ಯ ನನ್ನದು ಎಂದರು.

ತಾಪಂ ಇಓ ಗುರುಶಾಂತಪ್ಪ ಬೆಳ್ಳುಂಡಗಿ ಮಾತನಾಡಿದರು. ಈ ವೇಳೆ ಕ್ಷೇತ್ರ ಶಿಕ್ಷಣಾಧಿಕಾರಿ ಮಂಜುಳ, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೋಸೆಫ್ ಅಲೆಗ್ಸಾಂಡರ್, ಪ್ರಧಾನ ಕಾರ್ಯದರ್ಶಿ ಚಿಕ್ಕರಾಜು, ದಿವಾಕರ್, ಹರೀಶ, ದೈಹಿಕ ಶಿಕ್ಷಣಾಧಿಕಾರಿ ಸ್ಟೀವನ್, ವಾಣಿಜ್ಯ ತೆರಿಗೆ ಇಲಾಖೆಯ ನಾಗರಾಜು, ಬಸವರಾಜು, ಸಿದ್ದರಾಜು, ವಾಸು ಇನ್ನಿತರರಿದ್ದರು.

ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಸಮಾನತೆ ಸಾಧ್ಯ

ಮಾಜಿ ಸಂಸದ ಎ.ಸಿದ್ದರಾಜು



ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಮಾಜಿ ಸಂಸದ ಎ.ಸಿದ್ದರಾಜು ಭೂಮಿ ಪೂಜೆ ನೆರವೇರಿಸಿದರು.

ಗುಂಡ್ಲುಪೇಟೆ, ಜ.11(ಸೋಮ್.ಜಿ)– ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಸಮಾನತೆ ಸಾಧ್ಯ ಎಂದು ಮಾಜಿ ಸಂಸದ ಎ.ಸಿದ್ದರಾಜು ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದ ಮುಂಭಾಗ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಮಾಜದಲ್ಲಿ ಹಾಸು ಹೊಕ್ಕಾಗಿದ್ದ ಅಸಮಾನತೆ ನಿವಾ ರಿಸಿ ಎಲ್ಲರಿಗೂ ಸಮಾನತೆ ದೊರಕಬೇಕಾದರೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಅಂಬೇಡ್ಕರ್ ಬಲವಾಗಿ ನಂಬಿದ್ದರು. ಅವರು ಸಂವಿಧಾನ ರಚನೆ ವೇಳೆ ತಮ್ಮ ದೂರದೃಷ್ಟಿಯ ಪರಿಣಾಮ ಸಮಾಜದ ಶೋಷಿತ ವರ್ಗದ ಜನರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗಿದೆ. ಹೆಣ್ಣು ಗಂಡೆಂಬ ಭೇದವಿಲ್ಲದೆ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವುದರಿಂದ ಹಿಂದುಳಿದ ವರ್ಗಗಳ ಸಮುದಾಯ ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ನಾವು 21ನೇ ಶತಮಾನದಲ್ಲಿ ಇದ್ದರೂ ಸಹ ಇನ್ನು ದಬ್ಬಾಳಿಕೆ ತಪ್ಪಿಲ್ಲ. ಹಳ್ಳಿಗಳಲ್ಲಿ ಇನ್ನೂ ಬಹಿಷ್ಕಾರ ಹಾಕುವ ಪದ್ಧತಿ ಜಾರಿಯಲ್ಲಿದ್ದು, ಅದನ್ನು ಹೋಗಲಾಡಿಸಬೇಕು ಎಂದರು.

ಮುಖಂಡರಾದ ಗೋಪಾಲ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಜಿಪಂ ಮಾಜಿ ಸದಸ್ಯರಾದ ಕೆ.ಎಸ್. ಮಹೇಶ್, ಬಿ.ಕೆ. ಬೊಮ್ಮಯ್ಯ, ಶಿವಸ್ವಾಮಿ, ಮುಖಂಡರಾದ ಮಲ್ಲರಾಜು, ಸೋಮಣ್ಣ, ಚಂದ್ರಶೇಖರ್, ಶಿವ ಕುಮಾರ್, ರಾಜು, ಮಧುಸೂದನ್, ಕೆಂಪರಾಜು, ರಾಜುಕುಮಾರ್, ಗೋವಿಂದ ರಾಜು, ಸಂಪತ್ತು, ರಾಜಗೋಪಾಲ್ ಸೇರಿ ಹಲವರಿದ್ದರು.

ಕಾಡಂಚಿನ ಗ್ರಾಮಗಳಲ್ಲಿ ಮೂಲ ಸೌಕರ್ಯಕ್ಕೆ ಆದ್ಯತೆ

ಶಾಸಕ ಸಿ.ಪುಟ್ಟರಂಗಶೆಟ್ಟಿ

ಚಾಮರಾಜನಗರ, ಜ.11– ತಾಲೂಕಿನ ಪುಣಜನೂರು ಗ್ರಾಪಂ ವ್ಯಾಪ್ತಿಯ ಬೂದಿಪಡಗ, ಕುಳ್ಳೂರು ಗ್ರಾಮಗಳ ಕಾಲೋನಿಗಳಲ್ಲಿ ಎಸ್‌ಇಪಿ, ಟಿಎಸ್‌ಪಿ ಯೋಜನೆ ಅನುದಾನ 1.5 ಕೋಟಿ ರೂ. ವೆಚ್ಚದ ಹೈಮಾಸ್ಟ್, ಸೋಲಾರ್ ದೀಪ ಅಳವಡಿಕೆ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಕಾಡಂಚಿನ ಗ್ರಾಮಗಳ ಜನರಿಗೆ ಕುಡಿಯುವ ನೀರು, ರಸ್ತೆ, ಚರಂಡಿ ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಇದೀಗ ಹಾಡಿಗಳ ಕಾಲೋನಿಗಳಿಗೆ ಹೈಮಾಸ್ಟ್ ಸೇರಿದಂತೆ ಸೋಲಾರ್ ಲೈಟ್ ಅಳವಡಿಸುವ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ ಎಂದರು. ಸರ್ಕಾರ ಗಿರಿಜನರ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಪೋಷಕರು ಸರ್ಕಾರದ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಂಡು ತಮ್ಮ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ಸಲಹೆ ನೀಡಿದರು.

ಕುಳ್ಳೂರು ಗ್ರಾಮಕ್ಕೆ ಕಳೆದ ಒಂದು ವಾರದಿಂದ ಬಸ್ ಬಾರದೇ ಶಾಲಾ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗಿದೆ. ಕೂಡಲೇ ಬಸ್ ಸಂಚಾರ ಆರಂಭಿಸುವಂತೆ ಗ್ರಾಮಸ್ಥರು ಶಾಸಕರಿಗೆ ಮನವಿ ಮಾಡಿದರು.


ಕೂಡಲೇ ಶಾಸಕರು ಚಾಮರಾಜನಗರ ಸಾರಿಗೆ ವಿಭಾಗೀಯ ನಿಯಂತ್ರಣಾಧಿಕಾರಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಗ್ರಾಮಕ್ಕೆ ಬಸ್ ಸಂಚಾರ ಆರಂಭಿಸುವಂತೆ ಸೂಚಿಸಿದರು.



ಹೈಮಾಸ್ಟ್, ಸೋಲಾರ್ ದೀಪ ಅಳವಡಿಕೆ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ಈ ವೇಳೆ ಪುಣಜನೂರು ಗ್ರಾಪಂ ಉಪಾಧ್ಯಕ್ಷ ರಾಚಪ್ಪ, ಪಿಎಸಿಎಸ್ ಅಧ್ಯಕ್ಷ ಮಣಿ ನಾಯಕ, ಮುಖಂಡರಾದ ಶಾಮೀರ್ ಪಾಷಾ, ಜಡೆಯಪ್ಪ, ಉಲ್ಲೇಶ್ ನಾಯಕ, ಸಣ್ಣಿಕ್ಕಿಗೌಡ, ಮಹದೇವನಾಯಕ, ಗೋವಿಂದರಾಜು, ಕೆಆರ್‌ಐಡಿಎಲ್ ಇಂಜಿನಿಯರ್ ಮಹದೇವಪ್ರಸಾದ್, ಲಂಬಾಣಿ ತಾಂಡ ಅಭಿವೃದ್ಧಿ ನಿಗಮದ ಇಂಜಿನಿಯರ್ ಯಶವಂತ್, ಗ್ರಾಮಸ್ಥರು ಹಾಜರಿದ್ದರು.

ಶ್ರೀಚಾಮುಂಡೇಶ್ವರಿಗೆ ವಿಶೇಷ ಪೂಜೆ



ಗುಂಡ್ಲುಪೇಟೆ, ಜ.11(ಸೋಮ್.ಜಿ)– ಧನುರ್ಮಾಸ ಅಂಗವಾಗಿ ಪಟ್ಟಣದ ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ಅಮ್ಮನವರಿಗೆ ಅಭಿಷೇಕ ಹಾಗೂ ಭಸ್ಮ ಮತ್ತು ಗಂಧದ ಪುಡಿಯಿಂದ ಅರ್ಚಕ ಶಂಕರನಾರಾಯಣ ಜೋಯಿಸ್ ವಿಶೇಷ ಅಲಂಕಾರ ಮಾಡಿ ವಿಶೇಷ ಪೂಜೆ ನೆರವೇರಿಸಿದರು. ಇದೇ ವೇಳೆ ಭಾವಸಾರ ಕ್ಷತ್ರೀಯ ಮಂಡಳಿಯಿಂದ ವಿಶೇಷ ಪೂಜೆ ಮತ್ತು ಪ್ರಸಾದ ವಿತರಿಸಲಾಯಿತು.

ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಅಸ್ತ್ರ

ಚಾಮರಾಜನಗರ: ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಅಸ್ತ್ರವಾಗಿದೆ ಎಂದು ಕೆಇಬಿ ಲೆಕ್ಕಾಧಿಕಾರಿ ಎನ್.ಮಹೇಶ್ ತಿಳಿಸಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ನಡೆದ ಜಿಲ್ಲಾ ಉಪ್ಪಾರ ಯುವಕರ ಸಂಘದ 8ನೇ ವಾರ್ಷಿಕೋತ್ಸವ, 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಎಲ್ಲಾ ಸಮುದಾಯಗಳು ಶಿಕ್ಷಣಕ್ಕೆ ಒತ್ತು ನೀಡುವ ಮೂಲಕ ಸಮಾಜದ ಮುಖ್ಯವಾಹಿನಿಗೆ ಬಂದಿವೆ. ಉಪ್ಪಾರ ಸಮುದಾಯದಲ್ಲಿ ಕೃಷಿಕರು, ಸರ್ಕಾರಿ ನೌಕರರು ವಿರಳ. ಸಣ್ಣಪುಟ್ಟ ವ್ಯಾಪಾರ, ಕೂಲಿ ಮಾಡುತ್ತಿರುವ ಸಮುದಾಯ ಮೇಲೆ ಬರಲು ಶಿಕ್ಷಣವೇ ಅಸ್ತ್ರವಾಗಿರುವುದರಿಂದ ಪ್ರತಿಯೊಬ್ಬರೂ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದರು.

ಹರದನಹಳ್ಳಿ ಗಡಿ ಯಜಮಾನ ಜಯಸ್ವಾಮಿ ಮಾತನಾಡಿ, ಸಮುದಾಯದವರು ಮೌಢ್ಯದಿಂದ ದೂರವಿರಬೇಕು. ಬಾಲ್ಯವಿವಾಹ ತಡೆಗಟ್ಟಿ ಶಿಕ್ಷಣ ಕೊಡಿಸಬೇಕು ಎಂದರು.

ಸಂಘದ ಅಧ್ಯಕ್ಷ ಜಯಕುಮಾರ್ ಮಾತನಾಡಿದರು. ಅಯ್ಯನ ಸರಗೂರು ಮಠದ ಶ್ರೀಮಹದೇವಸ್ವಾಮಿ ಸ್ವಾಮೀಜಿ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು. ಇದೇ ವೇಳೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಬಸವರಾಜು, ಯಳಂದೂರು ತಾಲೂಕು ಅಧ್ಯಕ್ಷ ನಾಗರಾಜು, ಪತ್ರಕರ್ತ ಮಂಜುಕುಮಾರ್, ಪರಿಸರ ಪ್ರೇಮಿ ಸಿ.ಎಂ. ವೆಂಕಟೇಶ್, ಡಾ. ಗಿರಿದರ್ಶನ್, ಶಿಕ್ಷಕ ರಾಜು, ಎಎಸ್‌ಐ ಗಳಾದ ಬಂಗಾರು, ಬಾಗಳಿ ಮಹದೇವಸ್ವಾಮಿ, ಮಂಜುನಾಥ್ ಇತರರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ ಸರ್ಕಾರಿ ಐಟಿಐ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಟಿ.ಎ.ರಂಗಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಂಶುಪಾಲ ಎಂ.ಸೋಮಣ್ಣ ಸಂಘದ ಉಪಾಧ್ಯಕ್ಷ ಬಿ.ಸ್ವಾಮಿ, ಪ್ರಧಾನ ಕಾರ್ಯದರ್ಶಿ ಸಿ.ಎಸ್. ನಾಗರಾಜು, ಶಿವಕುಮಾರ್, ಕೆ.ಮಹದೇವಸ್ವಾಮಿ, ಮಹೇಶ್, ಶ್ರೀನಿವಾಸ ಇತರರಿದ್ದರು.



ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು.

ಜ.17, 18ರಂದು ಪುರಂದರದಾಸರ ಆರಾಧನಾ ಸಂಗೀತೋತ್ಸವ

ಬೆಂಗಳೂರು, ಜ.11– ಕಲಬುರಗಿಯ ದಾಸ ಸೌರಭ, ಶಿವಮೊಗ್ಗದ ಶ್ರೀ ಗುರು ಗುಹ ಸಂಗೀತ ಮಹಾವಿದ್ಯಾಲಯ ಮತ್ತು ಅನುಗ್ರಹ ಸಂಗೀತ ಮಹಾ ವಿದ್ಯಾಲಯ, ಶುಭ ಸಂತೋಷ್ ಅಕಾಡೆಮಿ, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹ ಯೋಗದಲ್ಲಿ ಜ.17 ಮತ್ತು 18 ರಂದು ಪುರಂದರದಾಸರ ಆರಾಧನಾ ಸಂಗೀತೋತ್ಸವವನ್ನು ಗಾನ–ಜ್ಞಾನ ಯಜ್ಞದೊಂದಿಗೆ ಏರ್ಪಡಿಸಲಾಗಿದೆ.




ಜ.17 ಶನಿವಾರ ಸಂಜೆ 6.30ಕ್ಕೆ ಭುವನಗಿರಿ ಆಶ್ರಮದ ಶ್ರೀ ಸುವಿದ್ಯೇಂದ್ರ ತೀರ್ಥ ಶ್ರೀಪಾದರು ಸಭಾ ಕಾರ್ಯಕ್ರಮ ಉದ್ಘಾಟಿಸುವರು. ಹಿರಿಯ ಹರಿದಾಸ ಸಾಹಿತ್ಯ ಸಂಶೋಧಕ ವಿಜಯಪುರದ ಡಾ.ಕೃಷ್ಣ ಕೊಲ್ಹಾರ ಕುಲಕರ್ಣಿ ಅವರಿಗೆ ಶ್ರೀ ಮಧ್ವ ಪುರಂದರ ಪ್ರಶಸ್ತಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಜಯತೀರ್ಥ ವಿದ್ಯಾಪೀಠದ ಕುಲಪತಿ ಪಂ.ಗುತ್ತಲ್ ರಂಗಾಚಾರ್, ಪ್ರಾಂಶುಪಾಲ ಡಾ.ಸತ್ಯಧ್ಯಾನಾಚಾರ್ ಕಟ್ಟಿ ಉತ್ತರಾದಿ ಮಠದ ಕಾರ್ಯನಿರ್ವಹಣಾಧಿಕಾರಿ ಪಂ. ವಿದ್ಯಾಧೀಶಾಚಾರ್ಯ ಗುತ್ತಲ್, ಗಾಯನ ಸಮಾಜದ ಅಧ್ಯಕ್ಷ ಡಾ.ಎಂ.ಆರ್.ವಿ. ಪ್ರಸಾದ್, ಹಿರಿಯ ಹಿಂದೂಸ್ತಾನಿ ಗಾಯಕ ನಿವೃತ್ತ ಐಎಎಸ್ ಅಧಿಕಾರಿ ಡಾ.ಮುದ್ದು ಮೋಹನ್ ಭಾಗವಹಿಸುವರು.

ಸಾಧಕೋತ್ತಮರಾದ ಕಲಬುರಗಿಯ ದಾಸಸಾಹಿತ್ಯ ಸಂಶೋಧಕ ಡಾ.ಸ್ವಾಮಿ ರಾವ್ ಕುಲಕುರ್ಣೀ, ಅಧ್ಯಾತ್ಮ ಚಿಂತಕ ಡಾ.ರವೀಂದ್ರ ಕುಷ್ಟಗಿ ಮತ್ತು ಹಿರಿಯ ಪತ್ರಕರ್ತ ರಾಘವೇಂದ್ರ ಗಣಪತಿ ಅವರಿಗೆ ಹರಿದಾಸ ಅನುಗ್ರಹ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಅಂದು ಕಾರ್ಯಕ್ರಮ ಆರಂಭದಲ್ಲಿ ಮಧ್ಯಾಹ್ನ 3.30ರಿಂದ ಭಜನಾ ಕಾರ್ಯಕ್ರಮ ಹಾಗೂ 4.45 ರಿಂದ ಶುಭ ಸಂತೋಷ್ ಅಕಾಡೆಮಿಯ ಶಿಷ್ಯವೃಂದದಿಂದ ವಿದುಷಿ ಶುಭಾ ಸಂತೋಷ್ ನೇತೃತ್ವದಲ್ಲಿ ಗೋಷ್ಠಿ ಗಾಯನ ನಡೆಯಲಿದೆ.

ಜ.18 ಭಾನುವಾರ ಅಮಾವಾಸ್ಯೆ ಬೆಳಿಗ್ಗೆ 9.00ರಿಂದ ವಿದುಷಿ ಲಕ್ಷ್ಮಿ ಭಾಸ್ಕರ್ ನೇತೃತ್ವದಲ್ಲಿ ಸರಸ್ವತಿ ಸಂಗೀತ ಶಾಲಾ ಮತ್ತು ವಿದುಷಿ ಚಂದ್ರಿಕಾ ಬದರಿನಾಥ್ ನೇತೃತ್ವದ ಶಾರದ ಗಾನಾಮೃತದ ಶಿಷ್ಯವೃಂದದಿಂದ ಪುರಂದರದಾಸರ ಕೃತಿಗಳ ಗೋಷ್ಠಿ ಗಾಯನದೊಂದಿಗೆ ಪುರಂದರ ದಾಸರ ಬೃಹತ್ ಶಿಲಾ ವಿಗ್ರಹಕ್ಕೆ ವಿಶೇಷ ಅಭಿಷೇಕ ನಂತರ ಸಂಜೆ 6.00 ರವರೆಗೆ 9 ವಿವಿಧ ಭಜನಾ ಮಂಡಲಿ ಗಳ ವತಿಯಿಂದ ನಿರಂತರ ಶ್ರೀ ಪುರಂದರ ದಾಸರ ಕೃತಿಗಳ ಭಜನಾ – ನಾಮ ಸಂಕೀರ್ತನ ನಡೆಯಲಿದೆ.

ಸಂಜೆ 6 ರಿಂದ ಶ್ರೀ ಗುರುಗುಹ ಸಂಗೀತ ಮಹಾವಿದ್ಯಾಲಯ, ಶ್ರೀ ಅನುಗ್ರಹ ಸಂಗೀತ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ವಿದ್ವಾನ್ ಶೃಂಗೇರಿ ಹೆಚ್ ಎಸ್ ನಾಗರಾಜ್ ಮತ್ತು ವಿದ್ವಾನ್ ಜೆ.ಎಸ್. ಶ್ರೀಕಂಠಭಟ್ ನೇತೃತ್ವದಲ್ಲಿ ಪುರಂದರದಾಸರ ನವರತ್ನಮಾಲಿಕೆ ಕೃತಿಗಳ ಗೋಷ್ಠಿ ಗಾಯನ; ವಿದುಷಿ ರಮ್ಯ ಮುರಳಿ ಮತ್ತು ಕೃಪಾ ಶ್ರೀಕಾಂತ್ ಅವರಿಗೆ ಹರಿದಾಸ ಅನುಗ್ರಹ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಲಾಗುವುದು. ಎಂದು ಕಾರ್ಯಕ್ರಮದ ಆಯೋಜಕರಾದ ಶ್ರೀನಿವಾಸ ಉತ್ಸವ ಬಳಗದ ಅಧ್ಯಕ್ಷ ಡಾ. ಟಿ. ವಾದಿರಾಜ್ ಮತ್ತು ಮಹಾ ಪೋಷಕರಾದ ಕೆ.ಆರ್. ಗುರುರಾಜಾರಾವ್ ತಿಳಿಸಿರುತ್ತಾರೆ. ಹೆಚ್ಚಿನ ವಿವರಗಳಿಗೆ ಮೊ. 98861 08550 ಸಂಪರ್ಕಿಸಬಹುದು.

ಶ್ರೀಗಳ ಆಶೀರ್ವಾದ



ಹಲವಾರು ಕಾರ್ಯಕ್ರಮಗಳ ನಿಮಿತ್ತ ಮೈಸೂರಿಗೆ ಆಗಮಿಸಿದ ಉಡುಪಿಯ ಶ್ರೀ ಪಲಿಮಾರು ಪೀಠದ ಸಂಸ್ಥಾನಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರನ್ನು ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಅಖಿಲ ಭಾರತ ಬ್ರಾಹ್ಮಣ ಏಕೀಕೃತ ಪರಿಷತ್‌ನ ರಾಜ್ಯಾಧ್ಯಕ್ಷ ಎನ್.ಎಂ.ನವೀನ್‌ಕುಮಾರ್ ಭೇಟಿ ಮಾಡಿ, ಅವರ ಆಶೀರ್ವಾದ ಪಡೆದರು. ಎಕೆಬಿಎಂಎಸ್ ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಎಸ್.ಬಿ.ವಾಸುದೇವ ಮೂರ್ತಿ, ವಿಪ್ರ ಮುಖಂಡರಾದ ರವಿ ಶಾಸ್ತ್ರಿ, ಪ್ರವೀಣ್ ಕುಮಾರ್, ಆರ್.ಎಸ್.ಸತ್ಯನಾರಾಯಣ, ಪುರಾಣಿಕ್ ಹಾಗೂ ಇತರರು ಇದ್ದರು.

ಬಿಕಾಂ, ಬಿಬಿಎ ವಿದ್ಯಾರ್ಥಿಗಳಿಗಾಗಿ ಓರಿಯಂಟೇಶನ್ ಕಾರ್ಯಕ್ರಮ



ಮೈಸೂರು, ಜ. 11– ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಇತ್ತೀಚೆಗೆ ಮಹತ್ವದ ಶೈಕ್ಷಣಿಕ ಕಾರ್ಯಕ್ರಮ ಆಯೋಜಿಸಿತ್ತು. ಕಾಲೇಜಿನ ವಾಣಿಜ್ಯ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಿಂದ ದ್ವಿತೀಯ ಮತ್ತು ತೃತೀಯ ವರ್ಷದ ಬಿಕಾಂ ಹಾಗೂ ಬಿಬಿಎ ವಿದ್ಯಾರ್ಥಿಗಳಿಗಾಗಿ ಬ್ಯಾಂಕಿಂಗ್ ಫೈನಾನ್ಸ್ ಮತ್ತು ಇನ್ಶೂರೆನ್ಸ್ ಪ್ರಮಾಣಪತ್ರ ಕಾರ್ಯಕ್ರಮದ ಓರಿಯಂಟೇಶನ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಬೆಂಗಳೂರಿನ ಬಜಾಜ್ ಫಿನ್‌ಸರ್ವ್ ಲಿಮಿಟೆಡ್‌ನ ಹಿರಿಯ ಸಲಹೆಗಾರರು ಮತ್ತು ಬ್ಯಾಂಕಿಂಗ್ ತರಬೇತುದಾರರಾದ ದೀಪಕ್ ಡೇನಿಯಲ್ ಮಾತನಾಡುತ್ತಾ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರದಲ್ಲಿ ನುರಿತ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆ ಇದೆ. ಈ ಹಿನ್ನೆಲೆಯಲ್ಲಿ ಬಜಾಜ್ ಫಿನ್‌ಸರ್ವ್ ತನ್ನ ಸಾಮಾಜಿಕ ಹೊಣೆಗಾರಿಕೆಯ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಈ ತರಬೇತಿಯನ್ನು ರೂಪಿಸಿದೆ ಎಂದು ತಿಳಿಸಿದರು. ಬ್ಯಾಂಕಿಂಗ್, ಫೈನಾನ್ಸ್ ಮತ್ತು ಇನ್ಶೂರೆನ್ಸ್ ಪ್ರಮಾಣಪತ್ರ ಕಾರ್ಯಕ್ರಮ ಕುರಿತು ದೃಷ್ಟಿಕೋನ ಸಭೆಯನ್ನು ಆಯೋಜಿಸಿದ್ದರಿಂದ ಕಾರ್ಯಕ್ರಮವನ್ನು ಉದ್ದೇಶಿಸಿ ಕೋರ್ಸ್‌ನ ಅವಧಿ, ಮೌಲ್ಯಮಾಪನ ವಿಧಾನ ಹಾಗೂ ಈ ಪ್ರಮಾಣಪತ್ರದಿಂದ ದೊರೆಯುವ ಉದ್ಯೋಗಾವಕಾಶಗಳ ಬಗ್ಗೆ ಅವರು ವಿಸ್ತಾರವಾಗಿ ಮಾಹಿತಿ ನೀಡಿದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ದೇವರಾಜು ಟಿ.ಎಂ. ಮಾತನಾಡಿ, ಉದ್ಯಮದ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಇಂತಹ ತರಬೇತಿಗಳು ಪೂರಕವಾಗಿವೆ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವರಿಕೆ ಮಾಡಿದರು.

ವೇದಿಕೆಯಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಎಚ್.ಆರ್.ತಿಮ್ಮೇಗೌಡ, ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥ ಡಾ. ದೇವರಾಜು ಟಿ.ಎಂ., ಐಕ್ಯೂಎಸಿ ಸಂಯೋಜಕಿ ಶ್ರೀಮತಿ ಗೀತಾ ಡಿ. ಹಾಗೂ ಕಾರ್ಯಕ್ರಮದ ಸಂಯೋಜಕ ಸುನೀಲ್ ಎನ್ ಉಪಸ್ಥಿತರಿದ್ದರು.

ಸಾಧಕರಿಗೆ ಸನ್ಮಾನ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಮೈಸೂರು ಜಿಲ್ಲಾ ಉಪ್ಪಾರ ಸಂಘದ ವತಿಯಿಂದ ಸಮುದಾಯದ ಸಾಧಕರನ್ನು ಮಾಜಿ ಸಚಿವರೂ ಆದ ಕರ್ನಾಟಕ ರಾಜ್ಯ ಉಪ್ಪಾರ ಸಂಘದ ಅಧ್ಯಕ್ಷ ಸಿ.ಪುಟ್ಟರಂಗಶೆಟ್ಟಿ ಸನ್ಮಾನಿಸಿದರು.

ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್‌ಶಿಪ್; ಸಾಧಕರಿಗೆ ಸನ್ಮಾನ



ಮೈಸೂರು, ಜ.11(ಎಂಕೆ)– ಮೈಸೂರಿನ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ ವತಿಯಿಂದ 20ನೇ ರಾಷ್ಟ್ರಮಟ್ಟದ ಕರಾಟೆ ಚಾಂಪಿಯನ್ ಶಿಪ್ ಪಂದ್ಯಾವಳಿ ಭಾನುವಾರ ನಡೆಯಿತು.

ವಿವಿಧ ವಿಭಾಗಳಲ್ಲಿ ನಡೆದ ಕರಾಟೆ ಪಂದ್ಯಾವಳಿಯಲ್ಲಿ 500ಕ್ಕೂ ಹೆಚ್ಚು ಕರಾಟೆ ಪಟುಗಳು ಗೆಲುವಿನ ಸೆಣಸಾಟ ನಡೆಸಿ, ಪದಕ ಮತ್ತು ಪ್ರಮಾಣ ಪತ್ರ ಗಳಿಸಿದರು. ಹಾಗೆಯೇ ವಿವಿಧ ಕ್ಷೇತ್ರದ ಸಾಧಕರಾದ ಮಹಾರಾಜ ಕಾಲೇಜು ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ವಸಂತಮ್ಮ, ಅಂತರರಾಷ್ಟ್ರೀಯ ಕುಸ್ತಿ ತರಬೇತುದಾರ ಡಾ.ಕೆ.ವಿನೋದ್ ಕುಮಾರ್, ಸಮಾಜ ಸೇವಕ ಜಿ.ಸಿ.ವೀರರಾಜೇ ಅರಸ್, ಚಿತ್ರ ಕಲಾವಿದ ಮಂಜುನಾಥ್, ಕರಾಟೆ ಪಟು ಲೋಕೇಶ್ ಅವರನ್ನು ಸನ್ಮಾನಿಸಲಾಯಿತು.

ಪಂದ್ಯಾವಳಿ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಕೆ.ಶಿವಕುಮಾರ್ ಮಾತನಾಡಿ, ಮೈಸೂರಿನಲ್ಲಿ ಹೆಚ್ಚೆಚ್ಚು ಕ್ರೀಡಾ ಪಂದ್ಯಾವಳಿಗಳು ನಡೆಯಬೇಕು. ಗೆಲ್ಲಬೇಕು ಎನ್ನುವುದಕ್ಕಿಂದ ಭಾಗವಹಿಸುವುದು ಮುಖ್ಯವಾಗಿದ್ದು, ಕ್ರೀಡೆಯಿಂದ ಮಕ್ಕಳಲ್ಲಿ ಫಿಟ್ನೆಸ್ ಜೊತೆಗೆ ಏಕಾಗ್ರತೆ ಹೆಚ್ಚಲಿದೆ. ಅಲ್ಲದೆ ಸ್ವಯಂ ರಕ್ಷಣೆಗೂ ಮಾರ್ಷಲ್ ಆರ್ಟ್ಸ್ ಕಲಿಕೆ ಅವಶ್ಯವಾಗಿದೆ ಎಂದರು.

ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ಮುಖ್ಯ ತೀರ್ಪುಗಾರ ಡೊಮಿನಿಕ್ ಸವಿಯೊ, ತೀರ್ಪುಗಾರರ ಸಂಘದ ಅಧ್ಯಕ್ಷ ಎನ್.ಜಿ.ಶಿವದಾಸ್, ಸಮಾಜ ಸೇವಕ ಗೋಲ್ಡನ್ ಟಿ.ಸುರೇಶ್, ಎನ್.ಶಂಕರ್, ಮೈಸೂರು ಕರಾಟೆ ಆಸೋಸಿಯೇಷನ್ ಕಾರ್ಯದರ್ಶಿ ಭಾರತಿ ಆನಂದ್, ನಾಗ ಮಾರ್ಷಲ್ ಆರ್ಟ್ಸ್ ಅಕಾಡೆಮಿ ಸಂಸ್ಥಾಪಕ ಸೋಸಲೆ ಸಿದ್ದರಾಜು, ತೀರ್ಪುಗಾರರಾದ ದೀಪಕ್, ವಿವೇಕ್ ಕುಮಾರ್, ಚಿದಾನಂದ, ಶಿವಣ್ಣ, ಸುಭಾಷ್ ಮತ್ತಿತರರಿದ್ದರು.

ನಂಜನಗೂಡಿನಲ್ಲಿ ಭೀಮಾ ಕೋರೆಗಾಂವ್ ಅದ್ಧೂರಿ ವಿಜಯೋತ್ಸವ

ಮೆದುಳಿನ ಶಿಕ್ಷಣಕ್ಕಿಂತ ಹೃದಯದ ಶಿಕ್ಷಣವಿರಬೇಕು: ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ



ನಂಜನಗೂಡಿನಲ್ಲಿ 208ನೇ ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ಜನ ಜಾಗೃತಿ ಸಮಾವೇಶವನ್ನು ಉರಿಲಿಂಗಿ ಪೆದ್ದಿಮಠದ ಪೀಠಾಧ್ಯಕ್ಷ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಉದ್ಘಾಟಿಸಿದರು.

ನಂಜನಗೂಡು, ಜ.11– ಮೆದುಳಿನ ಶಿಕ್ಷಣಕ್ಕಿಂತ ಹೃದಯದ ಶಿಕ್ಷಣವಿರಬೇಕು. ದಲಿತರ ಭವಿಷ್ಯ, ಶಿಕ್ಷಣ ಮತ್ತು ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಸಂವಿಧಾನವನ್ನು ಮೌನವಾಗಿ ಮುಗಿಸುತ್ತಿದ್ದಾರೆ ಎಂದು ಉರಿಲಿಂಗಿ ಪೆದ್ದಿ ಮಠದ ಪೀಠಾಧ್ಯಕ್ಷರಾದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಕಳವಳ ವ್ಯಕ್ತಪಡಿಸಿದರು.

ನಗರದ ಡಾ .ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ ದಲಿತ ಸಂಘಟನೆಗಳ ಒಕ್ಕೂಟದಿಂದ 208ನೇ ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ನಂಜನಗೂಡಿನಲ್ಲಿ ಸಂಘ ಪರಿವಾರದ ಒಳಸಂಚು ಮತ್ತು ದಲಿತ ಚಳುವಳಿಗಳ ಪ್ರತಿರೋಧ ಜನ ಜಾಗೃತಿ ಸಮಾವೇಶದಲ್ಲಿ ಬುದ್ಧ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ಭೀಮಾ ಕೋರೆಗಾವ್ ವಿಜಯೋತ್ಸವವೂ ಸ್ವಾಭಿಮಾನದ ಸಂಕೇತವಾಗಿದೆ. ಮಹಾರ್ ಸೈನಿಕರು ಅಂದಿನ ಭೀಮಾ ಕೋರೆಂಗಾವ್ ಯುದ್ಧದಿಂದ ನಮಗೆ ಹಕ್ಕುಗಳನ್ನು ನೀಡಿದ್ದಾರೆ. ಅದರ ಪ್ರತಿಫಲವಾಗಿ ಇಂದು ನಾವು ಬದುಕುತ್ತಿದ್ದೇವೆ. ಅಂಬೇಡ್ಕರ್ ಅವರು ಇದ್ದಾಗಿನಿಂದಲೂ ಒಳ ಸಂಚುಗಳು ನಡೆಯುತ್ತಲೇ ಇವೆ. ನಾವು ಎಚ್ಚರಿಕೆಯಿಂದ ಇರಬೇಕು. ಮತದಾನದ ಹಕ್ಕುಗಳನ್ನು ಕಸಿಯುತ್ತಿದ್ದಾರೆ. ಸಂವಿಧಾನವನ್ನು ನಾವೇ ಸೋಲಿಸುತಿದ್ದೇವೆ. ಇವತ್ತೂ ದಲಿತರ ಮೇಲೆ ದೌರ್ಜನ್ಯ ಅತ್ಯಾಚಾರದಂತಹ ಪ್ರಕರಣಗಳು ನಡೆಯುತ್ತಿವೆ ಎಂದರು.

ಶೇ.42 ರಷ್ಟು ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಹಣದ ಆಸೆಗೆ ಮತವನ್ನು ಮಾರಿಕೊಂಡು ಬಾಬಾ ಸಾಹೇಬರಿಗೆ ದ್ರೋಹ ಬಗೆಯಬೇಡಿ. ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಉನ್ನತ ಹುದ್ದೆಗಳನ್ನು ಅಲಂಕರಿಸುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ವಿಶ್ವವಿದ್ಯಾನಿಲಯಗಳು ಜಾತಿಯ ಕೇಂದ್ರಗಳಾಗಿವೆ. ಸಮುದಾಯವು ಮೌಢ್ಯದ ಕಡೆ ಹೋಗುತ್ತಿರುವುದು ದುರಂತ. ಎಸ್ಐಆರ್ ಕಡ್ಡಾಯವಾಗಿ ನಿಷೇಧ ಮಾಡುವಂತೆ ಆಗ್ರಹಿಸಿದರು.

ವೇದಿಕೆ ಕಾರ್ಯಕ್ರಮವನ್ನು ಹಿರಿಯ ಹೋರಾಟಗಾರ ಹಾಗೂ ದಸಂಸ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್ ಉದ್ಘಾಟಿಸಿ ಮಾತನಾಡಿದರು, ಸಮುದಾಯವು ಹರಿದು ಹಂಚಿ ಹೋಗುತ್ತಿದೆ. ಒಳ ಮೀಸಲಾತಿ ಹೋರಾಟದಿಂದ ಸಮುದಾಯಕ್ಕೆ ಅನ್ಯಾಯವಾಗುತ್ತಿತ್ತು. ಇದಕ್ಕೆ ಜ್ಞಾನಪ್ರಕಾಶ ಸ್ವಾಮೀಜಿ ಅವರು ಹೋರಾಟ ನಡೆಸಿದ್ದ ಪರಿಣಾಮವಾಗಿ ನಮ್ಮ ಸಮುದಾಯದ ಶಿಕ್ಷಣಕ್ಕೆ ಅನುಕೂಲವಾಗಿದೆ. ರಾಜಕೀಯ ನಾಯಕರು ಸಮುದಾಯದ ಹಿತವನ್ನು ಕಾಪಾಡುತ್ತಿಲ್ಲ. ಹಾಗಾದರೆ ಹೋರಾಟ ಮಾಡುವವರು ಯಾರು ಎಂದು ಪ್ರಶ್ನಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಮೈಸೂರು ವಿವಿಯ ಡಾ.ಬಿ.ಆರ್ ಅಂಬೇಡ್ಕರ್ ಸಂಶೋಧನಾ ವಿಸ್ತರಣಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಜೆ.ಸೋಮಶೇಖರ್ ಮಾತನಾಡಿ, ಹೊರ ಶತ್ರುಗಳಿಗಿಂತ ಒಳ ಶತ್ರುಗಳು ಅಪಾಯಕಾರಿ. ಬಾಬಾ ಸಾಹೇಬರ ಪ್ರಬುದ್ಧ ಭಾರತದ ನಿರ್ಮಾಣದ ಕನಸು ಈಡೇರಿಸುವಲ್ಲಿ ನಾವು ವಿಫಲರಾಗಿದ್ದೇವೆ. ಬಾಬಾ ಸಾಹೇಬರಿಂದ ನಮಗೆ ಬದುಕು ಸಿಕ್ಕಿದೆ. ನಾವು ಪ್ರಬುದ್ಧರಾಗಬೇಕು. ಬುದ್ಧನ ಜ್ಞಾನ, ಬುದ್ಧನ ದಾರಿಯಿಂದ ಎಂತಹ ಸಂಚುಗಳನ್ನು ಕೂಡ ನಾವು ಸವಾಲಾಗಿ ಸ್ವೀಕರಿಸಿ ಪ್ರಬುದ್ಧ ಭಾರತವನ್ನು ಕಟ್ಟಬಹುದು. ಸಮಾಜದಲ್ಲಿ ಜಾತಿ ಮತ್ತು ಉಪಜಾತಿಯ ಸಂಘಟನೆಗಳು ವಿಜೃಂಭಿಸುತ್ತಿವೆ. ಇದರಿಂದ ಬಾಬಾ ಸಾಹೇಬರ ಕನಸು ಈಡೇರುತ್ತಿಲ್ಲ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದಸಂಸ ಜಿಲ್ಲಾ ಸಂಚಾಲಕ ದೇವರಸನಹಳ್ಳಿ ಪುಟ್ಟಸ್ವಾಮಿ ಮಾತನಾಡಿ, ಭೀಮಾ ಕೋರೆಂಗಾವ್ ವಿಜಯೋತ್ಸವದಲ್ಲಿ ಜನ ಜಾಗೃತಿ ಸಮಾವೇಶದಲ್ಲಿ ನಿರ್ಣಯಗಳನ್ನು ಕೈಗೊಂಡಿದ್ದೇವೆ. ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಬೌದ್ಧ ಪೀಠವನ್ನು ಸ್ಥಾಪಿಸಿ ಬೌದ್ಧ ಧರ್ಮದ ಬಗ್ಗೆ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು. ಪ್ರೌಢ ಶಿಕ್ಷಣ ಇಲಾಖೆಯ ಶಾಲಾ ಪಠ್ಯ ಪುಸ್ತಕಗಳಲ್ಲಿ ಕೋರೆಂಗಾವ್ ಯುದ್ಧದ ಪಠ್ಯಕ್ರಮವನ್ನು ಅಳವಡಿಸಬೇಕು. ಬೌದ್ಧರ ಅಭಿವೃದ್ಧಿಗಾಗಿ ಬೌದ್ಧ ಅಭಿವೃದ್ಧಿ ನಿಗಮ ಮಂಡಳಿ ಸ್ಥಾಪಿಸಿ ನಿಗಮಕ್ಕೆ ಸೂಕ್ತ ಅನುದಾನ ನೀಡಬೇಕು. ರಾಜ್ಯ ಸರ್ಕಾರದ ಮುಜ ರಾಯಿ ಇಲಾಖೆಯ ಅಧೀನದಲ್ಲಿರುವ ದೇವಸ್ಥಾನಗಳಲ್ಲಿ ರಾಕ್ಷಸ ಸಂಹಾರದಂತಹ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಅದು ಶೋಷಿತರ ಮೇಲಿನ ಕ್ರೌರ್ಯವನ್ನು ಪ್ರತಿಪಾದಿಸುತ್ತಿದೆ. ಕೂಡಲೇ ಸರ್ಕಾರ ಇಂತಹ ಕಾರ್ಯಕ್ರಮಗಳನ್ನು ರದ್ದು ಪಡಿಸಬೇಕು ಹಾಗೂ ರಾಜ್ಯ ಸರ್ಕಾರವು ಖಾಲಿ ಇರುವ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮಕ್ಕೂ ಮುನ್ನ ನಂಜನಗೂಡಿನ ಜೂನಿಯರ್ ಕಾಲೇಜು ಮೈದಾನದಲ್ಲಿ ಭೀಮಾ ಕೋರಂಗಾವ್ ವಿಜಯೋತ್ಸವದ ಜನಜಾಗೃತಿ ಸಮಾವೇಶದ ರಥ ಮತ್ತು ಬುದ್ಧನ ಬೆಳ್ಳಿ ರಥೋತ್ಸವಕ್ಕೆ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಚಾಲನೆ ನೀಡಿದರು. ನಗರದ ಆರ್‌ಪಿ ರಸ್ತೆಯ ಮೂಲಕ ಅಂಬೇಡ್ಕರ್ ಭವನದ ವರೆಗೆ ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಸಂಸ ಜಿಲ್ಲಾ ಸಂಚಾಲಕ ದೇವರಸನಹಳ್ಳಿ ಪುಟ್ಟಸ್ವಾಮಿ ವಹಿಸಿದ್ದರು. ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರಾದ ಮೈಸೂರಿನ ಸಹಾಯಕ ಪೊಲೀಸ್ ಆಯುಕ್ತರಾದ ರವಿಪ್ರಸಾದ್ ಅವರಿಗೆ ದಲಿತ ಸಂಘಟನೆಗಳ ಒಕ್ಕೂಟದಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸಹಾಯಕ ಪೊಲೀಸ್ ಆಯುಕ್ತರವಿಪ್ರಸಾದ್, ವಕೀಲರಾದ ಉಮೇಶ್, ದಸಂಸ ಸಂಚಾಲಕರಾದ ಚುಂಚನಹಳ್ಳಿ ಮಲ್ಲೇಶ್, ಮಲ್ಲಹಳ್ಳಿ ನಾರಾಯಣ್, ಕಾರ್ಯ ಬಸವಣ್ಣ, ಶಂಕರಪುರ ಸುರೇಶ್, ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಅಭಿನಾಗ ಭೂಷಣ್, ದಸಂಸ ತಾಲೂಕು ಸಂಚಾಲಕ ಗಟ್ಟವಾಡಿ ಮಹೇಶ್, ಕಳಲೆ ಕುಮಾರ್, ರಾಜೂರು ನಟರಾಜು, ಉಮೇಶ್ ರಾಜ್, ಮರಿಸ್ವಾಮಿ, ಯಶವಂತ ಕುಮಾರ್, ಜಯರಾಮ್, ಮಹೇಶ್, ಸಿದ್ದರಾಜು, ಆನಂದ್, ಸೋಮಣ್ಣ, ನವೀನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಸಿಲ್ವರ್ ಜ್ಯೂಬಿಲಿ ಸಂಘದಿಂದ ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹ



ತಿ.ನರಸೀಪುರ ಪಟ್ಟಣದ ಸಿಲ್ವರ್ ಜ್ಯೂಬಿಲಿ ಅಸೋಸಿಯೇಷನ್ ಹೊರತಂದಿರುವ ದಿನದರ್ಶಿಕೆಯನ್ನು ಅಧ್ಯಕ್ಷ ಎಂ.ಸಿದ್ದಲಿಂಗಸ್ವಾಮಿ ಆಡಳಿತ ಮಂಡಳಿ ಸದಸ್ಯರೊಡಗೂಡಿ ಬಿಡುಗಡೆ ಮಾಡಿದರು.

ತಿ.ನರಸೀಪುರ, ಜ.11– ಸಿಲ್ವರ್ ಜ್ಯೂಬಿಲಿ ಅಸೋಸಿಯೇಷನ್‌ಗೆ ಸೇರಿದ ಜಾಗದಲ್ಲಿ ಕ್ರೀಡೆಯನ್ನು ಹೊರತು ಪಡಿಸಿ ಬೇರಾವುದೇ ಚಟುವಟಿಕೆ ನಡೆಸಲು ಅವಕಾಶವಿಲ್ಲ ಎಂದು ತಿಳಿಸಿದ ಸಂಘದ ಅಧ್ಯಕ್ಷ ಎಂ.ಸಿದ್ದಲಿಂಗಸ್ವಾಮಿ ಮುಂಬರುವ ದಿನಗಳಲ್ಲಿ ಅಸೋಸಿಯೇಷನ್ ಕ್ರೀಡಾ ಚಟುವಟಿಕೆಗೆ ಪ್ರೋತ್ಸಾಹ ನೀಡಲಿದೆ ಎಂದರು.

ಅಸೋಸಿಯೇಷನ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಂಘದ ಆಡಳಿತ ಮಂಡಳಿ ಸದಸ್ಯರೊಡಗೂಡಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

1927ರಲ್ಲಿ ಸ್ಥಾಪಿತವಾದ ಈ ಅಸೋಸಿಯೇಷನ್ ಯಾವುದೇ ರೀತಿಯ ತೊಂದರೆಯಿಲ್ಲದೇ ನಡೆದುಕೊಂಡು ಬಂದಿದೆ.ಅಸೋಸಿಯೇಷನ್‌ಗೆ ಸೇರಿದ ಕಾಂಪೌಂಡ್ ಅನ್ನು ತೆರವುಗೊಳಿಸಿರುವ ಪ್ರಕರಣ ನ್ಯಾಯಾಲಯದಲ್ಲಿದ್ದು ಅದರ ತೀರ್ಪು ನಮ್ಮ ಪರವಾಗಿಯೇ ಬರಲಿದೆ. ಅಸೋಸಿಯೇಷನ್ ಸಂಸ್ಥಾಪಕರಾದ ಸುಂದರರಾಜ ಅಯ್ಯಂಗಾರ್ ಹಾಗೂ ಇನ್ನಿತರೆ ಮಹನೀಯರು ಸಂಘಕ್ಕೆ ಆಸ್ತಿ ಮಾಡಿಟ್ಟಿದ್ದಾರೆ. ಇಂತಹ ಮಹನೀಯರ ಸೇವೆ ನೆನೆದು ಈ ಜಾಗದಲ್ಲಿ ಯುವಕರು ಹಾಗು ಹಿರಿಯ ನಾಗರೀಕರಿಗೆ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳಲು ಅವಕಾಶ ಕಲ್ಪಿಸಿಕೊಡುವ ಉದ್ದೇಶ ಹೊಂದಲಾಗಿದೆ. ಕ್ರೀಡೆಗೆ ಮಾತ್ರವೇ ಉದ್ದೇಶಿತ ಸ್ಥಳ ಬಳಕೆಯಾಗಲಿದೆಯೇ ಹೊರತು ಬೇರಾವುದೇ ಉದ್ದೇಶಕ್ಕೆ ಬಳಕೆ ಮಾಡಲಾಗುವುದಿಲ್ಲ ಎಂದರು.

ಮುಂಬರುವ ದಿನಗಳಲ್ಲಿ ಲಾನ್ ಟೆನಿಸ್, ಟೇಬಲ್ ಟೆನಿಸ್,ಷಟಲ್ ಬ್ಯಾಡ್ಮಿಂಟನ್, ಹೊನಲು ಬೆಳಕಿನ ಕಬಡ್ಡಿ ಹಾಗೂ ಬ್ಯಾಡ್ಮಿಂಟನ್ ಕ್ರೀಡೆಗಳನ್ನು ಹಮ್ಮಿಕೊಳ್ಳುವ ಮೂಲಕ ಅಸೋಸಿಯೇಷನ್ ಕ್ರೀಡೆಗೆ ಪ್ರಾಮುಖ್ಯತೆ ನೀಡಲಿದೆ ಎಂದು ತಿಳಿಸಿದರು.

ಈ ವೇಳೆ ಅಸೋಸಿಯೇಷನ್ ಕಾರ್ಯದರ್ಶಿ ಹೆಚ್.ಪಿ.ರಾಜು, ಖಜಾಂಚಿ ಎಂ.ವೆಂಕಟರಮಣಶೆಟ್ಟಿ ನಿರ್ದೇಶಕರುಗಳಾದ ಎಲ್.ಮಹದೇವಪ್ಪ, ಬಿ.ಎಂ.ಶಿವಣ್ಣ, ಹೆಚ್.ಎಂ. ಶಿವರಾಜು, ಎಂ.ಪರಶಿವಮೂರ್ತಿ, ಎಂ.ಪ್ರಭಾಕರ, ಶ್ರೀಧರ, ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ,ವಕೀಲ ಮಾದಪ್ಪ ಅಸೋಸಿಯೇಷನ್ ನಿಕಟಪೂರ್ವ ಅಧ್ಯಕ್ಷ ಗುರು ಮಲ್ಲಪ್ಪ, ಕಾರ್ಯದರ್ಶಿ ಕೆಇಬಿ ನಾಗರಾಜು, ಖಜಾಂಚಿ ತಾಯೂರು ನಟರಾಜು ಹಾಜರಿದ್ದರು.

ಆಧುನಿಕ ಕೃಷಿ ಪದ್ಧತಿ ಬಳಸಿ, ಉತ್ತಮ ಇಳುವರಿ ಪಡೆಯಿರಿ



200 ಬುಡಕಟ್ಟು ರೈತರಿಗೆ ಕೃಷಿ ಉಪಕರಣ ವಿತರಿಸಲಾಯಿತು.

ಹೆಚ್.ಡಿ.ಕೋಟೆ/ಸಾಲಿಗ್ರಾಮ: ರೈತರು ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಉತ್ತಮ ಇಳುವರಿ ಪಡೆಯಬೇಕು ಎಂದು ಬೆಂಗಳೂರು ಕೃಷಿ ವಿವಿ ಸಂಶೋಧನಾ ನಿರ್ದೇಶಕರಾದ ಡಾ. ಚಿಕ್ಕಲಿಂಗಯ್ಯ ಸಲಹೆ ನೀಡಿದರು.

ತಾಲೂಕಿನ ಕೆಂಚನಹಳ್ಳಿ ಗ್ರಾಮದಲ್ಲಿರುವ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ಕೆಂಚನಹಳ್ಳಿಯಲ್ಲಿ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಬೀಜ ವಿಭಾಗದ ವತಿಯಿಂದ ಬುಡಕಟ್ಟು ಉಪ ಯೋಜನೆ ಅಡಿಯಲ್ಲಿ ಬುಡಕಟ್ಟು ರೈತರಿಗೆ ಕೃಷಿ ತರಬೇತಿ ಮತ್ತು ಕೃಷಿ ಉಪಕರಣ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರೈತರು ಸಮಗ್ರ ಕೃಷಿ ಹಾಗೂ ಪ್ರಾಣಿಗಳಿಗೆ ಅವಲಂಬಿತವಾದ ಬೇಸಾಯವನ್ನು ಮಾಡಬೇಕು. ಹಾಗೆಯೇ ರಾಸಾಯನಿಕ ಮುಕ್ತ ವ್ಯವಸಾಯವನ್ನು ಕಲಿತು ಮುಂದುವರಿಸಬೇಕು, ಕೃಷಿ ವಿಶ್ವವಿದ್ಯಾನಿಲಯದ ಮೂಲಕ ಸಂಶೋಧನೆ ಮಾಡಿ ಉತ್ತಮ ಇಳುವರಿ ಬರುವಂತಹ ಬಿತ್ತನೆ ಬೀಜಗಳನ್ನು ವಿತರಣೆ ಮಾಡುತ್ತಿದ್ದು ಅದನ್ನು ಬಳಸಿಕೊಂಡು ಹೆಚ್ಚು ಇಳುವರಿ ಪಡೆಯಬೇಕು. ಮಾದರಿ ಕೃಷಿಯನ್ನು ಮಾಡುವ ಮೂಲಕ ಉತ್ತಮ ಇಳುವರಿಯನ್ನು ಪಡೆದು ಕುಟುಂಬವನ್ನು ಆರ್ಥಿಕವಾಗಿ ಸುಧಾರಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಜಿ.ಆರ್. ಮಹೇಶ ಮಾತನಾಡಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಸಾಮಾಜಿಕ ಆರ್ಥಿಕ ಸಬಲೀಕರಣ ಕಾರ್ಯಕ್ರಮಗಳ ನಿರ್ದೇಶಕ ಡಾ. ಡೆನ್ನಿಸ್ ಡಿ ಚೌಹಾನ್ ಮಾತನಾಡಿ ಸಂಸ್ಥೆ ವತಿಯಿಂದ ಪ್ರತಿ ವರ್ಷ ಬುಡಕಟ್ಟು ರೈತರಿಗೆ ಬಿತ್ತನೆ ಬೀಜಗಳನ್ನು ನೀಡಲಾಗುತ್ತಿದ್ದು 2025 ನೇ ಸಾಲಿನಲ್ಲಿ ಒಟ್ಟು 817 ರೈತರಿಗೆ ಬಿತ್ತನೆ ಬೀಜಗಳನ್ನು ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಿ ಡಾ. ವಿಶ್ವನಾಥ್ ಕೆ, ಸಹಾಯಕ ಬೀಜೋತ್ಪಾದನಾ ಅಧಿಕಾರಿ ಡಾ. ಬಿ. ಬಸವರಾಜ್, ಸಹಾಯಕ ಪ್ರಾಧ್ಯಾಪಕ ಡಾ. ನಾರಾಯಣ ರೆಡ್ಡಿ, ಪ್ರಕೃತಿ ಗಿರಿಜನ ಮಹಿಳಾ ಒಕ್ಕೂಟದ ಅಧ್ಯಕ್ಷೆ ಪುಟ್ಟಮ್ಮ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕೊಣಸೂರು ಡೇರಿಗೆ ನಿರ್ದೇಶಕರ ಆಯ್ಕೆ



ಕೊಣಸೂರು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾದವರನ್ನು ಅಭಿನಂದಿಸಲಾಯಿತು

ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಕೊಣಸೂರು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ಭಾನುವಾರ ಚುನಾವಣೆ ನಡೆಯಿತು. ಸಾಮಾನ್ಯ ಕ್ಷೇತ್ರದಿಂದ ಜ್ಯೋತಿ, ಸುಮಿತ್ರಾ, ಸೌಮ್ಯ, ಮಂಜುಳಾ, ಮೋನಿಕಾ, ನಂದಿನಿ, ರಾಜೇಶ್ವರಿ, ಪರಿಶಿಷ್ಟ ವಿಭಾಗದ ಕ್ಷೇತ್ರದಿಂದ ನಾಗಮ್ಮ, ಪರಿಶಿಷ್ಟ ಪಂಗಡ ಕ್ಷೇತ್ರದಿಂದ ತಾಯಮ್ಮ, ಹಿಂದುಳಿದ ವರ್ಗಗಳ ಕ್ಷೇತ್ರದಿಂದ ಕಾಮಾಕ್ಷಿ ಮತ್ತು ಅವಿರೋಧವಾಗಿ ಮಹಾದೇವಮ್ಮ ಅವರುಗಳು ಆಯ್ಕೆಯಾದರು.

ಚುನಾಯಿತರನ್ನು ಅಭಿನಂದಿಸಿ ಮಾಜಿ ತಾ ಪಂ ಸದಸ್ಯ ಯೋಗೇಶ್ ಮಾತನಾಡಿ ಮಹಿಳಾ ಸಬಲೀಕರಣಕ್ಕಾಗಿ ಹಾಲು ಉತ್ಪಾದಕರ ಸಹಕಾರ ಸಂಘವು ಸಹಕಾರಿಯಾಗಲಿದ್ದು, ಪ್ರತಿಯೊಬ್ಬರು ತಮಗೆ ದೊರಕಿದ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ರೈತರ ಹಿತವನ್ನು ಕಾಪಾಡಬೇಕು. ಸಕಾಲಕ್ಕೆ ರೈತರಿಗೆ ಸಾಲ ಸೌಲಭ್ಯವನ್ನು ಒದಗಿಸುವುದರ ಮೂಲಕ ಹಾಲು ಉತ್ಪಾದಕರ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಹುಣಸೂರು ಸಹಕಾರ ಇಲಾಖೆ ಅಧಿಕಾರಿ ಗಿರೀಶ್ ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಈ ಸಂದರ್ಭದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಂಬಿಕಾ, ತಾಲ್ಲೂಕು ರೈತ ಸಂಘದ ಅಧ್ಯಕ್ಷ ಆನಂದ, ಮುಖಂಡರಾದ ಮಂಜುನಾಥ್, ಪವಿತ್ರ, ಕೆ.ಬಿ. ವೀರಪ್ಪ, ತೊಂಟದಾರ್ಯ, ಶಿವಣ್ಣ, ರವಿ, ಪ್ರಕಾಶ್, ಅನಿಲ್, ಅಭಿಷೇಕ್, ಕುಮಾರ್, ಶಂಕರ್, ರಮೇಶ್, ಸತೀಶ್, ಪಾಪಣ್ಣ ಗುರುಕ್, ರಾಜಶೇಖರ್ ಸೇರಿದಂತೆ ಇತರರಿದ್ದರು.

ಕಟ್ಟಡ ಕಾರ್ಮಿಕರ ಸಂಘದ ಕ್ಯಾಲೆಂಡರ್ ಬಿಡುಗಡೆ

ಸರಗೂರು: ತಾಲೂಕು ಸೋಮೇಶ್ವರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ 2026ನೇ ಸಾಲಿನ ನೂತನ ದಿನದರ್ಶಿಕೆ ಬಿಡುಗಡೆ ಮತ್ತು ಸನ್ಮಾನ ಸಮಾರಂಭ ಪಡುವಲು ಮಠದ ಆವರಣದಲ್ಲಿ ನಡೆಯಿತು. ಶ್ರೀಮಠದ ಮಹದೇವಸ್ವಾಮೀಜಿ ಕಾರ್ಯಕ್ರಮನ್ನು ಉದ್ಘಾಟಿಸಿ ನೂತನ ದಿನದರ್ಶಿಕೆ ಬಿಡುಗಡೆ ಮಾಡಿದರು.

ಸೋಮೇಶ್ವರ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಮಕ್ಕಳು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು. ಮಕ್ಕಳ ಉನ್ನತ ಶಿಕ್ಷಣಕ್ಕಾಗಿ ಸಂಘ ಪ್ರೋತ್ಸಾಹಿಸುವುದರ ಜೊತೆಗೆ ಪ್ರತಿಯೊಬ್ಬರು ಕಾಯಕದಲ್ಲಿ ನಿಷ್ಠೆಯಿಂದ ದುಡಿದು ಸಂಘದ ಉನ್ನತಿಗೆ ಶ್ರಮಿಸಬೇಕು. ಹಾಗೆ ಸಂಘದದಿಂದ ಸಿಗುವ ಸೌಲಭ್ಯಗಳನ್ನು ಸಂಘದ ಎಲ್ಲಾ ಸದಸ್ಯರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಹೆಚ್.ರಮೇಶ್, ಮಾತನಾಡಿದರು. ಸಂಘದ ಅಧ್ಯಕ್ಷ ಮಣಿ ಆರ್, ಉಪಾಧ್ಯಕ್ಷ ಮತ್ತುರಾಜ್, ಪ್ರಧಾನ ಕಾರ್ಯದರ್ಶಿ ಎಸ್.ಹೆಚ್.ರಮೇಶ್, ಖಜಾಂಚಿ ನಾಗರಾಜು ಸಿ. ಸಂಘಟನಾ ಕಾರ್ಯದರ್ಶಿ ಷರೀಫ್, ಸಹಕಾರ್ಯದರ್ಶಿ ರಾಘವೇಂದ್ರ ಕೆ.ಆರ್. ಸಮಿತಿ ಸದಸ್ಯರಾದ ಕುಮಾರ್.ಎಸ್.ಜಿ, ಮಂಜುನಾಥ್ ಎನ್, ಅಜಯ್ ಎನ್, ಸುರೇಶ್ ಟೈಲ್ಸ್, ಗಣೇಶ್ ಸಾಗರೆ, ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು,



ಪಿಯುಸಿ ನಂತರ ಎಚ್ಚರಿಕೆಯ ಹೆಜ್ಜೆ ಇಡಲು ಕರೆ



ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ವಾರ್ಷಿಕೋತ್ಸವ ಸಮಾರಂಭ

ತಿ.ನರಸೀಪುರ ಜ 11– ಮುಂದಿನ ಪದವಿ ಶಿಕ್ಷಣ ಕಾಲೇಜು ವಿದ್ಯಾರ್ಥಿಗಳ ಭವಿಷ್ಯದ ಬದುಕನ್ನು ನಿರ್ಧರಿಸುವುದರಿಂದ ದ್ವಿತೀಯ ಪಿಯುಸಿ ನಂತರ ಎಚ್ಚರಿಕೆಯಿಂದ ಹೆಜ್ಜೆಗಳನ್ನು ಇಡಬೇಕೆಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ವಿ. ಉದಯಕುಮಾರ್ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಕಾಲೇಜು ವಾರ್ಷಿಕೋತ್ಸವ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಪಿಯುಸಿ ಬಳಿಕ ಪದವಿ ಶಿಕ್ಷಣ ಪಡೆದು ಅವರವರ ಬದುಕನ್ನು ಕಟ್ಟಿಕೊಳ್ಳಬೇಕಾದ ಜವಾಬ್ದಾರಿ ಎಲ್ಲರ ಮೇಲೂ ಇರುವುದರಿಂದ ಶಿಕ್ಷಣ ವಿಷಯದ ಆಯ್ಕೆಯಲ್ಲಿ ವಿದ್ಯಾರ್ಥಿಗಳಿಗೆ ವಿವೇಚನೆ ಹೆಚ್ಚಿರಲಿ ಎಂದರು.

ನಿರ್ಜನ ಪ್ರದೇಶವಾಗಿದ್ದ ಹಳೇ ಸಂತೇಮಾಳ ಈಗ ಪದವಿ, ಪದವಿ ಪೂರ್ವ ಕಾಲೇಜು ಹಾಗೂ ವಿದ್ಯಾರ್ಥಿ ನಿಲಯಗಳ ಸಮುಚ್ಚಯದಿಂದಾಗಿ ಪ್ರಮುಖ ಶಿಕ್ಷಣ ಕೇಂದ್ರವಾಗಿ ಮಾರ್ಪಟ್ಟಿದೆ. ನಮ್ಮ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿವಿಧ ಪದವಿ ಕೋರ್ಸುಗಳು ಸೇರಿದಂತೆ ಎಂ ಕಾಮ್ ಅಂತಹ ಸ್ನಾತಕೋತ್ತರ ಪದವಿ ಶಿಕ್ಷಣವೂ ಲಭ್ಯವಿದೆ. ಸುಸಜ್ಜಿತವಾದ ಕಟ್ಟಡ, ಪ್ರಯೋಗಾಲಯ ಹಾಗೂ ಗ್ರಂಥಾಲಯವು ಕೂಡ ಲಭ್ಯವಿದೆ. ದ್ವಿತೀಯ ಪಿಯು ಬಳಿಕ ಪದವಿ ಶಿಕ್ಷಣಕ್ಕೆ ಪಕ್ಕದಲ್ಲಿನ ಸರ್ಕಾರಿ ಕಾಲೇಜಿನಲ್ಲಿ ಪ್ರವೇಶಾತಿಯನ್ನು ಪಡೆಯಬೇಕೆಂದು ಡಾ.ಹೆಚ್. ವಿ.ಉದಯಕುಮಾರ್ ತಿಳಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಡಿ.ಸಿ.ಲಿಂಗರಾಜು ಮಾತನಾಡಿದರು. ಸಮಾಜ ಸೇವಕರಾದ ನಾರಿ ಟ್ರಸ್ಟ್ ಅಧ್ಯಕ್ಷ ಸಿ.ಎಸ್. ಮುರಳಿಧರ್, ನಿವೃತ್ತ ಪ್ರಾಂಶುಪಾಲ ಎಂ.ಸೋಮಣ್ಣ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ವಿ.ಉದಯಕುಮಾರ್ ಅವರನ್ನು ಸನ್ಮಾನಿಸಲಾಯಿತು. ಹಿರಿಯ ಉಪನ್ಯಾಸಕ ಎನ್.ಜವರಯ್ಯ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ವಿವಿಧ ಗೀತ ಗಾಯನ ಹಾಗೂ ನೃತ್ಯಗಳ ಮೂಲಕ ಸಮಾರಂಭಕ್ಕೆ ಸಾಂಸ್ಕೃತಿಕ ಕಳೆಯನ್ನು ತಂದರು.

ಉಪನ್ಯಾಸಕರಾದ ಸುಮಿತ್ರಮ್ಮ, ಡಾ.ಮಂಜುನಾಥ್, ವಿಠ್ಠಲ್ ತಮ್ಮಣ್ಣಿ, ರಘು, ಶಂಕರ್, ಸಿದ್ದಪ್ಪ, ಜಮುನಾಶ್ರೀ, ರೂಪಶ್ರೀ, ಶಿವರಂಜಿನಿ, ಸುಮಲತ, ಮೇಘ, ಕಾವ್ಯ, ಮೇಘ ಮಂದಾರ, ಶುಭಮಣಿ, ಮೀನಾಕ್ಷಿ, ನಂಜಮ್ಮಣ್ಣಿ, ರಾಜಶೇಖರ್ ಸೇರಿದಂತೆ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.

ದಿನದರ್ಶಿಕೆ ಬಿಡುಗಡೆ



ತಿ. ನರಸೀಪುರ ತಾಲೂಕಿನ ಯರಗನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಾಮೀಣ ಫೌಂಡೇಶನ್ ಆಫ್ ಕರ್ನಾಟಕ ಟ್ರಸ್ಟ್ ವತಿಯಿಂದ ನೂತನ ದಿನದರ್ಶಿಕೆಯನ್ನು ಹೊಸೂರುಹುಂಡಿ ಶ್ರೀಗಳಾದ ರಾಜಶೇಖರ ಸ್ವಾಮಿಗಳು ಬಿಡುಗಡೆಗೊಳಿಸಿದರು. ಶ್ರೀ ಶಿವಕುಮಾರ ಸ್ವಾಮಿ, ಗ್ರಾಪಂ ಸದಸ್ಯರಾದ ಗುರುಮಲ್ಲಪ್ಪ, ಸುರೇಶ್, ಶಿವಾನಂದ ಉದ್ಭವ್, ಕೆನರಾ ಬ್ಯಾಂಕಿನ ಅಮೂಲ್ಯ, ಕೇಂದ್ರ ವ್ಯವಸ್ಥಾಪಕ ರಾಮೇಶ್ವರ್ ರಾವ್, ಶ್ರೀಧರ್, ಮುಖ್ಯ ಶಿಕ್ಷಕಿ ಉಷಾರಾಣಿ, ಪ್ರಕಾಶ್ ಅಕ್ಕಿ ನಾಗಪ್ಪ, ಟ್ರಸ್ಟ್‌ನ ಅಧ್ಯಕ್ಷ ಎನ್.ಮರಿಸ್ವಾಮಿ, ಖಜಾಂಚಿ ಪೂಜಿತ್ ಮೆಡಿಕಲ್ ಪಿ. ಕುಮಾರ್, ಸತೀಶ್, ಓಂ ಗುರುಶಿವಣ್ಣ, ಬಿ.ನಿಂಗರಾಜು, ಸಿದ್ದರಾಜು, ವನಜಾಕ್ಷಿ ಮಲ್ಲು, ಮಲ್ಲಿಕಾ ಹಾಜರಿದ್ದರು.

ಕರಗ ಶೆಟ್ಟಿ ನಿಧನ




ತಿ. ನರಸೀಪುರ, ಜ. 11– ಪಟ್ಟಣದ ಬೈರಾಪುರದಲ್ಲಿ ವಾಸವಿರುವ ವೆಲ್ಡಿಂಗ್ ಶಾಪ್ ಕರಗ ಶೆಟ್ಟಿ(77) ಭಾನುವಾರ ಮುಂಜಾನೆ ನಿಧನರಾದರು. ಮೃತರಿಗೆ ವೆಲ್ಡಿಂಗ್ ಶಾಪ್ ವಿಜಿ ಹಾಗೂ ವಿದೇಶದಲ್ಲಿರುವ ಕ್ರೀಡಾಪಟು ಶೀಲ ಸೇರಿದಂತೆ ನಾಲ್ವರು ಪುತ್ರಿಯರು ಅಪಾರ ಬಂಧುಗಳುನ್ನು ಆಗಲಿದ್ದು ಇವರ ಅಂತ್ಯಕ್ರಿಯೆಯನ್ನು ಸೋಮವಾರ ಬೆಳಗ್ಗೆ 9 ಗಂಟೆಗೆ ನೆರವೇರಿಸಲಾಗುವುದೆಂದು ಕುಟುಂಬ ಮೂಲಗಳು ತಿಳಿಸಿವೆ.

ಸಂತಾಪ: ಹೋಟೆಲ್ ರಾಜಣ್ಣ, ಶಾಮಿಯನ ನಾಗೇಶ್, ಗ್ಯಾಸ್ ಉಮೇಶ್, ಲೈಟ್ ಮದನ್, ಸಂತಾಪ ಸೂಚಿಸಿದ್ದಾರೆ.

ಎಂಸಿಡಿಸಿಸಿ ಬ್ಯಾಂಕಿನಿಂದ ಹೊಸಬರಿಗೂ ಸಾಲ ಸೌಲಭ್ಯ

ಹುಣಸೂರಿನಲ್ಲಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡರಿಗೆ ಸನ್ಮಾನ



ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡರನ್ನು ಹುಣಸೂರಿನಲ್ಲಿ ನಡೆದ ಸಮಾರಂಭದಲ್ಲಿ ಅಭಿನಂದಿಸಲಾಯಿತು

ಹುಣಸೂರು, ಜ.11– ಮುಂದಿನ ದಿನಗಳಲ್ಲಿ ಯಾವುದೇ ಸ್ವಾರ್ಥ ರಾಜಕಾರಣ ಮಾಡದೇ ಎಂಸಿಡಿಸಿಸಿ ಬ್ಯಾಂಕಿನಿಂದ ಹೊಸ ಸದಸ್ಯರಿಗೂ ಸಾಲ ಸೌಲಭ್ಯ ನೀಡಲಾಗುವುದು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡ ಭರವಸೆ ನೀಡಿದ್ದಾರೆ.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ತಾಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ಏರ್ಪಡಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈ ಹಿಂದೆ ಇದ್ದವರು ಕಳೆದ 35 ವರ್ಷಗಳಿಂದ ಹೊಸಬರಿಗೆ ಸಾಲ ನೀಡದೆ ಕೇವಲ ಹಳೆಯ ಸದಸ್ಯರಿಗೆ ಸಾಲವನ್ನು ನೀಡುವ ಮೂಲಕ ತಮ್ಮ ಸ್ವಾರ್ಥ ರಾಜಕಾರಣಕ್ಕೆ ಸೊಸೈಟಿಗಳನ್ನು ಬಳಸಿಕೊಂಡು 1356 ಕೋಟಿ ರೂ. ಬಡ್ಡಿ ರಹಿತ ಕೃಷಿ ಸಾಲ ನೀಡಿದ್ದಾರೆ. ಕೃಷಿಯೇತರ ಚಿನ್ನ, ವಾಹನ, ಟ್ರಾಕ್ಟರ್‌ಗಳು ಮತ್ತಿತರ ಉದ್ದೇಶಕ್ಕೆ 650 ಕೋಟಿ ರೂ. ಸೇರಿದಂತೆ 2000 ಕೋಟಿ ರೂ.ಸಾಲ ನೀಡಿದ್ದಾರೆ. ಜ.19ರಂದು ಸೊಸೈಟಿಗಳು, ಬ್ಯಾಂಕ್‌ಗಳ ಮ್ಯಾನೇಜರ್ ಮತ್ತು ಸೂಪರ್‌ವೈಸರ್‌ಗಳ ಸಭೆ ಕರೆದು ಸುಸ್ತಿದಾರರನ್ನು ಪಟ್ಟಿ ಮಾಡಿ ಸಾಲ ವಸೂಲಾತಿಗೆ ಕ್ರಮ ವಹಿಸಲಾಗುವುದು ಎಂದರು.

ಮುಂದಿನ ದಿನಗಳಲ್ಲಿ ಯಾವುದೆ ಸ್ವಾರ್ಥ ರಾಜಕಾರಣಕ್ಕೆ ಅವಕಾಶ ನೀಡದೆ ರೈತರಿಗೆ ಪ್ರಾಮಾಣಿಕ ಆಡಳಿತ ನೀಡುವ ಮೂಲಕ ಮೊದಲ ಹಂತದಲ್ಲಿ ಸುಸ್ತಿ ಇಲ್ಲದ 155 ಸೊಸೈಟಿಗಳ ಹೊಸ ಸದಸ್ಯರಿಗೆ ಸಾಲ ಮತ್ತು ಎರಡನೆ ಹಂತದಲ್ಲಿ ಉಳಿದ ಸೊಸೈಟಿಗಳ ಹೊಸ ಸದಸ್ಯರಿಗೆ ಸಾಲ ನೀಡುವ ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದರು.

ಹೆಚ್.ಪಿ.ಮಂಜುನಾಥ್‌ಗೆ ತಪ್ಪಿದ ಅಧ್ಯಕ್ಷ ಸ್ಥಾನ: ಮೈಸೂರು–ಚಾಮರಾಜನಗರ ಜಿಲ್ಲಾ ಕೇಂದ್ರ ಬ್ಯಾಂಕ್‌ಗೆ ಹುಣಸೂರಿನ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅಧ್ಯಕ್ಷರಾಗಬೇಕಿತ್ತು. ಅದರೆ ನಾಮಿನೇಷನ್ ಸ್ಥಾನದ ತೊಡಕಿನಿಂದಾಗಿ ಅವರ ಬದಲಿಗೆ ನಾನು ಅಧ್ಯಕ್ಷನಾಗಬೇಕಾಯ್ತು. ಇದರಲ್ಲಿ ಮುಖ್ಯಮಂತ್ರಿ ಮತ್ತು ಮಂತ್ರಿಗಳ ಅಸಕ್ತಿ ಇರಲಿಲ್ಲ. ಅದರೆ ಕೊನೆ ಹಂತದಲ್ಲಿ ಎಲ್ಲರೂ ಅಸಕ್ತಿ ತೋರಿ ಮೈಸೂರು–ಚಾಮರಾಜನಗರ ಜಿಲ್ಲಾ ಕೇಂದ್ರ ಬ್ಯಾಂಕ್ ಅಧಿಕಾರ ಹಿಡಿಯಬೇಕಾಯ್ತು ಎಂದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ ಹುಣಸೂರಿನಲ್ಲಿ ಸೊಸೈಟಿಯೊಂದರ ಚುನಾವಣೆಯಲ್ಲಿ ಹೊತ್ತಿಕೊಂಡ ಸಹಕಾರಿ ಬೆಂಕಿ ಕಿಡಿ ಅನೇಕ ವರ್ಷಗಳಿಂದಲೂ ಸಹಕಾರಿ ಕ್ಷೇತ್ರದ ಹಿಡಿತವನ್ನು ಹಿಡಿದಿಟ್ಟುಕೊಂಡಿದ್ದ ಜಿಲ್ಲಾ ಸಹಕಾರಿ ಭದ್ರಕೋಟೆಯನ್ನೇ ಅಲುಗಾಡಿಸಿ ಹೊಸ ಬದಲಾವಣೆಯನ್ನೆ ಮಾಡುವ ಮೂಲಕ ಇತಿಹಾಸ ಬರೆಯಲಾಯ್ತು ಎಂದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಹಾಗೂ ಜಿಪಂ ಮಾಜಿ ಸದಸ್ಯ ಡಿ.ಕೆ. ಕುನ್ನೇಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಬ್ಲಾಕ್ ಅದ್ಯಕ್ಷರುಗಳಾದ ರವಿಪ್ರಸನ್ನ, ದೇವರಾಜು, ಬಾಲಸುಂದರ್, ನಾಯಕ ಸಮಾಜದ ಅಣ್ಣಯ್ಯನಾಯಕ, ಹುಡಾ ಅಧ್ಯಕ್ಷ ಹೆಚ್.ಪಿ. ಅಮರ್‌ನಾಥ್, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ರಾಘು, ಪ್ರಸನ್ನ, ಗಣಪತಿ ರಾವ್ ಇಂದಾಲ್ಕರ್, ಬಿಳಿಕೆರೆ ಬಸವರಾಜು, ಸಣ್ಣೇಗೌಡ, ಮಾಜಿ ಅಧ್ಯಕ್ಷ ರಮೇಶ್, ಬಸವರಾಜು, ಅಜ್ಗರ್ ಪಾಷ, ಸುನಿತಾ ಜಯರಾಮೆಗೌಡ, ಸುಮಿತ್ರ ರವಿ, ಸ್ವಾಮಿಗೌಡ, ಬಸವರಾಜು, ಶಿವಕುಮಾರ್, ಯುವ ಅಧ್ಯಕ್ಷರುಗಳಾದ ದರ್ಶನ್, ಪೈಸಲ್ ಹಾಗೂ ಇನ್ನೂ ಅನೇಕ ಮುಖಂಡರು ಭಾಗವಹಿಸಿದ್ದರು.

ಅಮೆರಿಕ ವ್ಯಾಪಾರ ಒಪ್ಪಂದದ ಅನಿಶ್ಚಿತತೆ ನಡುವೆಯೇ

ಹೊಸ ಮಾರುಕಟ್ಟೆಗಳತ್ತ ಭಾರತದ ಚಿತ್ತ



ಸಾಂದರ್ಭಿಕ ಚಿತ್ರ

ನವದೆಹಲಿ, ಜ.11– ಅಮೆರಿಕ ಜೊತೆಗಿನ ಒಪ್ಪಂದ ಮಾಡಿಕೊಳ್ಳುವ ಪ್ರಯತ್ನಗಳು ಅಸ್ಪಷ್ಟವಾಗಿಯೇ ಇರುವುದರಿಂದ, ರಫ್ತುದಾರರಿಗೆ ಮಾರುಕಟ್ಟೆಗಳನ್ನು ತೆರೆಯಲು ಮತ್ತು ಅಮೆರಿಕದ ದುಬಾರಿ ಸುಂಕಗಳ ಹೊಡೆತವನ್ನು ಮೃದುಗೊಳಿಸಲು ಭಾರತವು ಆಕ್ರಮಣಕಾರಿಯಾಗಿ ವ್ಯಾಪಾರ ಒಪ್ಪಂದಗಳನ್ನು ಹುಡುಕುತ್ತಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕಗಳನ್ನು ಶೇಕಡಾ 50 ಕ್ಕೆ ಹೆಚ್ಚಿಸಿದ ನಂತರ ಆಗಸ್ಟ್‌ನಲ್ಲಿ ವಾಷಿಂಗ್ಟನ್ ಮತ್ತು ದೆಹಲಿ ನಡುವಿನ ಸಂಬಂಧಗಳು ಕುಸಿದವು, ಇದು ಉದ್ಯೋಗ ನಷ್ಟಕ್ಕೆ ಬೆದರಿಕೆ ಹಾಕುವ ಮತ್ತು ಉತ್ಪಾದನೆ ಮತ್ತು ರಫ್ತು ಶಕ್ತಿ ಕೇಂದ್ರವಾಗುವ ಭಾರತದ ಮಹತ್ವಾಕಾಂಕ್ಷೆಗೆ ಹಾನಿ ಮಾಡುವ ಹೊಡೆತವಾಗಿದೆ.

ಆ ಒತ್ತಡವು ನವದೆಹಲಿಯನ್ನು ತನ್ನ ಅತಿದೊಡ್ಡ ಮಾರುಕಟ್ಟೆಯನ್ನು ಮೀರಿ ತ್ವರಿತ ವೈವಿಧ್ಯೀಕರಣ ಚಾಲನೆಗೆ ತಳ್ಳಿದೆ ಎಂದು ತಜ್ಞರು ಹೇಳುತ್ತಾರೆ.

ಹೊಸ ಮಾರುಕಟ್ಟೆಗಳತ್ತ ಭಾರತ ಕಣ್ಣು: ಭಾರತವು ಕಳೆದ ವರ್ಷ ನಾಲ್ಕು ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕಿತು. ಇದರಲ್ಲಿ ಬ್ರಿಟನ್‌ನೊಂದಿಗೆ ಪ್ರಮುಖ ಒಪ್ಪಂದವೂ ಸೇರಿದೆ.

ವರ್ಷಗಳಲ್ಲಿ ಇದುವರೆಗಿನ ಒಪ್ಪಂದದ ವೇಗ– ಮತ್ತು ಈಗ ಹೊಸ ಒಪ್ಪಂದಗಳ ಮೇಲೆ ಕಣ್ಣಿಟ್ಟಿದೆ. ಯುರೋಪಿಯನ್ ಒಕ್ಕೂಟ, ಯುರೇಷಿಯನ್ ಆರ್ಥಿಕ ಒಕ್ಕೂಟ, ಮೆಕ್ಸಿಕೊ, ಚಿಲಿ ಮತ್ತು ದಕ್ಷಿಣ ಅಮೆರಿಕಾದ ಮೆರ್ಕೊಸೂರ್ ವ್ಯಾಪಾರ ಬಣದೊಂದಿಗೆ ಹೊಸ ಒಪ್ಪಂದಗಳಿಗಾಗಿ ಅಥವಾ ಅಸ್ತಿತ್ವದಲ್ಲಿರುವ ಒಪ್ಪಂದಗಳನ್ನು ವಿಸ್ತರಿಸಲು ಮಾತುಕತೆಗಳು ನಡೆಯುತ್ತಿವೆ.

ಯಶಸ್ವಿಯಾದರೆ, ಭಾರತವು 'ಬಹುತೇಕ ಪ್ರತಿಯೊಂದು ಪ್ರಮುಖ ಆರ್ಥಿಕತೆಯೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಹೊಂದಿರುತ್ತದೆ ಎಂದು ದೆಹಲಿ ಮೂಲದ ಜಾಗತಿಕ ವ್ಯಾಪಾರ ಸಂಶೋಧನಾ ಉಪಕ್ರಮದ (GTRI) ಅಜಯ್ ಶ್ರೀವಾಸ್ತವ ಹೇಳಿದರು.

ಶ್ರೀವಾಸ್ತವ ಅವರು 2025 ವ್ಯಾಪಾರ ಒಪ್ಪಂದಗಳಿಗೆ ಅತ್ಯಂತ ಸಕ್ರಿಯ ವರ್ಷಗಳಲ್ಲಿ ಒಂದಾಗಿದೆ ಎಂದು ಹೇಳಿದರು, ಇದು ವಾಷಿಂಗ್ಟನ್‌ನಿಂದ ತಿರುಗುವ ಬದಲು ಅಪಾಯವನ್ನು ಹರಡುವ ಗುರಿಯನ್ನು ಹೊಂದಿದೆ ಎಂದರು.

ಗಮ್ಯಸ್ಥಾನಗಳನ್ನು ವಿಸ್ತರಣೆ: ರಷ್ಯಾದ ತೈಲದ ಭಾರತದ ಖರೀದಿಗಳನ್ನು ನಿಲ್ಲಿಸುವ ಗುರಿಯನ್ನು ಹೊಂದಿರುವ ವಾಷಿಂಗ್ಟನ್‌ನ ದಂಡ ವಿಧಿಸುವ ಸುಂಕಗಳು –ಇದು ಮಾಸ್ಕೋದ ಉಕ್ರೇನ್ ಆಕ್ರಮಣಕ್ಕೆ ಹಣಕಾಸು ಒದಗಿಸುತ್ತದೆ ಎಂದು ಹೇಳುತ್ತದೆ. ಭಾರತ ದೆಹಲಿಯ ಇತರ ಮಾರುಕಟ್ಟೆಗಳನ್ನು ಬೆಳೆಸುವ ಬಯಕೆಯನ್ನು ಪ್ರೇರೇಪಿಸಿದೆ. ನಾನು ಓದಿದಂತೆ, ಈ ತಂತ್ರವು ಟ್ರಂಪ್ ಮಾಡಿದ್ದಕ್ಕೆ ಪ್ರತಿಕ್ರಿಯೆಯಾಗಿತ್ತು. ಇದು ಈಗ ಭಾರತವು ತನ್ನ ಗಮ್ಯಸ್ಥಾನಗಳನ್ನು ವಿಸ್ತರಿಸಲು ಕಡ್ಡಾಯವಾಗಿದೆ ಎಂದು ವ್ಯಾಪಾರ ಅರ್ಥಶಾಸ್ತ್ರಜ್ಞ ಬಿಸ್ವಜಿತ್ ಧರ್ ಎಎಫ್‌ಪಿಗೆ ತಿಳಿಸಿದರು.

ಪ್ರಮುಖ ಒಪ್ಪಂದಗಳು ಸುಂಕಗಳಿಂದ ಹಾನಿಗೊಳಗಾದ ಕಾರ್ಮಿಕ–ತೀವ್ರ ವಲಯಗಳಿಗೆ ಸಹಾಯ ಮಾಡುತ್ತದೆ. ಬ್ರಿಟನ್ ವ್ಯಾಪಾರ ಒಪ್ಪಂದವು ಮುಂದಿನ ಮೂರು ವರ್ಷಗಳಲ್ಲಿ ಬ್ರಿಟನ್‌ಗೆ ಉಡುಪು ರಫ್ತುಗಳನ್ನು ದ್ವಿಗುಣಗೊಳಿಸಲು ಸಹಾಯ ಮಾಡುತ್ತದೆ ಎಂದು ಭಾರತದ ಉಡುಪು ರಫ್ತು ಪ್ರಚಾರ ಮಂಡಳಿ ಯೋಜಿಸಿದೆ.

ಸಂಭಾವ್ಯ ಇಯು ಒಪ್ಪಂದದಿಂದ ಲಾಭಗಳು ಇನ್ನೂ ದೊಡ್ಡದಾಗಿರಬಹುದು. ಜನವರಿಯಲ್ಲಿ ಭಾರತಕ್ಕೆ ಭೇಟಿ ನೀಡುವ ನಿರೀಕ್ಷೆಯಿರುವ ಯುರೋಪಿಯನ್ ಕಮಿಷನ್ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್, ಇದು ಜಗತ್ತಿನಲ್ಲಿ ಎಲ್ಲಿಯೂ ಈ ರೀತಿಯ ಅತಿದೊಡ್ಡ ಒಪ್ಪಂದ ಆಗಿಲ್ಲ ಎಂದು ಹೇಳಿದ್ದಾರೆ.

2025ರ ಅಂತ್ಯದ ವೇಳೆಗೆ ಮಾತುಕತೆಗಳನ್ನು ಮುಕ್ತಾಯಗೊಳಿಸಲು ಎರಡೂ ಕಡೆಯವರು ಗಡುವನ್ನು ತಪ್ಪಿಸಿಕೊಂಡರೂ – ಉಕ್ಕು ಮತ್ತು ವಾಹನ ರಫ್ತಿಗೆ ಸಂಬಂಧಿಸಿದ ವಿವಾದಗಳ ಬಗ್ಗೆ ವರದಿಯಾಗಿದೆ. ಭಾರತೀಯ ಸಮಾಲೋಚಕರು ಆಶಾವಾದಿಗಳಾಗಿದ್ದಾರೆ. ಜರ್ಮನ್ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಸೋಮವಾರ ಭಾರತಕ್ಕೆ ಭೇಟಿ ನೀಡಲಿದ್ದಾರೆ ಮತ್ತು ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ವ್ಯಾಪಾರ ಮತ್ತು ಹೂಡಿಕೆಯಲ್ಲಿ ಸಹಕಾರವನ್ನು ತೀವ್ರಗೊಳಿಸುವ ಕುರಿತು ಮಾತುಕತೆ ನಡೆಸಲಿದ್ದಾರೆ ಎಂದು ಮೋದಿ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಸಣ್ಣ ಒಪ್ಪಂದಗಳು ಸಹ ಮುಖ್ಯ: ಕಳೆದ ಹಣಕಾಸು ವರ್ಷದಲ್ಲಿ ಒಮಾನ್ ಮತ್ತು ಭಾರತ ನಡುವಿನ ವ್ಯಾಪಾರವು $11 ಬಿಲಿಯನ್‌ಗಿಂತ ಕಡಿಮೆಯಿತ್ತು, ಆದರೆ ಡಿಸೆಂಬರ್‌ನಲ್ಲಿ ಮಸ್ಕತ್‌ನೊಂದಿಗಿನ ಒಪ್ಪಂದವು ವಿಶಾಲವಾದ ಮಧ್ಯಪ್ರಾಚ್ಯ ಮತ್ತು ಆಫ್ರಿಕಾ ಮಾರುಕಟ್ಟೆಗಳಿಗೆ ಒಂದು ದ್ವಾರ' ಮತ್ತು ವಿಶಾಲವಾದ ಗಲ್ಫ್ ನಿಶ್ಚಿತಾರ್ಥ ತಂತ್ರಕ್ಕೆ ಒಂದು ಮಾದರಿಯನ್ನು ನೀಡುತ್ತದೆ ಎಂದು ನೊಮುರಾದ ವಿಶ್ಲೇಷಕರು ಸೂಚಿಸಿದ್ದಾರೆ.

ನ್ಯೂಜಿಲೆಂಡ್‌ನೊಂದಿಗಿನ ಮುಕ್ತ ವ್ಯಾಪಾರ ಒಪ್ಪಂದವು (FTA) ಭಾರತದ ರಫ್ತು ಬೆಳವಣಿಗೆಗೆ ಸ್ವಲ್ಪವೇ ಸೇರಿಸಿದರೂ, ಅದು $20 ಬಿಲಿಯನ್ ವಿದೇಶಿ ಹೂಡಿಕೆಯನ್ನು ಪಡೆದುಕೊಂಡಿತು. ಇದು ವೀಸಾ ಪ್ರವೇಶವನ್ನು ಹೆಚ್ಚಿಸಿತು ಮತ್ತು ಭಾರತ ರಾಜಿ ಮಾಡಿಕೊಳ್ಳಲು ಸಿದ್ಧವಾಗಿದೆ ಎಂದು ವಾಷಿಂಗ್ಟನ್‌ಗೆ ತೋರಿಸಿತು.

ರಫ್ತು ಪ್ರಮಾಣ ಏರಿಕೆ: ಭಾರತದ ಸರಕುಗಳ ರಫ್ತು ನವೆಂಬರ್ 2025ರಲ್ಲಿ ಅಚ್ಚರಿಯೆಂದರೆ ಶೇಕಡಾ 19 ರಷ್ಟು ಏರಿಕೆಯಾಗಿದ್ದು, ಅಕ್ಟೋಬರ್ ಕುಸಿತವನ್ನು ಹಿಮ್ಮೆಟ್ಟಿಸಿದೆ. ಎಲೆಕ್ಟ್ರಾನಿಕ್ಸ್ ಸಾಗಣೆಗಳು ಈ ಏರಿಕೆಗೆ ಸಹಾಯ ಮಾಡಿದರೂ–ಇನ್ನೂ ಯುಎಸ್ ಸುಂಕಗಳಿಂದ ವಿನಾಯಿತಿ ಪಡೆದಿವೆ – ಸಮುದ್ರ ಉತ್ಪನ್ನ ರಫ್ತುಗಳು ಸಹ ಲಾಭ ಗಳಿಸಿವೆ. ವೈವಿಧ್ಯೀಕರಣ ಖಂಡಿತವಾಗಿಯೂ ಸಂಭವಿಸಿದೆ ಎಂದು ಭಾರತದ ಸಮುದ್ರಾಹಾರ ರಫ್ತುದಾರರ ಸಂಘದ ಕೆ.ಎನ್. ರಾಘವನ್ ಹೇಳಿದರು.

ನಾವು ಇಯು ಮತ್ತು ಚೀನಾಕ್ಕೆ ರಫ್ತುಗಳನ್ನು ಹೆಚ್ಚಿಸಿದ್ದೇವೆ ಎಂದು ಅವರು ಹೇಳಿದರು. ಅವು ಯುನೈಟೆಡ್ ಸ್ಟೇಟ್ಸ್ ನಂತರ ಅಗ್ರ ಮಾರುಕಟ್ಟೆಗಳಾಗಿವೆ ಎಂದು ಹೇಳಿದರು. ಆದರೆ ರಫ್ತುದಾರರು ಪರ್ಯಾಯ ಮಾರುಕಟ್ಟೆಗಳು ಯುನೈಟೆಡ್ ಸ್ಟೇಟ್ಸ್ ಅನ್ನು ಸಂಪೂರ್ಣವಾಗಿ ಬದಲಾಯಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸುತ್ತಾರೆ, ರಾಘವನ್ ಯುಎಸ್ ಒಪ್ಪಂದವು ಅತ್ಯುತ್ತಮ ಎಂದು ಹೇಳುತ್ತಾರೆ.

ಅದು ಇನ್ನೂ ಅನಿಶ್ಚಿತತೆಯಲ್ಲಿದೆ. ಕೆಪ್ಲರ್ ವ್ಯಾಪಾರ ದತ್ತಾಂಶದ ಪ್ರಕಾರ, ನವೆಂಬರ್‌ನಲ್ಲಿ ದಿನಕ್ಕೆ 1.8 ಮಿಲಿಯನ್ ಬ್ಯಾರೆಲ್‌ಗಳಿಂದ ಭಾರತದ ರಷ್ಯಾದ ತೈಲ ಆಮದು ಡಿಸೆಂಬರ್‌ನಲ್ಲಿ ತೀವ್ರವಾಗಿ ಕುಸಿದು 1.2 ಮಿಲಿಯನ್ ಬ್ಯಾರೆಲ್‌ಗಳಿಗೆ ತಲುಪಿದೆ. ಟ್ರಂಪ್‌ಗೆ ಅದು ಸಾಕಾಗುತ್ತದೆಯೇ ಎಂಬುದು ಸ್ಪಷ್ಟವಾಗಿಲ್ಲ. ಎಂಜಿನಿಯರಿಂಗ್ ರಫ್ತು ಉತ್ತೇಜನ ಮಂಡಳಿಯ ಅಧ್ಯಕ್ಷ ಪಂಕಜ್ ಚಡ್ಡಾ, ಅತೀ ದೊಡ್ಡ ಮತ್ತು ಅತ್ಯಂತ ಲಾಭದಾಯಕ ಮಾರುಕಟ್ಟೆಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ವೈವಿಧ್ಯೀಕರಣವು ಅಗತ್ಯವಾಗಿದೆ. ನಿಮ್ಮ ಎಲ್ಲಾ ಮೊಟ್ಟೆಗಳನ್ನು ಒಂದೇ ಬುಟ್ಟಿಯಲ್ಲಿ ಇಡದಿರುವುದು ಉತ್ತಮ ಎಂದು ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	**(ದೂ: 2521923)**
ಪರಾಶಕ್ತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	**(ದೂ: 2422871)**
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	**(ದೂ: 2497199)**
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	**(ಮೊ:9900820093)**
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ಧುರಂದರ್ (ಹಿ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಛಾಯಾಚಿತ್ರವುಳ್ಳ ಪುಸ್ತಕ ಬಿಡುಗಡೆ



ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಟ್ರಸ್ಟ್ ಪ್ರಕಟಿಸಿರುವ ಛಾಯಾಚಿತ್ರವುಳ್ಳ ಪುಸ್ತಕ ಹಾಗೂ ಟ್ರಸ್ಟ್ ಸದಸ್ಯರ ಪರಿಚಯವುಳ್ಳ ಕೈಪಿಡಿಯನ್ನು ಡಿಸಿಎಫ್ ಕೆ.ಪರಮೇಶ್ ಬಿಡುಗಡೆ ಮಾಡಿದರು.

ಮೈಸೂರು, ಜ.11(ಎಂಟಿವೈ)– ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಟ್ರಸ್ಟ್ ಪ್ರಕಟಿಸಿರುವ ಛಾಯಾಚಿತ್ರವುಳ್ಳ ಪುಸ್ತಕ ಹಾಗೂ ಟ್ರಸ್ಟ್ ಸದಸ್ಯರ ಪರಿಚಯವುಳ್ಳ ಕೈಪಿಡಿಯನ್ನು ಡಿಸಿಎಫ್ ಕೆ.ಪರಮೇಶ್ ಬಿಡುಗಡೆ ಮಾಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಮೈಸೂರು ಫೋಟೋಗ್ರಾಫಿಕ್ ಅಸೋಸಿಯೇಷನ್ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಛಾಯಾಗ್ರಾಹಕರು ಮಾತಿಲ್ಲದೆ ಛಾಯಾಚಿತ್ರದ ಮೂಲಕ ವಿಷಯದ ಗಾಂಭೀರ್ಯತೆಯನ್ನು ತಿಳಿಸುವ ಕೆಲಸ ಮಾಡುತ್ತಾರೆ. ಮೈಸೂರಿನ ಛಾಯಾಗ್ರಾಹಕರಿಗೆ ಬಂಡೀಪುರ, ನಾಗರಹೊಳೆ ಅಭಯಾರಣ್ಯ ಹತ್ತಿರದಲ್ಲೇ ಇದ್ದು, ವನ್ಯಜೀವಿಗಳ ಛಾಯಾಚಿತ್ರ ತೆಗೆಯುವುದಕ್ಕೆ ಸಹಕಾರಿಯಾಗಿದೆ.

ಟ್ರಸ್ಟ್ ವತಿಯಿಂದ ಪ್ರಕಟಿಸಿರುವ ಛಾಯಾಚಿತ್ರವುಳ್ಳ ಪುಸ್ತಕದಲ್ಲಿ ಪ್ರಾಣಿ–ಪಕ್ಷಿಗಳ ಚಿತ್ರದೊಂದಿಗೆ ಅವುಗಳ ಮಾಹಿತಿಯನ್ನು ಹಂಚಿಕೊಂಡಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ಇನ್ನಷ್ಟು ಮಾಹಿತಿಯುಳ್ಳ ಪುಸ್ತಕ ಹೊರತರಲೆಂದು ಹಾರೈಸುತ್ತೇನೆ. ಮೈಸೂರಿನ ಛಾಯಾಗ್ರಾಹಕರು ತೆಗೆದ ವನ್ಯಜೀವಿ ಚಿತ್ರಗಳು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದ ಬಹುಮಾನ ಪಡೆದಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ವಿವಿಧ ಪ್ರಶಸ್ತಿ ಪುರಸ್ಕೃತ ಛಾಯಾಗ್ರಾಹಕರಾದ ಎಸ್.ಆರ್. ಮಧುಸೂದನ್, ಜಿ.ಎಸ್.ರವಿಶಂಕರ್, ಕೆ.ಜಿ.ಸಿದ್ದಲಿಂಗ ಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎ.ಶಾಂತಪ್ಪ ವಹಿಸಿದ್ದರು. ಈ ಸಂದರ್ಭದಲ್ಲಿ ಸಂಘದ ನಿಕಟಪೂರ್ವ ಅಧ್ಯಕ್ಷ ಕೆ.ಎಸ್.ರಾಮಪ್ರಸಾದ್, ಸಂಘದ ಕಾರ್ಯದರ್ಶಿಗಳಾದ ಎನ್.ಮುರಳಿಧರ್, ಸಹ ಕಾರ್ಯದರ್ಶಿ ಎಂ.ಆರ್.ರೂಪೇಶ್, ಖಜಾಂಚಿ ರವೀಂದ್ರ ಲಾಲ್, ನಿರ್ದೇಶಕರಾದ ಕೋ. ಸು. ನರಸಿಂಹಮೂರ್ತಿ, ಅರ್ಜುನ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಿನ ಸಮಸ್ಯೆಗಳಿಗೆ ಕಾಲ ಮಿತಿಯಲ್ಲಿ ಪರಿಹಾರ

ಸಂಸದ ಯದುವೀರ್ ಭರವಸೆ



ಮೈಸೂರು, ಜ.11(ಎಂಟಿವೈ)– ಮೈಸೂರಿನ ವಿವಿಧ ಸಮಸ್ಯೆಗಳನ್ನು ಕಾಲಮಿತಿಯೊಳಗೆ ಪರಿಹರಿಸಲು ಉದ್ದೇಶಿಸಲಾಗಿದ್ದು, ಸಾರ್ವಜನಿಕರಿಂದ ಸಲ್ಲಿಕೆಯಾಗಿರುವ ಅಹವಾಲುಗಳನ್ನು ಆದ್ಯತೆಯ ಮೇರೆಗೆ ಕೈಗೆತ್ತಿಕೊಳ್ಳಲಾಗುವುದು ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ಹೊರಡಿಸಿರುವ ಅವರು, ನಗರದ ಪರಿಸ್ಥಿತಿ ಸುಧಾರಿಸಲು ವಾರ್ಡ್‌ವಾರು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ ತಿಲಕ್‌ನಗರ ವಾರ್ಡ್‌ನಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಲು ಈಗಾಗಲೇ ನಗರಪಾಲಿಕೆ ಆಯುಕ್ತರಿಗೆ ಪತ್ರ ಬರೆಯಲಾಗಿದೆ. ಮೈಸೂರಿನ ವಾರ್ಡ್ ಸಂಖ್ಯೆ 25ರ ತಿಲಕ್‌ನಗರದಲ್ಲಿ ಸಮಸ್ಯೆಗಳ ಬಗ್ಗೆ ನಾಗರಿಕರು ಅಹವಾಲು ಸಲ್ಲಿಸಿದ್ದಾರೆ. ಕುಡಿಯುವ ನೀರು, ಮೂಲಸೌಕರ್ಯ, ಸಾರ್ವಜನಿಕ ಸುರಕ್ಷತೆ ಹಾಗೂ ದನಗಳ ಸಮಸ್ಯೆ ಬಗ್ಗೆ ವಿವರಿಸಿದ್ದಾರೆ ಎಂದರು.

ಈ ವಾರ್ಡ್‌ನಲ್ಲಿ ಪ್ರಮುಖವಾಗಿ ಕುಡಿಯುವ ನೀರಿನ ಸಮಸ್ಯೆ ಇದೆ. ಇದನ್ನು ನಿವಾರಿಸುವ ನಿಟ್ಟಿನಲ್ಲಿ ವಾಣಿ ವಿಲಾಸ ವಾಟರ್ ವರ್ಕ್ಸ್‌ನಿಂದ ತಿಲಕ್ ನಗರದ ಓವರ್‌ಹೆಡ್ ಟ್ಯಾಂಕ್‌ಗೆ ನೀರಿನ ಪೈಪ್‌ಲೈನ್ ಅಳವಡಿಸಿ, ಸುತ್ತಮುತ್ತಲಿನ ಪ್ರದೇಶಕ್ಕೆ ಸಮರ್ಪಕ ಮತ್ತು ನಿಯಮಿತ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದು. ಎಸ್‌ಎಫ್‌ಸಿ ಅನುದಾನ ಬಳಸಿಕೊಂಡು 10 ಲಕ್ಷ ಲೀಟರ್ ಸಾಮರ್ಥ್ಯದ ಸಂಪ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲು ಆಯುಕ್ತರಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ತಿಲಕ್ ನಗರದಲ್ಲಿ ಸಮುದಾಯ ಭವನ ನಿರ್ಮಾಣಕ್ಕಾಗಿ ಬೇಡಿಕೆ ಇತ್ತು. ಸಾರ್ವಜನಿಕ ಸಭೆ, ಸಾಮಾಜಿಕ ಕಾರ್ಯ ಮತ್ತು ಕಲ್ಯಾಣ ಚಟುವಟಿಕೆಗಳಿಗೆ ಅವಶ್ಯಕವಾಗಿದೆ. ಸಾಧ್ಯವಾದಷ್ಟು ಬೇಗ ಸಮುದಾಯ ಭವನದ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. ಈ ವಾರ್ಡ್‌ನಲ್ಲಿ ರಸ್ತೆಗೆ ಹಸುಗಳನ್ನು ಬಿಡುತ್ತಿದ್ದಾರೆ. ಇದರಿಂದ ಪಾದಚಾರಿಗಳು ಮತ್ತು ವಾಹನ ಚಾಲಕರಿಗೆ ಸಂಚಾರಕ್ಕೆ ಅಡ್ಡಿ ಮತ್ತು ಜನರ ಸುರಕ್ಷತೆಗೂ ಧಕ್ಕೆ ಉಂಟಾಗುತ್ತಿದೆ. ಈ ನಿಟ್ಟಿನಲ್ಲಿ ರಸ್ತೆಯಲ್ಲಿ ಹಸು ಬಿಡುವವರಿಗೆ ದಂಡ ವಿಧಿಸಲು ಹಾಗೂ ಕಠಿಣ ಕ್ರಮ ಜರುಗಿಸಲು ಆಯುಕ್ತರಿಗೆ ಆದೇಶಿಸಲಾಗಿದೆ. ನಗರದಲ್ಲಿ ಯಾವುದೇ ಸಮಸ್ಯೆ ಇದ್ದರೂ ನಾಗರಿಕರು ಅಹವಾಲು ಮೂಲಕ ತಿಳಿಸಬಹುದು. ಅದನ್ನು ಶೀಘ್ರವಾಗಿ ಬಗೆಹರಿಸಲು ನಾವು ಬದ್ಧರಾಗಿದ್ದೇವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಡಗಲಹುಂಡಿ ಶ್ರೀ ಬನ್ನಿ ಮಹಾಕಾಳೇಶ್ವರ ಸನ್ನಿಧಿಯಲ್ಲಿ

ಲೋಕ ಕಲ್ಯಾಣಾರ್ಥ ಸತ್ಯನಾರಾಯಣ ಪೂಜೆ



ಮೈಸೂರು ತಾಲೂಕಿನ ಬಡಗಲಹುಂಡಿ ಗ್ರಾಮದ ಶ್ರೀ ಬನ್ನಿ ಮಹಾಕಾಳೇಶ್ವರಿ ದೇವಾಲಯದ ಆವರಣದಲ್ಲಿ ಲೋಕ ಕಲ್ಯಾಣಕ್ಕಾಗಿ ಆಯೋಜಿಸಿದ್ದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ್ ಚಾಲನೆ ನೀಡಿದರು.

ಮೈಸೂರು, ಜ.11(ಎಂಟಿವೈ)– ಮೈಸೂರು ತಾಲೂಕಿನ ಬಡಗಲಹುಂಡಿ ಗ್ರಾಮದ ಶ್ರೀ ಬನ್ನಿ ಮಹಾಕಾಳೇಶ್ವರಿ ದೇವಾಲಯದ ಆವರಣದಲ್ಲಿ ಲೋಕ ಕಲ್ಯಾಣಕ್ಕಾಗಿ ಆಯೋಜಿಸಿದ್ದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯಲ್ಲಿ ಸುತ್ತಮುತ್ತಲಿನ ಗ್ರಾಮಗಳ ನೂರಾರು ಮಂದಿ ಪಾಲ್ಗೊಂಡು ಪೂಜೆ ಸಲ್ಲಿಸಿದರು.

ಬನ್ನಿ ಮಹಾಕಾಳೇಶ್ವರಿ(ಬನ್ನಮ್ಮ) ದೇವಾಲಯದ ಆವರಣದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಆಯೋಜಿಸಿದ್ದ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮದಲ್ಲಿ ಮೂಡಲಹುಂಡಿ, ಬಡಗಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ, ವರಕೋಡು ಗ್ರಾಮದ ಧರ್ಮಸ್ಥಳ ಸಂಘದ ಸದಸ್ಯರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಬಳಿಕ ನಡೆದ ಸಭಾ ಕಾರ್ಯಕ್ರಮದ ಸಾನ್ನಿಧ್ಯವನ್ನು ದಂಡಿಕೆರೆ ಮಠದ ಶ್ರೀ ಮಹಾಮತ ಬಸವಲಿಂಗ ಸ್ವಾಮೀಜಿ ವಹಿಸಿದ್ದರು. ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಚಂದ್ರಶೇಖರ್ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ವಿ.ವಿಜಯ್ ಕುಮಾರ್ ನಾಗನಾಳ್, ವರಕೋಡು ಗ್ರಾಪಂ. ಅಧ್ಯಕ್ಷ ಶಿವಣ್ಣ, ಪೂಜಾ ಸಮಿತಿಯ ಚಿಕ್ಕಣ್ಣ, ಮಂಗಳ, ಮುದ್ದರಾಮೇಗೌಡ, ನಾಗರಾಜು, ಅಶ್ವಿನ್, ರವಿಕುಮಾರ್, ಚಂದ್ರು, ಸಿದ್ದೇಶ್, ಯೋಜನಾಧಿಕಾರಿ ಪಿ.ಶಶಿರೇಖಾ ಇನ್ನಿತರರು ಉಪಸ್ಥಿತರಿದ್ದರು.


ರಸ್ತೆ ಅಗಲೀಕರಣಕ್ಕೆ ಅಡಚಣೆಯಾಗಿರುವ ಮರ ತೆರವು; ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನ

ಮೈಸೂರು,ಜ.11– ನಂಜನಗೂಡು ವಲಯ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ: 766ರ ಕಿಮೀ 180.680 ರಿಂದ 181.520 ರವರೆಗಿನ ನಂಜನಗೂಡು ತಾಲೂಕು ಕಸಬಾ ಹೋಬಳಿ. ಮುದ್ದನಹಳ್ಳಿ ಗ್ರಾಮದ ಹತ್ತಿರ ರಸ್ತೆ ಅಗಲೀಕರಣ ಕಾಮಗಾರಿಗೆ ಅಡಚಣೆಯಾಗಿರುವ ಮರಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆ ಅಧಿಕಾರಿ, ಸಿಬ್ಬಂದಿ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರೊಂದಿಗೆ ಜಂಟಿ ಮಹಜರ್ ಕ್ರಮ ಜರುಗಿಸಿದ್ದು. ಅದರಂತೆ ಮುದ್ದನಹಳ್ಳಿ ಗ್ರಾಮದ ಹತ್ತಿರ ಬರುವ ರಸ್ತೆಯ ಎಡಬದಿ 44 ಹಾಗೂ ರಸ್ತೆಯ ಬಲಬದಿಯ 54 ಒಟ್ಟು 98 ಸಂಖ್ಯೆ ವಿವಿಧ ಜಾತಿಯ ಮರಗಳ ಅಳತೆ ಪಟ್ಟಿಯನ್ನು ತಯಾರಿಸಲಾಗಿದೆ.

ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ ಪ್ರಕರಣ 8(3)(7)ರಡಿ 50ಕ್ಕಿಂತ ಹೆಚ್ಚು ಮರಗಳನ್ನು ಕಡಿಯಬೇಕಾದಲ್ಲಿ ಸಾರ್ವಜನಿಕ ಅಹವಾಲನ್ನು ಸ್ವೀಕರಿಸಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಜ.23 ರಂದು ಮಧ್ಯಾಹ್ನ 11.30 ಗಂಟೆಗೆ ಸಿಂಧುವಳ್ಳಿ ಪುರ ಗ್ರಾಮದ ನಂಜನಗೂಡು–ಊಟಿ ರಸ್ತೆಯ ಸಂತಾನ ಗಣಪತಿ ದೇವಸ್ಥಾನದ ಪಕ್ಕದಲ್ಲಿ ಸಾರ್ವಜನಿಕ ಅಹವಾಲು ಸಭೆಯನ್ನು ಕರೆಯಲಾಗಿದೆ.

ಈ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಸಭೆಯಲ್ಲಿ ಹಾಜರಾಗಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು ಅಥವಾ ಸದರಿ ದಿನಾಂಕದ ಒಳಗಾಗಿ ವೃಕ್ಷಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿ. ನಂಜನಗೂಡು ಪ್ರಾದೇಶಿಕ ವಲಯ, ಹುಲ್ಲಹಳ್ಳಿ ಸರ್ಕಲ್ ಹತ್ತಿರ, ನಂಜನಗೂಡು ಇವರಿಗೆ ಲಿಖಿತ ರೂಪದಲ್ಲಿ ಆಕ್ಷೇಪಣೆಯನ್ನು ಸಲ್ಲಿಸಬಹುದು ಹಾಗೂ ಇ–ಮೇಲ್/ಅಂಚೆ nanjangudrange @gmail.com ಮೂಲಕ ನಿಗದಿತ ಸಮಯ ಹಾಗೂ ದಿನಾಂಕದೊಳಗೆ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರಲ್ಲೇ ಬೆಂಕಿಹಚ್ಚಿಕೊಂಡು ದಹನವಾದ ಬಿಜೆಪಿ ಮುಖಂಡ!



ದಾವಣಗೆರೆ, ಜ.11– ಕೌಟುಂಬಿಕ ಕಲಹ ಹಿನ್ನೆಲೆಯಲ್ಲಿ ದಾವಣಗೆರೆ ಪಾಲಿಕೆಯ ಬಿಜೆಪಿ ಮಾಜಿ ಸದಸ್ಯ ಚಂದ್ರಶೇಖರ್ ಸಂಕೋಲ್ ಅವರು ತಮ್ಮ ಕಾರಿನಲ್ಲಿಯೇ ಪೆಟ್ರೋಲ್ ಸುರಿದುಕೊಂಡ ಬಳಿಕ, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಂಕೋಲ್ ಅವರ ಮಕ್ಕಳಿಬ್ಬರು ಇತ್ತೀಚೆಗೆ ಆತ್ಮಹತ್ಯೆಗೆ ಯತ್ನಿಸಿದ್ದು, ಅವರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಿಂದ ಮನನೊಂದ ಸಂಕೋಲ್, ನಾಗನೂರು ಸಮೀಪದ ತೋಟದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಹದಡಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಚಂದ್ರಶೇಖರ್ ಸಂಕೋಲ್, ಶಾಮನೂರು ಗ್ರಾಮದಲ್ಲಿ ಸಿಮೆಂಟ್, ಕಬ್ಬಿಣದ ಅಂಗಡಿ ನಡೆಸುತ್ತಿದ್ದು, ಜಿಲ್ಲೆಯಲ್ಲೇ ಜನಾನುರಾಗಿಯಾಗಿದ್ದರು. ಜೊತೆಗೆ ಪಕ್ಷ ಸಂಘಟನೆಯಲ್ಲೂ ಸಕ್ರಿಯರಾಗಿದ್ದರು. ಅಡಿಕೆ ತೋಟ, ಕಾಂಪ್ಲೆಕ್ಸ್‌ಗಳನ್ನು ಹೊಂದಿದ್ದರೂ, ಸಾಲವೂ ಇತ್ತು ಎನ್ನಲಾಗಿದೆ.

ಈ ವಿಚಾರಕ್ಕೆ ಮನೆಯಲ್ಲಿ ಜಗಳವಾಗುತ್ತಿತ್ತು ನಿನ್ನೆಯೂ ಗಲಾಟೆಯಾಗಿದ್ದು, ಚಂದ್ರಶೇಖರ್ ಮಕ್ಕಳಾದ ನರೇಶ್(20) ಹಾಗೂ ಪವಿತ್ರ(23) ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದರು. ಕೂಡಲೇ ಅವರನ್ನು ರಕ್ಷಿಸಿ, ಆಸ್ಪತ್ರೆಗೆ ದಾಖಲು ಮಾಡಲಾಯಿತು. ಇದರಿಂದ ಮನನೊಂದ ಚಂದ್ರಶೇಖರ್ ಸಂಕೋಲ್, ತೋಟಕ್ಕೆ ಬಂದು ಕಾರಿನಲ್ಲಿ ಮೂರ್ನಾಲ್ಕು ಟಯರ್‌ಗಳನ್ನು ಇಟ್ಟು, ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಸೋಮನಾಥ ದೇವಾಲಯ ಪುನರ್ನಿರ್ಮಾಣ ವಿರೋಧಿಸಿದವರ ಸೋಲಿಸಬೇಕಾಗಿದೆ: ಪ್ರಧಾನಿ ಮೋದಿ



ಸೋಮನಾಥ, ಜ.11– ಸ್ವಾತಂತ್ರ್ಯದ ನಂತರ ಗುಜರಾತ್‌ನಲ್ಲಿ ಸೋಮನಾಥ ದೇವಾಲಯದ ಪುನರ್ನಿರ್ಮಾಣವನ್ನು ವಿರೋಧಿಸಿದ ಶಕ್ತಿಗಳು ಇನ್ನೂ ಸಕ್ರಿಯವಾಗಿವೆ. ಭಾರತವು ವಿರೋಧ ಶಕ್ತಿಗಳನ್ನು ಸೋಲಿಸಲು ಜಾಗರೂಕರಾಗಿರಬೇಕು, ಒಗ್ಗಟ್ಟಿನಿಂದ ಇದ್ದು ನಾವೆಲ್ಲರೂ ಶಕ್ತಿಶಾಲಿಯಾಗಿರಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಸೋಮನಾಥದ ಇತಿಹಾಸವು ವಿನಾಶ ಮತ್ತು ಸೋಲಿನದ್ದಲ್ಲ, ಬದಲಾಗಿ ಗೆಲುವು ಮತ್ತು ನವೀಕರಣದದ್ದಾಗಿದೆ. ಮೂಲಭೂತವಾದಿ ಆಕ್ರಮಣಕಾರರು ಈಗ ಇತಿಹಾಸದ ಪುಟಗಳಿಗೆ ಸೀಮಿತವಾಗಿರುವ ಕಾಲಚಕ್ರ ಇದು. ಸೋಮನಾಥ ದೇವಾಲಯ ಇನ್ನೂ ಎತ್ತರವಾಗಿ ನಿಂತಿದೆ ಎಂದು ಹೇಳಿದರು.

1026 ರಲ್ಲಿ ಘಜ್ನಿಯ ಮಹಮದ್ ಸೋಮನಾಥ ದೇವಾಲಯದ ಮೇಲೆ ಆಕ್ರಮಣ ಮಾಡಿ 1,000 ವರ್ಷಗಳು ಕಳೆದ ನೆನಪಿಗಾಗಿ ಇಲ್ಲಿ ನಡೆದ ಸೋಮನಾಥ ಸ್ವಾಭಿಮಾನ ಪರ್ವದಲ್ಲಿ ಭಾಗವಹಿಸಿ ಪ್ರಧಾನಿ ಮೋದಿ ಮಾತನಾಡುತ್ತಿದ್ದರು.

ಶತಮಾನಗಳಿಂದ ಸೋಮನಾಥ ದೇವಾಲಯದ ನಾಶಕ್ಕೆ ಪದೇ ಪದೇ ಪ್ರಯತ್ನಗಳು ನಡೆದಿದ್ದರೂ, ದೇವಾಲಯವು ಇಂದು ಸ್ಥಿತಿಸ್ಥಾಪಕತ್ವ, ನಂಬಿಕೆ ಮತ್ತು ರಾಷ್ಟ್ರೀಯ ಹೆಮ್ಮೆಯ ಪ್ರಬಲ ಸಂಕೇತವಾಗಿ ನಿಂತಿದೆ ಇದಕ್ಕೆ ಕಾರಣ ಸಾಮೂಹಿಕ ಸಂಕಲ್ಪ ಮತ್ತು ಅದರ ಪ್ರಾಚೀನ ವೈಭವವನ್ನು ಪುನಃಸ್ಥಾಪಿಸುವ ಪ್ರಯತ್ನಗಳು.

ದ್ವೇಷ, ದೌರ್ಜನ್ಯ ಮತ್ತು ಭಯೋತ್ಪಾದನೆಯ ನಿಜವಾದ ಇತಿಹಾಸವನ್ನು ನಮ್ಮಿಂದ ಮರೆಮಾಡಲಾಗಿದೆ. ದಾಳಿಯು ದೇವಾಲಯವನ್ನು ಲೂಟಿ ಮಾಡುವ ಪ್ರಯತ್ನ ಎಂದು ನಮಗೆ ಕಲಿಸಲಾಯಿತು ಎಂದು ಮೋದಿ ಹೇಳಿದರು.

ಸ್ವಾತಂತ್ರ್ಯದ ನಂತರ, ಸರ್ದಾರ್ ವಲ್ಲಭಭಾಯಿ ಪಟೇಲ್ ಸೋಮನಾಥ ದೇವಾಲಯವನ್ನು ಪುನರ್ನಿರ್ಮಿಸುವ ಪ್ರಮಾಣ ವಚನ ಸ್ವೀಕರಿಸಿದಾಗ, ಅವರ ಹಾದಿಗೆ ಅಡ್ಡಿಪಡಿಸಲಾಯಿತು. ಓಲೈಕೆಯಲ್ಲಿ ತೊಡಗಿದ್ದವರು ತೀವ್ರವಾದಿ ಮನಸ್ಥಿತಿಯ ಜನರ ಮುಂದೆ ಮಂಡಿಯೂರಿದರು. ಸೋಮನಾಥ ದೇವಾಲಯದ ಪುನರ್ನಿರ್ಮಾಣವನ್ನು ತಡೆಯಲು ಪ್ರಯತ್ನಿಸಿದ ಆ ಶಕ್ತಿಗಳು ಇನ್ನೂ ನಮ್ಮ ನಡುವೆ ಇವೆ. ಅಂತಹ ಶಕ್ತಿಗಳನ್ನು ಸೋಲಿಸಲು ನಾವು ಜಾಗರೂಕರಾಗಿರಬೇಕು, ಒಗ್ಗಟ್ಟಾಗಿರಬೇಕು ಮತ್ತು ಶಕ್ತಿಶಾಲಿಯಾಗಿರಬೇಕು ಎಂದು ಮೋದಿ ಹೇಳಿದರು.

ಸೋಮನಾಥನ ಕಥೆ ಭಾರತದ ಕಥೆಯಾಗಿದೆ; ವಿದೇಶಿ ಆಕ್ರಮಣಕಾರರು ಈ ದೇವಾಲಯದಂತೆ ಭಾರತವನ್ನು ಹಲವು ಬಾರಿ ನಾಶಮಾಡಲು ಪ್ರಯತ್ನಿಸಿದರು. ದಾಳಿಕೋರರು ದೇವಾಲಯವನ್ನು ನಾಶಮಾಡುವ ಮೂಲಕ ಗೆದ್ದಿದ್ದೇವೆ ಎಂದು ಭಾವಿಸಿದ್ದರು. ಆದರೆ ಸಾವಿರ ವರ್ಷಗಳ ನಂತರವೂ ಸೋಮನಾಥದ ಧ್ವಜ ಇನ್ನೂ ಎತ್ತರಕ್ಕೆ ಹಾರುತ್ತಿದೆ ಎಂದರು. 1,000 ವರ್ಷಗಳ ಈ ಹೋರಾಟಕ್ಕೆ ವಿಶ್ವ ಇತಿಹಾಸದಲ್ಲಿ ಯಾವುದೇ ಸಮಾನತೆ ಇಲ್ಲ ಎಂದರು.

ಕುವೆಂಪುಗೆ ಮರಣೋತ್ತರ 'ಭಾರತ ರತ್ನ' ಕಲ್ಪಿಸಿ

ಪ್ರಧಾನಿ ಮೋದಿಗೆ ಮಾಜಿ ಪ್ರಧಾನಿ ದೇವೇಗೌಡರ ಪತ್ರ



ಮೈಸೂರಿನ 'ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್' ವತಿಯಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಸನ್ಮಾನಿಸಲಾಯಿತು.

ಮೈಸೂರು, ಜ.11– ಮಹಾಕವಿ ಕುವೆಂಪು ಅವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿ ನೀಡುವಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

'ಕುವೆಂಪು' ಅವರು ಮಹಾನ್ ಕವಿ, ತತ್ವಜ್ಞಾನಿ ಮತ್ತು ಚಿಂತಕರಾಗಿದ್ದರು ಎಂಬುದನ್ನು ನಿಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ. ಅವರು ತಮ್ಮ ಬುದ್ಧಿವಂತಿಕೆ ಮೂಲಕ ನಮ್ಮ ಜೀವನವನ್ನು ಶ್ರೀಮಂತಗೊಳಿಸಲು ಅಪಾರ ಸೇವೆ ಸಲ್ಲಿಸಿದ್ದಾರೆ. ಅವರು ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಅಪಾರ ಕೊಡುಗೆ ನೀಡಿದ್ದಾರೆ. ಸಣ್ಣ ನದಿಯಂತಿದ್ದ ಕನ್ನಡ ಸಾಹಿತ್ಯವು ಕುವೆಂಪು ಅವರ ಮಹತ್ತರ ಕೊಡುಗೆಯಿಂದಾಗಿ ಭೋರ್ಗರೆಯುವ ನದಿಯಾಯಿತು ಎಂದು ಬಣ್ಣಿಸುವುದು ವಾಡಿಕೆ.

ಕುವೆಂಪು ಅವರು ಬದುಕಿದ್ದಾಗಲೇ ತಮ್ಮ ಕೃತಿಗಳನ್ನು ಇಂಗ್ಲಿಷ್ ಮತ್ತು ಇತರ ಯುರೋಪಿಯನ್ ಭಾಷೆಗಳಿಗೆ ಅನುವಾದಿಸಿದ್ದರೆ ನೊಬೆಲ್ ಪ್ರಶಸ್ತಿ ಸಿಗುತ್ತಿತ್ತು. ಆದರೆ, ಕುವೆಂಪು ಅವರು ಎಂದೂ ಹೆಸರು ಮತ್ತು ಖ್ಯಾತಿ ಗಳಿಸಬೇಕು ಎಂದುಕೊಂಡವರಲ್ಲ. ಅವರು ಪ್ರಚಾರವನ್ನು ವಿರೋಧಿಸುತ್ತಿದ್ದ ಕಾರಣ ಆ ಸಮಯದಲ್ಲಿ ಅನುವಾದಕರು ಅವರನ್ನು ಸಂಪರ್ಕಿಸಲಿಲ್ಲ.

ಕುವೆಂಪು ಅವರ 'ರಾಮಾಯಣ ದರ್ಶನಂ' ಮಹಾಕಾವ್ಯ ಮತ್ತು ಇತರ ಕೃತಿಗಳ ಮೂಲಕ ವ್ಯಕ್ತಪಡಿಸಿರುವ ಜ್ಞಾನ ಮತ್ತು ತತ್ವಶಾಸ್ತ್ರವು ಆಧುನಿಕ ಜಗತ್ತಿಗೆ ಮುಖ್ಯ ಮತ್ತು ನಿರ್ಣಾಯಕವಾಗಿದೆ. ಏಕೆಂದರೆ ಜಗತ್ತು ಮಾನವಕುಲಕ್ಕೆ ಅಪಾಯವನ್ನುಂಟುಮಾಡುವ ಹಲವಾರು ಸವಾಲುಗಳನ್ನು ಎದುರಿಸುತ್ತಿದೆ. ಈ ವೇಳೆ ಕುವೆಂಪು ಅವರ 'ಪಂಚ ಮಂತ್ರ', 'ಸಪ್ತ ಸೂತ್ರ'ದ ಜೊತೆಗೆ 'ವಿಶ್ವಮಾನವ ಪ್ರಜ್ಞಾ' ಎಂಬ ಮತ್ತೊಂದು ತತ್ವವು ಸಾರ್ವತ್ರಿಕ ಪರಿಹಾರವಾಗಿದೆ. ಇದು ಪ್ರಸ್ತುತ ಶಾಂತಿ ಮತ್ತು ಸಾಮರಸ್ಯವನ್ನು ಕಂಡುಕೊಳ್ಳಲು ನಮಗೆ ಅಗತ್ಯವಾದ ನಿರ್ದೇಶನ ನೀಡುತ್ತದೆ. ಅಂತಿಮವಾಗಿ ಅವರ 'ಸರ್ವೋದಯ ಸೂತ್ರ'ದ ಬಗ್ಗೆ ನಾವು ಗಂಭೀರವಾಗಿ ಚಿಂತಿಸಿ, ಕಾರ್ಯಗತಗೊಳಿಸುವುದು ಅಗತ್ಯವಾಗಿದೆ. ಈ ಮೂಲಕ ನಾವು ಸಮಾನತೆ ಸಮಾಜವನ್ನು ಸಾಕಾರಗೊಳಿಸುವುದರ ಜೊತೆಗೆ ಇತರ ರಾಷ್ಟ್ರಗಳಿಗೆ ಮಾದರಿ ನೀಡಬಹುದು.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಈಗಾಗಲೇ ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿಗೆ ಶಿಫಾರಸು ಮಾಡಿದೆ. ಮಹಾಕವಿ ಕುವೆಂಪು ಅವರಿಗೆ ಮರಣೋತ್ತರವಾಗಿ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಬೇಕು. ಮಾನವೀಯ ಮತ್ತು ಸಮಕಾಲೀನ ಸಮಾಜದ ಹಿತದೃಷ್ಟಿಯಿಂದ ಅವರ ಸ್ಮರಣೆಯನ್ನು ಶಾಶ್ವತಗೊಳಿಸಬೇಕು ಎಂದು ಮನವಿ ಮಾಡುತ್ತೇನೆ. ಈ ಬಗ್ಗೆ ಮೈಸೂರಿನ 'ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್' ನೀಡಿರುವ ಮನವಿಯನ್ನೂ ಸಲ್ಲಿಸುತ್ತಿದ್ದೇನೆ ಎಂದು ದೇವೇಗೌಡರು ಪತ್ರದಲ್ಲಿ ತಿಳಿಸಿದ್ದಾರೆ.

ಬಹುರೂಪಿ ಜನಪದ ಉತ್ಸವಕ್ಕೆ ಚಾಲನೆ

• ಬೆಳವಣಿಗೆ ಪರಿಸರದಿಂದಾಗಿ ಉಂಟಾದ ಅಸಮಾನತೆ ನೀಗಿ ಸಮಾನತೆ ತರಲು ಸಾಂವಿಧಾನಿಕ ಮೀಸಲಾತಿ ಅವಶ್ಯ • ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಪ್ರತಿಪಾದನೆ

ಮೈಸೂರು, ಜ.11(ಎಸ್‌ಪಿಎನ್)– ಸಮಾನತೆಯೆಂಬ ಒಂದು ಹಿಡಿ ಬೀಜವನ್ನು ಭೂಮಿಗೆ ಎರಚಿದಾಗ ಆ ಬೀಜಗಳು ಬೇರೆಬೇರೆ ಭೂ ಪ್ರದೇಶದಲ್ಲಿ ಬೀಳುತ್ತವೆ. ಹಾಗೆ ಬಿದ್ದ ಬೀಜಗಳು ಆಯಾಯ ಪರಿಸರಕ್ಕೆ ಅನುಗುಣವಾಗಿ ಬೆಳೆಯುತ್ತವೆ. ಹಾಗಾಗಿ ದನಿ ಇಲ್ಲದವರಿಗೆ ಅವಕಾಶ ಕಲ್ಪಿಸಲು ಮೀಸಲಾತಿ ಮೂಲಕ ಅವಕಾಶ ನೀಡಲಾಗಿದೆ. ಇದು ಸಮಸಮಾಜ ನಿರ್ಮಾಣದ ಮೊದಲ ಹೆಜ್ಜೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದಲ್ಲಿ ರಂಗಾಯಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿರುವ ರಾಷ್ಟ್ರೀಯ ನಾಟಕೋತ್ಸವ–2026ರ 'ಬಹುರೂಪಿ ಬಾಬಾ ಸಾಹೇಬ್ ಸಮತೆಯೆಡೆಗೆ ನಡಿಗೆ ಬೆಳ್ಳಿಹಬ್ಬ–25ರ' ಅಂಗವಾಗಿ ನಡೆದ ಜನಪದ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಒಂದು ಬೀಜ ಜೌಗು ಪ್ರದೇಶದಲ್ಲಿ, ಮತ್ತೊಂದು ಬೀಜ ಕಪ್ಪು ಮಣ್ಣಿನಲ್ಲಿ, ಮಗದೊಂದು ಬೀಜ ಕಲ್ಲಿನ ಮೇಲೆ ಬೀಳಬಹುದು. ಆದರೆ, ಈ ಬೀಜಗಳು ಒಂದೇ ಆದರೂ ಅದರ ಬೆಳವಣಿಗೆ ಹಿಂದೆ ಪರಿಸರ ಬಹಳ ಮುಖ್ಯವಾಗುತ್ತದೆ. ಅದೇ ರೀತಿ, ಬೇರೆ ಬೇರೆ ವಾತಾವರಣದಲ್ಲಿ ಜನಿಸಿದ ಮಕ್ಕಳಿಗೆ ಸಮಸಮಾಜ ನಿರ್ಮಾಣಕ್ಕಾಗಿ ಸಂವಿಧಾನದಲ್ಲಿ ಮೀಸಲಾತಿ ಮೂಲಕ ಸಮಾನ ಅವಕಾಶ ಕಲ್ಪಿಸಿರುವ ಕುರಿತು ವಿವರಿಸಿದರು.

ಕಳೆದ ನಾಲ್ಕೈದು ವರ್ಷಗಳಿಂದ ಬಹುರೂಪಿ ನಾಟಕೋತ್ಸವವನ್ನು ಹತ್ತಿರದಿಂದ ಗಮನಿಸುತ್ತಿದ್ದೇನೆ. ಈ ಬಾರಿ ಬಹುರೂಪಿ ನಾಟಕೋತ್ಸವ ಬಹಳ ವಿಶೇಷತೆಯಿಂದ ಕೂಡಿದೆ. ಬೇರೆಬೇರೆ ರಾಜ್ಯಗಳಿಂದ ಆಗಮಿಸಿರುವ ರಂಗಭೂಮಿ ಕಲಾವಿದರು ಉತ್ತಮ ನಾಟಕಗಳನ್ನು ಪ್ರದರ್ಶಿಸಲಿ ಎಂದು ಆಶಿಸಿದರಲ್ಲದೆ, ಬಹುರೂಪಿ ನಾಟಕೋತ್ಸವಕ್ಕೂ ಮುನ್ನ ಉದ್ಘಾಟನೆಯಾಗಿರುವ ಜನಪದ ಉತ್ಸವ ಸಾರ್ವಜನಿಕರ ಗಮನ ಸೆಳೆಯುತ್ತಿದೆ ಎಂದರು.



ಬಹುರೂಪಿ ಜನಪದ ಉತ್ಸವಕ್ಕೆ ಕರ್ನಾಟಕ ಬಯಲಾಟ ಅಕಾಡೆಮಿಯ ಅಧ್ಯಕ್ಷ ಡಾ.ದುರ್ಗಾದಾಸ್ ಉದ್ಘಾಟಿಸಿದರು. ಈ ವೇಳೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಹಿರಿಯ ರಂಗಕರ್ಮಿ ಶಶಿಧರ್ ಭಾರಿಘಾಟ್, ರಂಗಭೂಮಿ ಕಲಾವಿದೆ ಡಾ.ಗೀತಾ ಸಿದ್ಧಿ, ರಂಗಾಯಣ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜನಪದ ಉತ್ಸವ ಸಂಚಾಲಕಿ ಗೀತಾ ಮೋಂಟಡ್ಕ ಹಲವರು ಉಪಸ್ಥಿತರಿದ್ದರು.

ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಅವರು, ಬಹುರೂಪಿ ಪೂರ್ವ ಸಿದ್ದತಾ ಸಭೆಯಲ್ಲಿ ಜಿಲ್ಲಾಡಳಿತ ನೀಡಿದ ಎಲ್ಲಾ ಸೂಚನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಕಾರ್ಯಕ್ರಮಕ್ಕೆ ಒಂದಿಷ್ಟು ಚ್ಯುತಿಬಾರದ ರೀತಿಯಲ್ಲಿ ಆಯೋಜನೆ ಮಾಡಿರುವುದು ಸಂತೋಷದ ವಿಷಯ ಎಂದರು.

ಅತ್ಯುತ್ತಮ ವಿಚಾರ: ಇದಕ್ಕೂ ಮುನ್ನ ಬಾಗಲಕೋಟೆಯ ಕರ್ನಾಟಕ ಬಯಲಾಟ ಅಕಾಡೆಮಿಯ ಅಧ್ಯಕ್ಷ ಡಾ.ದುರ್ಗಾದಾಸ್ ಮಾತನಾಡಿ, ನಿಮ್ಮ ಬಾರಕ್ಕೆ ಕುರ್ಚಿ ಅಲುಗಾಡಬಹುದು. ಆದರೆ, ಭೂಮಿ ಮಾತ್ರ ಅಲುಗಾಡುವುದಿಲ್ಲ. ನಮ್ಮ ಪೂರ್ವಜರು ಪ್ರತಿಭಟನಾ ಸಂಕೇತವಾಗಿ ಜನಪದವನ್ನು ಬಳಸಿಕೊಳ್ಳುತ್ತಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರು ರಂಗಾಯಣ ಬಹುರೂಪಿಯಲ್ಲಿ ಈ ಬಾರಿ ಜನಪದ ಉತ್ಸವ ಆಯೋಜಿಸಿರುವುದು ಉತ್ತಮ ವಿಚಾರ ಎಂದರು.

ಈ ಬಾರಿ ರಾಷ್ಟ್ರೀಯ ನಾಟಕೋತ್ಸವದಲ್ಲಿ 'ಬಹುರೂಪಿ ಬಾಬಾ ಸಾಹೇಬ್' ಶೀರ್ಷಿಕೆ ಎಲ್ಲರ ಗಮನ ಸೆಳೆಯುತ್ತಿದೆ. ಅಂಬೇಡ್ಕರ್ ಅವರ ಸಾಧನೆ, ಅವರು ಬೆಳೆದ ಪರಿಸರದ ಹಿನ್ನಲೆಯಲ್ಲಿ ಅವರು, ಶೋಷಿತ ವರ್ಗದ ದನಿಯಾಗಿ ಕೆಲಸ ಮಾಡಿದ್ದಾರೆ ಎಂದರೆ ತಪ್ಪಿಲ್ಲ. ಸಮಸಮಾಜ ನಿರ್ಮಾಣಕ್ಕಾಗಿ ಅಂಬೇಡ್ಕರ್ ಕೊಡುಗೆ ಅಪಾರ. ರಂಗಭೂಮಿಯಲ್ಲಿ ಅತೀ ಹೆಚ್ಚು ಪ್ರಸಿದ್ಧಿಗೊಂಡಿದ್ದ 'ಸಮುದ್ರ ಮಂಥನ' ನಾಟಕದ ಸಾರಂಶವನ್ನು ವಿವರಿಸಿದರು.

ಯಾರ ಆಕ್ಷೇಪವಿಲ್ಲ: ರಂಗಸಮಾಜದ ಸದಸ್ಯ, ಹಿರಿಯ ರಂಗಕರ್ಮಿ ಶಶಿಧರ್ ಭಾರಿಘಾಟ್ ಮಾತನಾಡಿ, ನಾವು ಐತಿಹಾಸಿಕ ಕ್ಷಣದಲ್ಲಿದ್ದೇವೆ. ಈ ಬಾರಿ ರಾಷ್ಟ್ರೀಯ ನಾಟಕೋತ್ಸವಕ್ಕೆ 'ಬಹುರೂಪಿ ಬಾಬಾ ಸಾಹೇಬ್' ಹೆಸರು ಸೂಚಿಸಿದಾಗ ರಂಗಸಮಾಜದ ಯಾರೊಬ್ಬ ಸದಸ್ಯರೂ ವಿರೋಧಿಸಲಿಲ್ಲ. ಬದಲಾಗಿ, ಇದರ ಯಶಸ್ಸಿಗೆ ಯಾವ ತರಹದ ಕಾರ್ಯಕ್ರಮ ಮಾಡಬೇಕು ಎಂಬುದರ ಕುರಿತು ಚಿಂತಿಸಿದ ಸಂದರ್ಭವನ್ನು ವಿವರಿಸಿದರು.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ 25 ವರ್ಷದ ಇತಿಹಾಸ ನೋಡಿದಾಗ, ಹಲವಾರು ವ್ಯಕ್ತಿತ್ವಗಳನ್ನು ಈ ಉತ್ಸವದಲ್ಲಿ ಕಾಣಬಹುದು. ರಾಜ್ಯ ಸರ್ಕಾರ ಈಗಾಗಲೇ ಬಸವಣ್ಣನವರ ಕಾರ್ಯಕ್ಷೇತ್ರವನ್ನ ಗುರುತಿಸಿ 'ಸಾಂಸ್ಕೃತಿಕ ನಾಯಕ' ಎಂದು ಘೋಷಣೆ ಮಾಡಲಾಗಿದೆ. ಅದೇ ರೀತಿ ಶೋಷಿತ ವರ್ಗದ ದನಿಯಾಗಿರುವ, ಸಮಸಮಾಜ ನಿರ್ಮಾಣಕ್ಕಾಗಿ ಕೆಲಸ ಮಾಡಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಾಧನೆಗೆ ಸಾಮಾಜಿಕ ನಾಯಕ ಇಲ್ಲವೇ ಜಾನಪದ ನಾಯಕ ಎಂದರೆ ತಪ್ಪಿಲ್ಲ. ಕಳೆದ 75 ವರ್ಷಗಳಲ್ಲಿ ಈಗ ನಮ್ಮ ಸಂವಿಧಾನ ಅಪಾಯ ಎದುರಿಸುತ್ತಿದೆ ಎಂಬ ಅನುಮಾನ ಕಾಡುತ್ತಿದೆ. ಈ ಹಿನ್ನಲೆಯಲ್ಲಿ ಸಂವಿಧಾನ ಪೀಠಿಕೆಯನ್ನು ಇಂದು ಜಾನಪದ ಹಾಡಾಗಿ ಪರಿವರ್ತಿಸಿರುವುದು ಸಂತೋಷದ ಸಂಗತಿ ಎಂದರು.

ರಂಗಭೂಮಿ ಕಲಾವಿದೆ ಡಾ.ಗೀತಾ ಸಿದ್ಧಿ ಮಾತನಾಡಿ, ಸಿದ್ಧಿ ಜನಾಂಗದಲ್ಲೇ ಪಿಎಚ್‌ಡಿ ಪದವಿ ಪಡೆದ ಏಕೈಕ ಮಹಿಳೆ ನಾನು. ನನ್ನ ಈ ಸಾಧನೆಗೆ ಬಾಬಾ ಸಾಹೇಬರ ಸಂವಿಧಾನವೇ ಕಾರಣ ಎಂದರು. ಈ ವೇಳೆ ರಂಗಾಯಣ ಉಪನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಜನಪದ ಉತ್ಸವ ಸಂಚಾಲಕಿ ಗೀತಾ ಮೊಂಟಡ್ಕ ಸೇರಿದಂತೆ ಇತರರು ಉಪಸ್ಥಿತರಿದ್ದರು. ಈ ವೇಳೆ ವಿವಿಧೆಡೆಯಿಂದ ಆಗಮಿಸಿದ್ದ ಜಾನಪದ ತಂಡಗಳು, ಗಾಯಕರು ಹಲವು ಜನಪದ ಹಾಡು, ನೃತ್ಯ ಪ್ರದರ್ಶಿಸಿ ಜನರ ಗಮನ ಸೆಳೆಯಿತು.

ವಿರಾಟ್ ಕೊಹ್ಲಿ ಅಬ್ಬರ; 4 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಮಣಿಸಿದ ಭಾರತ

ವಡೋದರ, ಜ.11(ವಿವಿಹೆಚ್)– ರನ್ ಮೆಷಿನ್ ವಿರಾಟ್ ಕೊಹ್ಲಿ ಹಾಗೂ ಉಪ ನಾಯಕ ಶ್ರೇಯಸ್ ಅಯ್ಯರ್ ಅವರ ಸಮಯೋಚಿತ ಆಟದ ನೆರವಿನಿಂದ ಆತಿಥೇಯ ಭಾರತ ತಂಡ, ಪ್ರವಾಸಿ ನ್ಯೂಜಿಲೆಂಡ್ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿತು.

ಇಲ್ಲಿನ ಬಿಸಿಎ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಭಾರತ ಮತ್ತು ನ್ಯೂಜಿಲೆಂಡ್ ನಡುವಣ ಮೊದಲ ಏಕದಿನ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ನಿಗದಿತ 50 ಓವರ್‌ಗಳಲ್ಲಿ ಎಂಟು ವಿಕೆಟ್ ನಷ್ಟಕ್ಕೆ 300 ರನ್ ಗಳಿಸಿತು. ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಭಾರತ ತಂಡ 49 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 306 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟ್ ಮಾಡಿದ ಕಿವೀಸ್ ಬಳಗಕ್ಕೆ ಡೆವೊನ್ ಕಾನ್ವೆ ಹಾಗೂ ಹೆನ್ರಿ ನಿಕೋಲ್ಸ್ ಉತ್ತಮ ಆರಂಭ ನೀಡಿದರು. ಇವರಿಬ್ಬರು ಮೊದಲ ವಿಕೆಟ್‌ಗೆ ಶತಕದಾಟದ (117 ರನ್) ಜೊತೆಯಾಟ ಒದಗಿಸಿದರು. ಕಾನ್ವೆ 56 ರನ್ ಗಳಿಸಿದರೆ ನಿಕೋಲ್ಸ್ 62 ರನ್ ಗಳಿಸಿ ಔಟ್ ಆದರು.

ಬಳಿಕ ಬಂದ ಡೆರಿಲ್ ಮಿಚೆಲ್ 71 ಎಸೆತಗಳಲ್ಲಿ 5 ಬೌಂಡರಿ ಹಾಗೂ 3 ಸಿಕ್ಸರ್ ನೆರವಿನಿಂದ 84 ರನ್ ಗಳಿಸಿ ತಂಡ ಸವಾಲಿನ ಮೊತ್ತ ಕಲೆಹಾಕಲು ಸಹಕರಿಸಿದರು. ಆದರೆ ಬಳಿಕ ಬಂದ ಮತ್ಯಾರಿಂದಲೂ ನಿರೀಕ್ಷಿತ ಆಟ ಕಂಡುಬರಲೇ ಇಲ್ಲ. ಉಳಿದಂತೆ ವಿಲ್ ಯಂಗ್ 12, ಗ್ಲೆನ್ ಫಿಲಿಪ್ಸ್ 12, ಮಿಚೆಲ್ ಹೇ 18, ನಾಯಕ ಮೈಕೆಲ್ ಬ್ರೇಸ್‌ವೆಲ್ 16, ಫೋಕ್ಸ್ 1, ಕ್ರಿಸ್ಟಿಯಾನ್ ಕ್ಲಾರ್ಕ್ ಅಜೇಯ 24 ರನ್ ಹಾಗೂ ಕೈಲ್ ಜೇಮಿಸನ್ ಅಜೇಯ 8 ರನ್ ಗಳಿಸಿದರು.



ಸಿಕ್ಸರ್ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟ ಕನ್ನಡಿಗ ಕೆ.ಎಲ್.ರಾಹುಲ್

ಟೀಂ ಇಂಡಿಯಾ ಪರ ಸಿರಾಜ್, ಹರ್ಷಿತ್ ರಾಣಾ ಮತ್ತು ಪ್ರಸಿದ್ಧ್ ಕೃಷ್ಣ ತಲಾ 2 ವಿಕೆಟ್ ಕಬಳಿಸಿದರು. ಕುಲ್ದೀಪ್ ಯಾದವ್ 1 ವಿಕೆಟ್ ಕಿತ್ತರು.

ಈ ಸ್ಪರ್ಧಾತ್ಮಕ ಮೊತ್ತ ಬೆನ್ನತ್ತಿದ ಭಾರತ ತಂಡಕ್ಕೆ ವಿರಾಟ್ ಕೊಹ್ಲಿ ನೆರವಾದರು. 91 ಎಸೆತಗಳಲ್ಲಿ 8 ಬೌಂಡರಿ, 1 ಸಿಕ್ಸರ್ ಸಹಿತ 93 ರನ್ ಗಳಿಸಿ ತಂಡದ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದರು. ಶ್ರೇಯಸ್ ಅಯ್ಯರ್ 49 ರನ್ ಗಳಿಸಿ, ವಿರಾಟ್ ಕೊಹ್ಲಿಗೆ ಸಾಥ್ ನೀಡಿದರು.

ಇನ್ನು ಆರಂಭಿಕರಾಗಿ ಬಂದ ನಾಯಕ ಗಿಲ್ 51 ರನ್ ಗಳಿಸಿದರೆ, ರೋಹಿತ್ ಶರ್ಮಾ 26 ರನ್ ಗಳಿಸಿದರು. ಜಡೇಜಾ 4 ರನ್ ಗಳಿಗೆ ಸುಸ್ತಾದರೆ, ಹರ್ಷಿತ್ ರಾಣಾ 29 ರನ್ ಕಲೆಹಾಕಿದರು.

ಕೊನೆಯಲ್ಲಿ ಅಬ್ಬರಿಸಿದ ಕೆ.ಎಲ್.ರಾಹುಲ್ ಅಜೇಯರಾಗಿ 29 ರನ್ (2 ಬೌಂಡರಿ, 1 ಸಿಕ್ಸರ್) ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು. ವಾಷಿಂಗ್ಟನ್ ಸುಂದರ್ 7 ರನ್ ಗಳಿಸಿ ಅಜೇಯರಾಗಿ ಉಳಿದರು.

ಕಿವೀಸ್ ಪರ ಕೈಲ್ ಜೇಮಿಸನ್ ಪ್ರಮುಖ ನಾಲ್ಕು ವಿಕೆಟ್ ಪಡೆದು ಗಮನ ಸೆಳೆದರು. ಆದಿತ್ಯ ಅಶೋಕ್ ಮತ್ತು ಕ್ರಿಸ್ಟಿಯಾನ್ ಕ್ಲಾರ್ಕ್ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ವಿರಾಟ್ ಕೊಹ್ಲಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ವಿರಾಟ್ ಕೊಹ್ಲಿ ದಾಖಲೆ

ನ್ಯೂಜಿಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ 93 ರನ್ ಗಳಿಸಿದ ವಿರಾಟ್ ಕೊಹ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನೂತನ ದಾಖಲೆ ಮಾಡಿದರು. ಈ ಪಂದ್ಯದಲ್ಲಿ 25 ರನ್ ಕಲೆಹಾಕಿದ ಕೂಡಲೇ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 28000 ರನ್‌ಗಳ ಗಡಿ ದಾಟಿದರು. ಆ ಮೂಲಕ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಕಲೆಹಾಕಿದ ಆಟಗಾರರ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದರು.



ಮೊದಲು ಈ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದ ಶ್ರೀಲಂಕಾದ ಬ್ಯಾಟ್ಸ್‌ಮನ್ ಕುಮಾರ ಸಂಗಕ್ಕಾರ 28016 ರನ್ ಕಲೆಹಾಕಿದ್ದರು. ಇದೀಗ ಆ ದಾಖಲೆ ಮುರಿದ ವಿರಾಟ್ ಎರಡನೇ ಸ್ಥಾನಕ್ಕೆ ಜಿಗಿದಿದ್ದಾರೆ.

ಈ ಪಟ್ಟಿಯಲ್ಲಿ ಭಾರತದ ಮಾಜಿ ಆಟಗಾರ ಸಚಿನ್ ತೆಂಡೂಲ್ಕರ್ ಅಗ್ರಸ್ಥಾನದಲ್ಲಿದ್ದು, ಅವರು ಬರೋಬ್ಬರಿ 34357 ರನ್ ಕಲೆಹಾಕಿದ್ದಾರೆ.

ಮಾತೃಭಾಷೆಯಿಂದಷ್ಟೇ ವಿವೇಕ, ವಿಚಾರ, ಸಾಂಸ್ಕೃತಿಕ ಪ್ರಜ್ಞೆ

ಕನ್ನಡ ಹಬ್ಬ, ಕವಿಗೋಷ್ಠಿ, ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಡಾ.ವೈ.ಡಿ.ರಾಜಣ್ಣ ಅಭಿಮತ

ಮೈಸೂರು,ಜ.11–ಮಾತೃಭಾಷೆಯಿಂದ ಮಾತ್ರವೇ ವಿವೇಕ, ವಿಚಾರ ಮತ್ತು ಸಾಂಸ್ಕೃತಿಕ ಪ್ರಜ್ಞೆ ಬೆಳೆಯಲು ಸಾಧ್ಯ ಎಂದು ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ ಅಭಿಪ್ರಾಯಪಟ್ಟರು.

ಕೋಲಾರದ ಸ್ವರ್ಣಭೂಮಿ ಫೌಂಡೇಷನ್, ರೋಟರಿ ಕ್ಲಬ್ ಜಿಲ್ಲೆ 3191 ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ವಿಜಯನಗರದ ಕನ್ನಡ ಸಾಹಿತ್ಯ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ಕನ್ನಡಹಬ್ಬವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡಿಗರು ಮತ್ತು ಕನ್ನಡದ ನಡುವೆ ಕರುಳಬಳ್ಳಿಯ ಸಂಬಂಧವಿದೆ. ಆದ್ದರಿಂದ ಮಕ್ಕಳಿಗೆ ಕನ್ನಡದ ಬಗ್ಗೆ ಅರಿವು ಮೂಡಿಸಿ, ಪ್ರೀತಿ, ಅಭಿಮಾನ, ಕನ್ನಡದ ಪುಸ್ತಕಗಳ ಪ್ರೀತಿ ಬೆಳೆಸಬೇಕು ಎಂದು ಕರೆ ನೀಡಿದರು.

ಕವಿ ಕೆ.ಎಸ್.ನಿಸಾರ್ ಅಹಮದ್ ಅವರ ಆಶಯದಂತೆ ಕನ್ನಡ ಉತ್ಸವ ನಿತ್ಯೋತ್ಸವ ಆಗಬೇಕು. ಪ್ರತಿಯೊಬ್ಬರಲ್ಲೂ ಕನ್ನಡದ ಸಾಫ್ಟ್‌ವೇರ್ ಇದೆ. ಅದನ್ನೂ ಚಾಲೂ ಮಾಡಬೇಕು ಎಂದ ಅವರು, ನಮ್ಮ ಮಕ್ಕಳು ಉದ್ಯೋಗ ಪಡೆಯಲು ಇಂಗ್ಲಿಷ್ ಮಾಧ್ಯಮದಲ್ಲಿ ಓದಬೇಕು ಎಂಬ ಸ್ಥಿತಿ ಬಂದಿರುವುದು ದುರಂತ ಎಂದು ವಿಷಾದಿಸಿದರು.

ತಂತ್ರಜ್ಞಾನ ಕುಟುಂಬಗಳನ್ನು ವಿಭಜಿಸುತ್ತಿದೆ. ಮಾನವೀಯ ಸಂಬಂಧಗಳನ್ನು ಕಡಿಮೆ ಮಾಡುತ್ತಿದೆ. ಕನ್ನಡದಿಂದ ಮಾತ್ರ ನೆಮ್ಮದಿ ಬದುಕು ಸಾಧ್ಯ. ಕನ್ನಡ ಉಳಿಸಿ, ಬೆಳೆಸಲು ಸಾಹಿತಿಗಳು–ಕಲಾವಿದರ ಜೊತೆಗೆ ಹೋರಾಟಗಾರರ ಪಾತ್ರವೂ ಇದೆ ಎಂದರು.



ಕೋಲಾರದ ಸ್ವರ್ಣಭೂಮಿ ಫೌಂಡೇಷನ್, ರೋಟರಿ ಕ್ಲಬ್ ಜಿಲ್ಲೆ 3191 ಮೈಸೂರು ಜಿಲ್ಲಾ ಕಸಾಪ ಸಹಯೋಗದಲ್ಲಿ ಭಾನುವಾರ ಕನ್ನಡ ಸಾಹಿತ್ಯ ಭವನದಲ್ಲಿ ಏರ್ಪಡಿಸಿದ್ದ ಕನ್ನಡಹಬ್ಬವನ್ನು ಡಾ.ವೈ.ಡಿ. ರಾಜಣ್ಣ ಉದ್ಘಾಟಿಸಿದರು. ಮಡ್ಡೀಕೆರೆ ಗೋಪಾಲ್, ಅಂಶಿ ಪ್ರಸನ್ನಕುಮಾರ್, ಟಿ.ತ್ಯಾಗರಾಜ್, ಬಿ.ಶಿವಕುಮಾರ್, ಶರಣಪ್ಪ ಗಬ್ಬೂರ್, ಇಂಚರ ನಾರಾಯಣಸ್ವಾಮಿ, ಸುಬ್ಬರಾಮಯ್ಯ ಬಿ.ನಾಗೇಶ್, ಲಯನ್ ಕುಮಾರ್, ಕೆ.ಎಸ್.ರಾಜೇಗೌಡ ಇದ್ದರು.

ಪ್ರಶಸ್ತಿ ಪ್ರದಾನ

ಎಚ್.ಡಿ. ಕೋಟೆಯ ಪ್ರಶಾಂತ್‌ಕುಮಾರ್ ಗಂಗೊಳ್ಳಿ, ವಿ.ಸಚಿನ್, ಮೈಸೂರಿನ ಟಿ.ತ್ಯಾಗರಾಜು, ಲಯನ್ ಕುಮಾರ್, ಎನ್. ಅಮರನಾಥ್, ಸಿ.ವಿ.ರವೀಂದ್ರ, ದೊಡ್ಡ ಹುಂಡಿಯ ಸರಳಾದೇವಿ, ಗೆಜ್ಜಗಳ್ಳಿಯ ಸಿ.ಎಸ್. ಮಮತಾ, ಬೆಂಗಳೂರಿನ ಬಿ. ನಾಗೇಶ್, ಮೌಲಲಿ ಕೆ.ಅಲಗೂರ, ಕೆ.ಆರ್. ಪೇಟೆಯ ಕೆ.ಎಸ್. ರಾಜೇಗೌಡ, ಕೋಲಾರದ ಆರ್.ವಿ.ರಮಣ, ಹಾವೇರಿಯ ಅನಿತಾ ಮಂಜುನಾಥ್, ಮೂಡಬಿದಿರೆಯ ಅನಿಲ್ ರೂಬೆನ್ ಮೆಂಡೇನ್ಸಾ, ಶಿವಮೊಗ್ಗದ ಶಿಲ್ಪಾವತಿ ಕಾವ್ಯಶಿಲ್ಪ, ಮಾಲೂರಿನ ಎನ್.ಎಸ್.ಮಾಲತಿ, ಮಂಗಳೂರಿನ ಡಾ.ಆರ್.ಚಂದ್ರಶೇಖರ್, ಬಂಗಾರಪೇಟೆಯ ಎಚ್. ಸುಪ್ರಿಯಾ, ಚಾಮ ರಾಜನಗರದ ಬಿ.ಪ್ರಸಾದ್, ಪವನ್ ಜಯರಾಂ, ಶಿವು, ಅರಸೀಕೆರೆಯ ವೈ.ಎಸ್. ಮಾರುತಿ ಯಾದಾಪುರ ಅವರಿಗೆ ಸ್ವರ್ಣಭೂಮಿ ಸ್ಟಾರ್ ಅಚೀವರ್ಸ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಕನ್ನಡ ಕಟ್ಟುವ ಕೆಲಸ ನಿರಂತರವಾಗಿ ನಡೆಯಬೇಕು ಎಂದು ಆಶಿಸಿದರು.

ಭುವನೇಶ್ವರಿ ಭಾವಚಿತ್ರಕ್ಕೆ ಸಾಹಿತಿ ಶರಣಪ್ಪ ಗಬ್ಬೂರ್ ಪುಷ್ಪಾರ್ಚನೆ ಮಾಡಿದರು. ರಂಗ ಇಂಚರ ಟ್ರಸ್ಟ್ ಅಧ್ಯಕ್ಷ ಇಂಚರ ನಾರಾಯಣಸ್ವಾಮಿ ಕವಿಗೋಷ್ಠಿಗೆ ಚಾಲನೆ ನೀಡಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕೋಲಾರ ಜಿಲ್ಲಾಧ್ಯಕ್ಷ ಟಿ.ಸುಬ್ಬರಾಮಯ್ಯ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಜಿಲ್ಲಾ ಕಸಾಪ ಉಪಾಧ್ಯಕ್ಷ ಟಿ.ತ್ಯಾಗರಾಜ್, ಬೆಂಗಳೂರು ಜಾಗೃತಿ ಟ್ರಸ್ಟಿನ ಅಧ್ಯಕ್ಷ ಬಿ. ನಾಗೇಶ್, ಮೈಸೂರು ಸಮರ್ಪಣೆ ಟ್ರಸ್ಟ್ ಅಧ್ಯಕ್ಷ ಲಯನ್ ಕುಮಾರ್, ಕೆ.ಆರ್. ಪೇಟೆ ತಾ. ಪ್ರಗತಿಪರ ರೈತ ಕೆ.ಎಸ್.ರಾಜೇಗೌಡ ಮುಖ್ಯಅತಿಥಿಗಳಾಗಿದ್ದರು. ಸ್ವರ್ಣ ಭೂಮಿ ಫೌಂಡೇಷನ್ ಅಧ್ಯಕ್ಷ ಬಿ. ಶಿವಕುಮಾರ್ ಪ್ರಾಸ್ತಾವಿಕ ಭಾಷಣ ಮಾಡಿ, ಸ್ವಾಗತಿಸಿದರು.

ಕವಿಗೋಷ್ಠಿಯಲ್ಲಿ ಪ್ರಸಾದ್ ನಿಡಸಾಲೆ, ಎ.ಕೆ.ತೇಜಸ್, ಜೆ.ಕೆ. ಬಸವರಾಜು, ಭೀಮೇಶ್ ತಳವಾರ್, ಎಎಸ್‌ಕೆ ಸ್ವಾಮಿ, ಶಾಂತಕುಮಾರ್ ಹರವೆ, ಶಿವರಾಜ್, ಎಸ್.ಆರ್.ಗೀತಾಭಾರತಿ, ಬನಶ್ರೀ, ಸಿರಿಗಂಧ ರಾಮಕೃಷ್ಣ, ನಿಶಾ ಮುಳುಗುಂದ, ಅನುರಾಧ ಸಿಂಗಾನಲ್ಲೂರು, ಡಿ.ರಾಕೇಶ್ ವೀರಾಪುರ, ವೈಶಾಲಿ ಯಾದವ್, ನಾ.ಭಾ. ಕೆಂಪರಾಜು ಶಾಂತಲಾ, ಶಾರದಮ್ಮ, ಲಕ್ಷ್ಮೀ, ಸಲ್ಮಾಬಾನು, ಗುರುಗೌತಮ್, ಜ್ಯೋತಿ ಸೋಮರಾಜು, ಸಂಧ್ಯಾ ನಾವಿ, ಶಿವಾನಿ, ಸಹನಶ್ರೀ ಭಾಗವಹಿಸಿದ್ದರು. ಬೆಳಗಾವಿಯ ಶಾಯಶ್ರೀ ಹಾಗೂ ಶಾಂತಲಾ ಪ್ರಶಾಂತ ಉದೋಶಿ, ಪಿರಿಯಾಪಟ್ಟಣದ ದೇನಿಶ, ಹೂಟಗಳ್ಳಿಯ ಎಂ.ಪಿ. ಗೀತಾ ಮತ್ತು ತಂಡದವರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

